ಸಂಪುಟ: 14 Volume ಸಂಚಿಕೆ: 96 Issue ಪುಟಗಳು 08 Pages ಭಾನುವಾರ 19 ಜುಲೈ 2026 ₹4 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಇನ್ನೊಬ್ಬರ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ ನಮ್ಮ ಹುಚ್ಚುತನ ನಮಗೆ ಕಾಣಿಸದು.

–ಶಿವರಾಮ ಕಾರಂತ



ಬೆಂಗಳೂರು: ಮಾರಿಷಸ್ ರಿಪಬ್ಲಿಕ್ ನ ವಿದೇಶಾಂಗ ವ್ಯವಹಾರಗಳು, ಪ್ರಾದೇಶಿಕ ಏಕೀಕರಣ ಹಾಗೂ ಅಂತರರಾಷ್ಟ್ರೀಯ ವ್ಯಾಪಾರದ ಸಚಿವರಾದ Narsing-hen Hambyrajen ಅವರ ನೇತೃತ್ವದ ನಿಯೋಗವು ಇಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿತು.

## ಸಾಲ ಬಾಧೆ ತಾಳಲಾರದೆ ರೈತ ಆತ್ಮಹತ್ಯೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಮಳೆಯ ಕೊರತೆಯಿಂದ ಬೆಳೆ ಬಾರದೆ ಇರುವುದರಿಂದ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ತಡವಲಗಾ ಗ್ರಾಮದಲ್ಲಿ ನಡೆದಿದೆ.

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ತಡವಲಗಾ ಗ್ರಾಮದ ನಾಗಪ್ಪ ಭೀಮಶ್ಯಾ ಅಥರ್ಗಾ (57) ಆತ್ಮಹತ್ಯೆ ಮಾಡಿಕೊಂಡ ರೈತರಾಗಿದ್ದು ಗ್ರಾಮದ ತೋಟದ ವಸತಿಯಲ್ಲಿ ನೇಣು ಬಿಗಿದುಕೊಂಡು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತ ರೈತರು ಕೋಟಕ್ ಮಹೀಂದ್ರ ಬ್ಯಾಂಕ್‌ನಲ್ಲಿ ಸುಮಾರು ₹15 ಲಕ್ಷ, ತಡವಲಗಾ ಸಹಕಾರಿ ಸಂಘದಲ್ಲಿ ₹65 ಸಾವಿರ ಹಾಗೂ ಖಾಸಗಿಯಾಗಿ ಸುಮಾರು ₹5 ಲಕ್ಷ ಸಾಲ ಪಡೆದಿದ್ದರು ಎನ್ನಲಾಗಿದೆ.

ಮಳೆಯ ಕೊರತೆಯಿಂದ ಕಬ್ಬಿನ ಬೆಳೆ ಒಣಗಿ



ಹೋಗಿದ್ದು, ಸಾಲ ಮರುಪಾವತಿ ಹೇಗೆ ಮಾಡುವುದು ಎಂಬ ಚಿಂತೆಯಿಂದ ಮನನೊಂದು ಈ ಕೃತ್ಯ ಎಸಗಿರಬಹುದೆಂದು ಶಂಕಿಸಲಾಗಿದೆ. ಘಟನೆ ಕುರಿತು ಹೊರ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

## ಜಮೀನುಗಳಿಗೆ ದಾರಿ ಕಲ್ಪಿಸಲು ಮನವಿ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ರೈತರ ಹೊಲಗಳಿಗೆ ಹಾಗೂ ಸ್ಮಶಾನ ಭೂಮಿಗೆ ತೆರಳಲು ದಾರಿ ಕಲ್ಪಿಸಿಕೊಡುವಂತೆ ಆಗ್ರಹಿಸಿ, ತಾಲೂಕಿನ ಕಪ್ಪರಗಾಂವ ಗ್ರಾಮಸ್ಥರು ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲಗೆ ಬರೆದ ಮನವಿ ಪತ್ರ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲಗೆ ಸಲ್ಲಿಸಿದರು.

ಕಪ್ಪರಗಾಂವ ಗ್ರಾಮ ಸಹಿರಿಯ ಮುಖಂಡ ಖಾಜಾ ಪಟೇಲ್ ಮಾತನಾಡಿ, ಕಪ್ಪರಗಾಂವ ಗ್ರಾಮದ ಹಬೀಬಾಬ ಕುತಬೋದ್ದಿನ್ ಹೊಲಗಳಿಗೆ ಹೋಗುವ ರಸ್ತೆ ಬಂದ ಮಾಡಿರು ಕಾರಣ ಸರ್ವೆ 88ರಿಂದ 97ರ ಸರ್ವೆ ವರೆಗಿನ ಹೊಲಗಳಿಗೆ ಹೋಗಲು ದಾರಿ ಇಲ್ಲದಂತಾಗಿದೆ. ರೈತರ ಹಿತದೃಷ್ಟಿಯಿಂದ ಬಂದ ಮಾಡಲಾದ ರಸ್ತೆ ತೆರವುಗೊಳಿಸಬೇಕು ಎಂದು ಮನವಿ ಮಾಡಿದರು.

ಗ್ರಾಮದ ಮುಖಂಡ ಬಂಡೇಪ್ಪ ಜಮಾದಾರ ಮಾತನಾಡಿ, ಕಪ್ಪರಗಾಂವ ಗ್ರಾಮದ ಸರ್ವೆ 88ರಿದ



97ರ ವರಿಗಿನ ಸರ್ವೆಗಳು ಸೇರಿ ಹುಡಗಿ ವ್ಯಾಪ್ತಿಯ ಹೊಲಗಳಿಗೆ ಹೋಗಲು ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿ 21 ಲಕ್ಷ ಅನುದಾನದಲ್ಲಿ ರಸ್ತೆ ನಿರ್ಮಾಣ ಮಾಡಲಾಗಿದೆ. ಸಂಬಂಧ ಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಶಾಶ್ವತ ಪರಿಹಾರ ಕಲ್ಪಿಸಿಕೊಡಬೇಕು ಎಂದರು.

ಈ ಸಂದರ್ಭದಲ್ಲಿ ಜಗನ್ನಾಥ ರಾಯಪಳ್ಳಿ, ಜುಬೀರಮಿಯಾ ತಾಹೀರಮಿಯ, ಪಾಶಾಮಿಯಾ ರಂಜೋಳ, ರೇವಣಸಿದ್ದಪ್ಪ, ಆಕಾಶ, ಆಸೀಫ್, ಶ್ರೀಮಂತ ವರ್ಮಾ, ಭೀಮಣ್ಣ ವಾಲಿಕಾರ, ಸಂತೋಷ ಯಾದಗೀರ, ನೂರಪಾಶಾ ಬಂಬೂಳಗಿ, ಪ್ರಶಾಂತರೆಡ್ಡಿ, ನಬಿಸಾಬ, ಫರೀದಸಾಬ ವಾಡಿವಾಲಿ ಸೇರಿ ಅನೇಕರಿದ್ದರು.

## ಹೆಗ್ಗನಹಳ್ಳಿ ವಾರ್ಡಿನ ಬಿಜೆಪಿ ನೂತನ ಅಧ್ಯಕ್ಷ ಕಣ್ಣಪ್ಪ ಆಯ್ಕೆ



ಪೀಣ್ಯ ದಾಸರಹಳ್ಳಿ: ಕ್ಷೇತ್ರದ ಹೆಗ್ಗನಹಳ್ಳಿ ವಾರ್ಡಿನ ಬಿಜೆಪಿ ನೂತನ ಅಧ್ಯಕ್ಷ ಕಣ್ಣಪ್ಪ ಮತ್ತು ಶಿವಪುರ್ ವಾರ್ಡಿನ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಶಿವಲಿಂಗಯ್ಯ ಅವರಿಗೆ ಹೆಗ್ಗನಹಳ್ಳಿಯ ಹಿಂದುಳಿದ ವರ್ಗಗಳ ಪ್ರಮುಖರಾದ ರಾಜಣ್ಣ ವಿಶ್ವಕರ್ಮ, ರಂಗಸ್ವಾಮಿ, ಪುಟ್ಟಸ್ವಾಮಿ, ಮಂಜುನಾಥ್, ಪ್ರಕಾಶ್ ಆಚಾರಿ, ನಾಗರಾಜ್, ಪೀಳಪ್ಪ, ಮಂಜುನಾಥ್ ಬಿಜೆಪಿ ಮುಖಂಡರಾದ ಹಿರಿಯ ರಾಧಾಕೃಷ್ಣ ಶೆಟ್ಟರ್, ನಾಗೇಶ್ ಶೆಟ್ಟರ್, ಬಾಬು, ರಾಜಶೇಖರ್, ಮಹೇಶ್ ನಟರಾಜ್, ಅಶೋಕ್ ಕಾಳಾಚಾರ್ಯ ಸೇರಿದಂತೆ ಮುಂತಾದವರು ನೂತನ ಅಧ್ಯಕ್ಷ ಕಣ್ಣಪ್ಪ ಮತ್ತು ಶಿವಲಿಂಗಯ್ಯ ಅವರಿಗೆ ಹೂವು ಗುಚ್ಚು ನೀಡಿ ಸಿಹಿ ತಿನ್ನಿಸಿ ಶುಭ ಹಾರೈಸಿದರು.

## ದೇವೇಗೌಡರಿಗೆ ಪತ್ನಿ ವಿಯೋಗ ಕಂಬನಿ ಮಿಡಿದ ಈಶ್ವರ ಖಂಡ್ರೆ

**ಬೆಂಗಳೂರು:** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಧರ್ಮಪತ್ನಿ ಹಾಗೂ ಎಚ್.ಡಿ.ರೇವಣ್ಣ, ಕುಮಾರಸ್ವಾಮಿ, ಅವರ ತಾಯಿ ಚನ್ನಮ್ಮ ಅವರ ನಿಧನದ ಸುದ್ದಿ ಕೇಳಿ ತೀವ್ರ ನೋವಾಗಿದೆ. ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ಕರುಣಿಸಲಿ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸಂತಾಪ ಸೂಚಿಸಿದ್ದಾರೆ. ಈ ಅಗಲಿಕೆಯ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕುಟುಂಬವರ್ಗದವರಿಗೆ ಹಾಗೂ ಅಪಾರ ಅಭಿಮಾನಿಗಳಿಗೆ ಭಗವಂತ ನೀಡಲಿ, ಹಿರಿಯ ಆತ್ಮಕ್ಕೆ ಸದ್ಗತಿ ದೊರಕಲಿ ಎಂದು ಪ್ರಾರ್ಥಿಸಿದ್ದಾರೆ.

# ಕೃಷ್ಣಾ ಮೇಲ್ದಂಡೆ ಕಳೆ ಎಂದು?

## ಉತ್ತರ ಕರ್ನಾಟಕದ ದಶಕಗಳ ಕನಸು | 2,500 ಕೋಟಿ ರೂ. ಅನುದಾನ ಮಾತ್ರ ಬಿಡುಗಡೆ


• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಉತ್ತರ ಕರ್ನಾಟಕದ ದಶಕಗಳ ಕನಸಾದ ಕೃಷ್ಣಾ ಮೇಲ್ದಂಡೆ ಯೋಜನೆ–3 (ಯುಕೆಪಿ–3) ವೇಗ ಕಳೆದುಕೊಂಡಿದೆ. ಮುಳುಗಡೆ ಪ್ರದೇಶ–ನಾಲೆಗಳಿಗಾಗಿ ರೈತರಿಂದ ಜಮೀನು ಸ್ವಾಧೀನಪಡಿಸಿಕೊಳ್ಳಲು ತಗಲುವ ಒಟ್ಟು ಅಂದಾಜು ಮೊತ್ತದಲ್ಲಿ ಒಂದು ವರ್ಷದಲ್ಲಿ ಕೇವಲ ಶೇ. 3ರಷ್ಟು (2,500 ಕೋಟಿ ರೂ.) ಅನುದಾನ ಮಾತ್ರಬಿಡುಗಡೆಯಾಗಿದೆ.

**ಭೂಸ್ವಧೀನ ವಿಳಂಬ:** ಸರ್ಕಾರದ ಈ ಮಂದಗತಿಯ ಆರ್ಥಿಕ ಹೆಜ್ಜೆಯಿಂದಾಗಿ, ಮೂರು ವರ್ಷಗಳಲ್ಲಿ ಮುಗಿಯಬೇಕಾಗಿದ್ದ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳಲು ಹತ್ತಾರು ವರ್ಷಗಳು ಹಿಡಿಯುವ ಆತಂಕ ಎದುರಾಗಿದೆ. ಇದಕ್ಕೆ ಯಾರನ್ನು ದೂಷಿಸುವುದು ಎನ್ನುವ ಪ್ರಶ್ನೆಗೆ ಉತ್ತರ ಇಲ್ಲ.

**ಬೃಹತ್ ವೆಚ್ಚದ ಪಟ್ಟಿ:** ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519.6 ಮೀಟರ್‌ನಿಂದ 524.256ಮೀಟರ್‌ಗೆ ಹೆಚ್ಚಿಸುವ ಈ ಮಹತ್ವಾಕಾಂಕ್ಷಿ ಯೋಜನೆಗೆ ಅಗತ್ಯವಾದ ಭೂ ಸ್ವಾಧೀನಕ್ಕೆ ಸರ್ಕಾರ ಕಳೆದ ವರ್ಷ 72,000 ಕೋಟಿ ರೂ.ಗಳ ಸಿದ್ಧಪಡಿಸಿತ್ತು. ಸದ್ಯದ ಆರ್ಥಿಕ ಪರಿಸ್ಥಿತಿ ಯೋಜನೆಗೆ ವಿಳಂಬಕ್ಕೆ ಸಾಕ್ಷಿಯಾಗಿದೆ.





ಯುಕೆಪಿ– 3ರ ಯೋಜನೆಯಡಿ ಭೂಸ್ವಾಧೀನ ಪರಿಹಾರಕ್ಕೆ ಪ್ರಸಕ್ತ ಸಾಲಿನಲ್ಲಿ 3000 ಕೋಟಿ ರೂ. ಕಾಯ್ದಿರಿಸಲಾಗಿದೆ. ಪೂರಕ ಅಂದಾಜಿನಲ್ಲಿ ಇನ್ನಷ್ಟು ಅನುದಾನಕ್ಕೆ ಮನವಿ ಮಾಡಲಾಗುವುದು. ಇದರಲ್ಲಿ ಯಾವುದೇ ಸಂದೇಹ ಬೇಡ. ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಪರಿಹಾರಕ್ಕಾಗಿ ಹೆಚ್ಚಿನ ಅನುದಾನ ಒದಗಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು. ಇದರಲ್ಲಿ ನಾವು ಯಶಸ್ವಿಯಾಗುವುದು ಗ್ಯಾರಂಟಿ.

–ರಾಮಲಿಂಗಾರೆಡ್ಡಿ
ಜಲಸಂಪನ್ಮೂಲ ಸಚಿವ

### ಪತ್ರೆ ಬರೆದರೂ ಕಿಮ್ಮತ್ತಿಲ್ಲ

ಕಾಲಮಿತಿಯಲ್ಲಿ ಯೋಜನೆ ಮುಗಿಸಲು ವಾರ್ಷಿಕ ಕನಿಷ್ಠ 20,000 ಕೋಟಿ ರೂ. ಬೇಕು. ಆದರೆ ಸರ್ಕಾರ ನೀಡುತ್ತಿರುವುದು ಕೇವಲ 3,000 ಕೋಟಿ ರೂ. ಹೀಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಪರಿಹಾರ ಮತ್ತು ಪುನರ್ವಸತಿ ಆಯುಕ್ತರು ಹಾಗೂ ಕೃಷ್ಣಾ ಭಾಗ್ಯ ಜಲ ನಿಗಮವು ಹೆಚ್ಚಿನ ಅನುದಾನಕ್ಕಾಗಿ ಸರ್ಕಾರಕ್ಕೆ ಪತ್ರ ಬರೆದಿದ್ದರೂ ಸೂಕ್ತ ರೀತಿಯ ಸ್ಪಂದನೆ ಸಿಕ್ಕಿಲ್ಲ ಎಂದು ದೂರಲಾಗಿದೆ.

### ಸಂಪನ್ಮೂಲದ್ದೇ ಸವಾಲು!

- ಭೂಸ್ವಾಧೀನಕ್ಕೆ ಬೃಹತ್ ಮೊತ್ತದ ಹಣ ಹೊಂದಿಸಲು ಆರ್ಥಿಕ ಇಲಾಖೆ ಕಳೆದ ವರ್ಷ ಕೆಲವು ಪ್ರಮುಖ ಸಲಹೆ ನೀಡಿತ್ತು. ಅವು ಜಾರಿಯಾಗಿಲ್ಲ.
- ಇತರ ಇಲಾಖೆಗಳ ಅಭಿವೃದ್ಧಿ ಕಾರ್ಯಗಳ ಅನುದಾನದಲ್ಲಿ ಶೇ. 20ರಷ್ಟು ಕಡಿತಗೊಳಿಸಿ 16,000 ಕೋಟಿ ರೂ. ಕ್ರೋಢೀಕರಿಸುವ ಯೋಜನೆ ವಿಫಲವಾಗಿದೆ.
- ಐದು ಗ್ಯಾರಂಟಿ ಯೋಜನೆಗಳ ವೆಚ್ಚವನ್ನು ಕೊಂಚ ತಗ್ಗಿಸಿ, ಆ ಮೊತ್ತವನ್ನು ಯುಕೆಪಿ–3 ಭೂಸ್ವಾಧೀನಕ್ಕೆ ಬಳಸುವ ಯತ್ನಕ್ಕೂ ತಾಂತ್ರಿಕ ಕಾರಣ ಅಡ್ಡಿಯಾಗಿದೆ.

### ನೀಡಿದ್ದು ಕೇವಲ ಭರವಸೆ

ಕಳೆದ ವರ್ಷ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಭೂಸ್ವಾಧೀನಕ್ಕೆ ಪರಿಹಾರದ ದರವನ್ನು ನಿಗದಿಪಡಿಸಿತ್ತು. 2025–26ನೇ ಸಾಲಿನಿಂದಲೇ ಜಾರಿಗೆ ಬರುವಂತೆ ಪ್ರತಿ ವರ್ಷ 15,000ರಿಂದ 20,000 ಕೋಟಿ ರೂ. ಕಾಯ್ದಿರಿಸುವ ಭರವಸೆ ನೀಡಿದ್ದು, ಕಳೆದ ವರ್ಷ ಬಿಡುಗಡೆ ಮಾಡಿದ್ದು ಕೇವಲ 1,750 ಕೋಟಿ. 2026–27ನೇ ಸಾಲಿಗೆ 3,000 ಕೋಟಿ ರೂ. ಕಾಯ್ದಿರಿಸಲಾಗಿದ್ದು, ಈ ಪೈಕಿ ಮೊದಲ ತ್ರೈಮಾಸಿಕದಲ್ಲಿ 600 ರಿಂದ 750 ಕೋಟಿ ಮಾತ್ರ ಬಿಡುಗಡೆಯಾಗಿದೆ.

## ಚನ್ನಮ್ಮ ನಿಧನ

ಮಾಜಿ ಪ್ರಧಾನಿಗಳಾದ ಶ್ರೀ ಎಚ್.ಡಿ. ದೇವೇಗೌಡ ಅವರ ಪತ್ನಿ ಚನ್ನಮ್ಮ ಅವರ ನಿಧನದ ಸುದ್ದಿ ತಿಳಿದು ದುಃಖವಾಯಿತು. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬ ಹಾಗೂ ಬಂಧು ಮಿತ್ರರಿಗೆ ಈ ನೋವನ್ನು ಭರಿಸಿಕೊಳ್ಳುವ ಶಕ್ತಿ ಸಿಗಲಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.



## ಯಾದಗಿರಿ ಬರಪೀಡಿತ ಜಿಲ್ಲೆ ಘೋಷಿಸಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲೆಯನ್ನು ತೀವ್ರಬರಪೀಡಿತಪ್ರದೇಶ ಎಂದು ಘೋಷಿಸಬೇಕು ಹಾಗೂ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ತುರ್ತು ನೆರವು ನೀಡಬೇಕು ಎಂದು ಆಗ್ರಹಿಸಿ ರೈತ ಕೃಷಿ ಕಾರ್ಮಿಕರ ಸಂಘಟನೆ ಯಾದಗಿರಿ ಜಿಲ್ಲಾ ಸಂಘಟನಾ ಸಮಿತಿಯ ನೇತೃತ್ವದಲ್ಲಿ ನಗರದ ಪ್ರಮುಖ ವೃತ್ತವಾದ ಸುಭಾಷ್ ವೃತ್ತದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಶರಣಗೌಡ ಗೂಗಲ್ ಅವರು, ಈ ವರ್ಷ ಜಿಲ್ಲೆಯಲ್ಲಿ ವಾಡಿಕೆಗಿಂತ ಅತ್ಯಂತ ಕಡಿಮೆ ಮಳೆಯಾಗಿದ್ದು, ತೀವ್ರ ಬರ ಪರಿಸ್ಥಿತಿ ತಲೆದೋರಿದೆ.




ಜಿಲ್ಲೆಯ ಬಹುತೇಕ ಕೆರೆ, ಕಟ್ಟೆ ಹಾಗೂ ಕೊಳಗಳು ಸಂಪೂರ್ಣವಾಗಿ ಬತ್ತಿ ಹೋಗಿದ್ದು, ಬೋರ್‌ವೆಲ್‌ಗಳು ವಿಫಲವಾಗಿವೆ. ಜನರು ಹಾಗೂ ಜಾನುವಾರುಗಳು ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ. ಅಲ್ಪಸ್ವಲ್ಪ ಮಳೆಗೆ ನಂಬಿ ಬಿತ್ತನೆ ಮಾಡಿದ್ದ ಬೆಳೆಗಳು ಮಳೆಯ ಕೊರತೆ ಮತ್ತು ತೀವ್ರ ಉಷ್ಣಾಂಶದಿಂದಾಗಿ ಕಣ್ಣೆದುರೇ ಒಣಗಿ ಹೋಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

## ದೇವೇಗೌಡರಿಗೆ ಪತ್ನಿ ವಿಯೋಗ: ಸಂತಾಪ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಧರ್ಮಪತ್ನಿ ಹಾಗೂ ನನಗೆ ತಾಯಿ ಸಮಾನಾರಾಗಿದ್ದ ಶ್ರೀಮತಿ ಚನ್ನಮ್ಮ ಅವರ ನಿಧನದ ಸುದ್ದಿ ಕೇಳಿ ತೀವ್ರ ನೋವಾಗಿದೆ ಎಂದು ಮಾಜಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ. ನನ್ನ ರಾಜಕೀಯ ಗುರುಗಳಾದ ದೇವೇಗೌಡರ ಧರ್ಮ ಪತ್ನಿ ಚೆನ್ನಮ್ಮ ಅವರಿಗೆ ದೇವರ ಬಗ್ಗೆ ಅಪಾರ ಭಕ್ತಿ. ನನಗೂ ಹಲವಾರು ಬಾರಿ ಅವರ ಆಶೀರ್ವಾದ ಭಾಗ್ಯ ಸಿಕ್ಕಿದೆ. ಚೆನ್ನಮ್ಮ ಅವರ ಆತ್ಮಕ್ಕೆ ಶಾಂತಿ ದೊರಕಲಿ. ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿ ಅವರ ಕುಟುಂಬ ವರ್ಗ ಹಾಗೂ ಅಭಿಮಾನಿಗಳಿಗೆ ದೇವರು ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದು ಜಮೀರ್ ಅಹಮದ್ ಖಾನ್ ಸಂತಾಪ ಹೇಳಿಕೆಯಲ್ಲಿ ತಿಳಿಸಿದ್ದಾರೆ.




## ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಕ್ರಾಂತಿ

• ಮಲ್ಲಮ್ಮ ನುಡಿ ವಾರ್ತೆ ಹೈದರಾಬಾದ್

ದೇಶದ ಮೊದಲ ಖಾಸಗಿ ಕಕ್ಷೀಯ ರಾಕೆಟ್ ಉಡ್ಡಯನ ಮಾಡಿದ್ದು, ಬಾಹ್ಯಾಕಾಶ ಕ್ಷೇತ್ರದಲ್ಲಿ ದೇಶ ಹೊಸ ಕ್ರಾಂತಿಯಾಗಿದೆ. ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡ್ಡಯನ ಮಾಡಿ ಹೊಸ ದಾಖಲೆ ಮೆರೆದಿದೆ. ಈ ಮೂಲಕ ವಿಕ್ರಮ್ –1 ಇತಿಹಾಸ ಸೃಷ್ಟಿಸಿದೆ.

**ಯಶಸ್ವಿ ಉಡ್ಡಯನ:** ಇದು ನಿಜಕ್ಕೂ ಭಾರತೀಯರು ಹೆಮ್ಮೆ ಪಡುವ ವಿಚಾರವಾಗಿದೆ. ದೇಶದ ಬಾಹ್ಯಾಕಾಶ ಕ್ಷೇತ್ರವು ಹೊಸದೊಂದು ಮೈಲುಗಲ್ಲಿಗೆ ಈ ಕ್ಷಣವು ಸಾಕ್ಷಿಯಾಗಿದೆ. ಹೈದರಾಬಾದ್‌ನ ಸ್ಪೇಸ್–ಟೆಕ್ ಸ್ಟಾರ್ಟ್‌ಆಪ್ 'ಸ್ಕೈರೂಟ್ ಏರೋಸ್ಪೇಸ್' ನಿರ್ಮಿಸಿದ 'ವಿಕ್ರಮ್–1' ರಾಕೆಟನ್ನು ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ.

**ಏನಿದರ ವಿಶೇಷ?:** ವಿಕ್ರಮ್–1 ಬಹುಹಂತದ ಉಡಾವಣಾ ವಾಹನವಾಗಿದೆ. ಸುಮಾರು 350 ಕೆ.ಜಿ. ತೂಕದ ಸಣ್ಣ ಉಪಗ್ರಹಗಳನ್ನು ಭೂಮಿಯ ಕೆಳಹಂತದ ಕಕ್ಷೆಗೆ ಕೊಂಡೊಯ್ಯುವ ಸಾಮರ್ಥ್ಯವನ್ನು ವಿಕ್ರಮ್ –1 ಉಡಾವಣಾ ವಾಹನ ಹೊಂದಿದೆ.




### ಮೊದಲ ಕಕ್ಷೀಯ ರಾಕೆಟ್

ದೇಶದ ಮೊದಲ ಖಾಸಗಿ ಕಕ್ಷೀಯ ರಾಕೆಟನ್ನು ನೆರೆ ರಾಜ್ಯ ಆಂಧ್ರ ಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡ್ಡಯನ ಮಾಡಲಾಯಿತು. ಶನಿವಾರ ಮಧ್ಯಾಹ್ನ 12.05ಕ್ಕೆ ರಾಕೆಟ್ ನಭಕ್ಕೆ ಚಿಮ್ಮಿತು. ಖಾಸಗಿಯಾಗಿ ಅಭಿವೃದ್ಧಿಪಡಿಸಿದ ಭಾರತದ ಮೊದಲ ಕಕ್ಷೀಯ ರಾಕೆಟ್ ಇದಾಗಿದೆ ಎಂದು ವಿಶೇಷವಾಗಿದೆ. ಈ ರಾಕೆಟ್ ತಂತ್ರಜ್ಞಾನ ಪ್ರಾತ್ಯಕ್ಷಿಕೆಯ ಹತ್ತಾರು ಉಪಗ್ರಹ ಸಾಧನಗಳನ್ನು ನಭಕ್ಕೆ ತೊಂಡೊಯ್ದಿದೆ.

## ಸಂಪುಟ ವಿಸ್ತರಣೆ: ಖರ್ಗೆ ಜೊತೆ ಚರ್ಚೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸಂಪುಟ ವಿಸ್ತರಣೆಯ ರಗಳೆ ಇನ್ನೂ ಮುಂದುವರಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಡಿ.ಸಿಎಂ ಡಾ.ಜಿ.ಪರಮೇಶ್ವರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಸಚಿವ ಸಂಪುಟ ವಿಸ್ತರಣೆ ಸೇರಿದಂತೆ ರಾಜ್ಯದ ಪ್ರಸ್ತುತ ರಾಜಕೀಯ ಬೆಳವಣಿಗೆಗಳ ಕುರಿತು ಮಹತ್ವದ ಸಮಾಲೋಚನೆ ನಡೆಸಿದ್ದಾರೆ.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಕೂಡ ಉಪಸ್ಥಿತರಿದ್ದರು. ಸಭೆಯಲ್ಲಿ ಯಾವ ವಿಷಯಗಳ ಬಗ್ಗೆ ಚರ್ಚಿಸಲಾಯಿತು ಎಂಬ ಬಗ್ಗೆ ಬಹಿರಂಗಪಡಿಸಲಾಗಿಲ್ಲ. ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಈ ವರ್ಷದ ಡಿಸೆಂಬರ್‌ನಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಚುನಾವಣೆಗಳನ್ನು ನಡೆಸುವ ರಾಜ್ಯ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.



ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನಡೆಯುತ್ತಿರುವ ಕಾರಣ ಕಾಲಮಿತಿಯನ್ನು ವಿಸ್ತರಿಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದ ನಂತರ, ಡಿಸೆಂಬರ್‌ನಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಚುನಾವಣೆಗಳನ್ನು ನಡೆಸಲು ರಾಜ್ಯ ಸರ್ಕಾರ ಬದ್ಧವಾಗಿದೆ. –ಡಿ.ಕೆ. ಶಿವಕುಮರ್, ಮುಖ್ಯಮಂತ್ರಿ

### ಸ್ಥಳೀಯ ಸಂಸ್ಥೆ ಚುನಾವಣೆ ಶೀಘ್ರ

ಎಐಸಿಸಿ ಕಚೇರಿ ನಮ್ಮ ದೇವಾಲಯ. ನಾವು ಇದರೊಂದಿಗೆ ಬೆಳೆದಿದ್ದೇವೆ. ದೇವಾಲಯದಲ್ಲಿಯೇ ಪ್ರಧಾನ ಕಾರ್ಯದರ್ಶಿಯನ್ನು ಭೇಟಿಯಾಗುವುದು ನನ್ನ ಕರ್ತವ್ಯ... ಇಂದು ಬೆಂಗಳೂರು ಜಿಬಿಎಯ ಸ್ಥಳೀಯ ಸಂಸ್ಥೆ ಚುನಾವಣೆಯ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ದೊಡ್ಡ ನಿರ್ಧಾರವಿತ್ತು... ನಾವು ಅದನ್ನು ಯಾವುದೇ ಸಮಯದಲ್ಲಿ ಮುಂದೂಡುವುದಿಲ್ಲ ಎಂದಿದ್ದಾರೆ ಸಿಎಂ.

## ಆಸ್ಪತ್ರೆ ಸೇರಿದ್ದಾರೆ ಅಷ್ಟೇ, ಉಪವಾಸ ಮುಂದುವರಿದಿದೆ; ನನ್ನ ಅನುಮತಿ ಇಲ್ಲದೆ ಚಿಕಿತ್ಸೆ ಬೇಡ: ಸೋನಮ್ ವಾಂಗ್ಚುಕ್ ಪತ್ನಿ

## ರೈತರು ಇದ್ದರೆ ದೇಶ ಸುಭದ್ರವಾಗಿರಲು ಸಾಧ್ಯ

ದೇಶದ ಅನ್ನದಾತನಾದ ರೈತನು ರಾಷ್ಟ್ರದ ಬೆನ್ನೆಲುಬು. ರೈತರು ಶ್ರಮಪಟ್ಟು ಬೆಳೆದ ಬೆಳೆಯಿಂದಲೇ ದೇಶದ ಜನತೆಗೆ ಆಹಾರ ದೊರೆಯುತ್ತದೆ. ರೈತನು ಸಮೃದ್ಧನಾಗಿದ್ದರೆ ದೇಶವೂ ಸಮೃದ್ಧವಾಗಿರುತ್ತದೆ. ಆದ್ದರಿಂದ ರೈತರನ್ನು ಉಳಿಸುವುದು ಎಂದರೆ ದೇಶದ ಭವಿಷ್ಯವನ್ನು ಉಳಿಸುವಂತೆಯೇ.

## ಸಂಪಾದಕೀಯ


**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**




ಇತ್ತೀಚಿನ ದಿನಗಳಲ್ಲಿ ಅನಾವೃಷ್ಟಿ, ಅತಿವೃಷ್ಟಿ, ಬೆಳೆ ನಷ್ಟ, ಸಾಲದ ಹೊರೆ ಮತ್ತು ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗದ ಸಮಸ್ಯೆಗಳು ರೈತರನ್ನು ಸಂಕಷ್ಟಕ್ಕೆ ತಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರ ರೈತರಿಗೆ ಸಮಯಕ್ಕೆ ಸರಿಯಾಗಿ ಪರಿಹಾರ, ಬೆಳೆ ವಿಮೆ, ನೀರಾವರಿ ಸೌಲಭ್ಯ, ಗುಣಮಟ್ಟದ ಬೀಜ–ಗೊಬ್ಬರ ಹಾಗೂ ನ್ಯಾಯಯುತ ಬೆಲೆ ಒದಗಿಸಬೇಕು.

ರೈತರ ಪರಿಶ್ರಮಕ್ಕೆ ಸಮಾಜವೂ ಗೌರವ ನೀಡಬೇಕು. ರೈತನು ಕೇವಲ ತನ್ನ ಕುಟುಂಬಕ್ಕಲ್ಲ, ಇಡೀ ದೇಶದ ಆಹಾರ ಭದ್ರತೆಗೆ ದುಡಿಯುವ ಮಹಾನ್ ವ್ಯಕ್ತಿ. ರೈತರ ಕಲ್ಯಾಣವೇ ದೇಶದ ಅಭಿವೃದ್ಧಿಯ ಮೂಲ ಆಧಾರವಾಗಿದೆ.

"ರೈತ ಉಳಿದರೆ ದೇಶ ಉಳಿಯುತ್ತದೆ; ರೈತ ಸಮೃದ್ಧನಾದರೆ ದೇಶ ಸುಭದ್ರವಾಗಿರುತ್ತದೆ."

## ಅಂಬೇಡ್ಕರ ಭವನ ಜಾಗದ ಸಮಸ್ಯೆ ಬಗೆಹರಿಸಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ನಗರದ ಕುಂಬರವಾಡ ಮುಖ್ಯ ರಸ್ತೆ ಸರ್ವೆ ನಂ 51/1 ರಲ್ಲಿ 75 ಮತ್ತು 80 ವಿಸ್ತೀರ್ಣದ ಅಂಬೇಡ್ಕರ ಭವನಕ್ಕೆ ಸೇರಿದ ಜಾಗದಲ್ಲಿ ಕಳೆದ 25 ವರ್ಷಗಳಿಂದ ಅಂಬೇಡ್ಕರ ಜಯಂತಿ ಬುದ್ಧ ಪೂರ್ಣಿಮಾ, ರಮಾಬಾಯಿ ಅಂಬೇಡ್ಕರ ಜಯಂತಿ ವಿಜಯದಶಮಿ, ಮಹಾಪರಿನಿಬ್ಬಣ ಸಭೆ ಸಮಾರಂಭಗಳನ್ನು ಸಾಹಿತ್ಯ ಸಾಂಸ್ಕೃತಿಕ ಕಾರ್ಯಕಚಟುವಟಿಗಳನ್ನುಮಾಡಿಕೊಂಡುಬರುತ್ತಿರುವ ಜಾಗದಲ್ಲಿರುವ ನೀಳಾ ಧ್ವಜಾವನ್ನು ಅಂಗನವಾಡಿ ಕಾರ್ಯಕರ್ತೆ, ಶೋಭಾರಾಣಿ ಕೊಡೆಕರ್ ಮೇ 18 ರಂದು ತೇಗೆದು ಹಾಕಿರುವುದು, ಇದರ ಬಗ್ಗೆ ಎಸ್ ಸಿ ಸಮುದಾಯದವರು ದೂರು ಕೊಟ್ಟರು ಯಾವುದೇ ಕ್ರಮವನ್ನು ಜರುಗಿಸದಿರುವುದು ಖಂಡಿಸಿ, ತಕ್ಷಣವೇ ಸೇವೆಯಿಂದ ಅಮಾನತ್ತು ಮಾಡಲು ವೀರ ಕನ್ನಡಿಗರ ಸೇನೆ ರಾಜ್ಯ ಘಟಕ ಆಗ್ರಹವನ್ನು ಮಾಡುತ್ತದೆ ಎಂದರು.

ಸದರಿ ಸರ್ವೆ ನಂ ಸರ್ಕಾರಿ ಗೈರಾಣಿ ಜಾಗದಲ್ಲಿ ಚರ್ಚುಗಳು ಮಂದಿರಗಳು ಮಜೀದಿಗಳು ನಿರ್ಮಾಣವಾಗಿವೆ. ನಿರ್ಮಾಣಕ್ಕೆ ಸ್ಥಳಿಯ ಶಾಸಕರು ಜನಪತ್ರಿನಿಧಿಗಳು ಕ್ಷೇತ್ರದ ಮುನಿಷಿಪಲ್ ಸದಸ್ಯರು ಸಹಕಾರ ನೀಡಿದ್ದಾರೆ. ಅಂಬೇಡ್ಕರ ಈ ದೇಶದ ಜನತೆಗೆ ಸಮಾನತೆ ಸ್ವಾಭಿಮಾನದ ಬದುಕುತಂದು ಕೊಟ್ಟಿದ್ದಾರೆ. ಕ್ಷೇತ್ರದ ಮಹಾನಗರಪಾಲಿಕೆ ಮಾಜಿಸದಸ್ಯ ಪ್ರಭುಶೇಟ್ಟ ಪಾಟೀಲ್, ಶಾಸಕರಾದ ರಹೀಂ ಖಾನ ಅಂಬೇಡ್ಕರ ಭವನ ಜಾಗದ ಸಮಸ್ಯೆ ಪರಿಹಾರ ಮಾಡಿಕೊಡಬೇಕು. ಕುಂಬರವಾಡದಲ್ಲಿರುವ ಎಲ್ಲಾ ಜಾತಿ ಧರ್ಮದವರು ಅಂಬೇಡ್ಕರ ಭವನ ನಿರ್ಮಾಣಕ್ಕಾಗಿ ಸಹಕಾರ ನೀಡಬೇಕು.

ಯಾರು ನೀಳಾ ಧ್ವಜ ತೇಗೆದು ಹಾಕಿದ್ದಾರೋ ಅವರು ಸಾರ್ವಜನಿಕವಾಗಿ ಕ್ಷೇಮೆ ಕೇಳಿ ನೀಳಾ ಧ್ವಜವನ್ನು ಕೂಡಿಸಬೇಕು. ಎಸ್ ಸಿ ಮೀಸಲಾತಿ ಪಡೆದುಕೊಂಡು, ಅಂಬೇಡ್ಕರ ಜಾಗಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ವಿರೋದ ವ್ಯಕ್ತಪಡಿಸುವುವವರು ಹೇಗೆ ಅಂಬೇಡ್ಕರ ಅನುಯಾಯಿ ಆಗಲು ಸಾದ್ಯವೆಂದು ವೀರ ಕನ್ನಡಿಗರ ಸೇನೆ ರಾಜ್ಯಾಧ್ಯಕ್ಷ ಅಮೃತ ಪಾಟೀಲ ಸಿರನೂರು, ಪ್ರಾದೇಶಿಕ ಆಯುಕ್ತರು ಕಲಬುರ್ಗಿ ರವರಿಗೆ ಮನವಿ ಪತ್ರ ಸಲ್ಲಿಸಿ ಪತ್ರಿಕೆ ಹೇಳಿಕೆ ಬಿಡುಗಡೆ ಮಾಡಿ, ಚುನಾವಣೆ ಬಂದಾಗ ಮನೆ ಮನೆಗೆ ಬಂದು ಮತಕೇಳುವವರು ಕ್ಷೇತ್ರದ ಎಲ್ಲಾ ಜನಸಮುದಾಯದವರಿಗೆ ಸಮಾನವಾಗಿ ಕಾಣಬೇಕು ಎಲ್ಲಿ ಸಮಸ್ಯೆ ಹುಟ್ಟಿಕೊಂಡಿದೆ ಅಲ್ಲಿಂದಲ್ಲೆ ಪರಿಹಾರ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ ಸಮಾನತೆಗಾಗಿ ಸಂಘರ್ಷ ಮಾಡಿ ಕಲ್ಯಾಣ ನಾಡು ನಿರ್ಮಾಣ ಮಾಡಿಕೊಟ್ಟಿದ್ದಾರೆ, ಅವರ ತತ್ವ ಸಿದ್ದಾಂತದಡಿಯಲ್ಲಿ, ಮಾನವ ಕಲ್ಯಾಣ ಬಯಸಿರುವ ಎಲ್ಲಾ ಧರ್ಮಗಳ ವಿಚಾರಗಳನ್ನು ಮೈಗೂಡಿಸಿಕೊಂಡು ನಡೆಯಬೇಕು. ಸೇನೆ ರಾಜ್ಯ ಸಂಚಾಲಕ ಸುಬ್ಬಣ್ಣ ಕರಕನಳ್ಳಿ ಕುಂಬರವಾಡದ ಸದರಿ ಜಾಗದಲ್ಲಿ ಭವ್ಯವಾದ ಅಂಬೇಡ್ಕರ ಸಮುದಾಯ ಭವನ ನಿರ್ಮಾಣ ಮಾಡಲು ಕರ್ನಾಟಕ ರಾಜ್ಯ ಸರ್ಕಾರ, ಸಮಾಜ ಕಲ್ಯಾಣ ಇಲಾಖೆ, 1 ಕೋಟಿ, ಕ್ಷೇತ್ರದ ಶಾಸಕ ರಹೀಂ ಖಾನ, 50 ಲಕ್ಷ ಕುಂಬರವಾಡ ಕೌಸಲರ್ 25 ಲಕ್ಷ ಹಣವನ್ನು ನೀಡಬೇಕು ಎಂದರು.

ಶೀಘ್ರವೇ ಅಡಿಗಲ್ಲೂ ಸಮಾರಂಭವನ್ನು ನೇರವೇರಿಸಿಕೊಡಬೇಕು ಅಂಬೇಡ್ಕರ ಭವನ ನಿರ್ಮಾಣ ಆಗುವವರೆಗೂ ನಮ್ಮ ಹೋರಾಟವಿರುತ್ತದೆ. ಈ ಸಂದರ್ಭದಲ್ಲಿ ಸೇನೆ ರಾಜ್ಯ ಉಪಾಧ್ಯಕ್ಷ ಶಿವಾಜಿ ಚೌಹಾನ, ವಕ್ತಾರ ಶಿವಾನಂದ ಚಿಕ್ಕಣಿ, ಅಣವೀರ ಬಿರಾದರ, ಯಲ್ಲಾಲಿಂಗ ಪೂಜಾರಿ, ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಅಲೆಮಾರಿ ಸಮುದಾಯಕ್ಕೆ ವಾಸದ ಹಕ್ಕು ಕಲ್ಪಿಸುವಂತೆ ಸಂಸದ ಸಾಗರ್ ಖಂಡ್ರೆಗೆ ಮನವಿ





**ಬೀದರ್:** ನಗರದ ನೌಬಾದ್‌ನ ಚೌಳಿಕಮಾನ ಸಮೀಪ ಕಳೆದ ಎರಡು ದಶಕಗಳಿಂದ ಗುಡಿಸಲುಗಳಲ್ಲಿ ವಾಸಿಸುತ್ತಿರುವ ಅಲೆಮಾರಿ ಸಮುದಾಯದ ಜನರಿಗೆ ಬಾಗೆ ಕಾರಂಜಾ (ಬೆಚಿರಾಕ್) ಗ್ರಾಮದ ಸರ್ವೇ ನಂ.45ರ ಸರ್ಕಾರಿ ಜಮೀನಿನಲ್ಲಿ ತಾತ್ಕಾಲಿಕವಾಗಿ ಗುಡಿಸಲು ನಿರ್ಮಿಸಿಕೊಂಡು ವಾಸಿಸಲು ಅವಕಾಶ ಕಲ್ಪಿಸುವಂತೆ ಬೀದರ ಲೋಕಸಭಾ ಸದಸ್ಯ ಸಾಗರ್ ಈ. ಖಂಡ್ರೆ ಅವರಿಗೆ ವಿಶ್ವ ಕ್ರಾಂತಿ ದಿವ್ಯ ಪೀಠದ ಅಧ್ಯಕ್ಷ ಓಂಪ್ರಕಾಶ್ ರೊಟ್ಟೆ ಅವರು ಮನವಿ ಸಲ್ಲಿಸಿದ್ದಾರೆ.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಪರಿಶೀಲನಾ ಸಭೆಯ ಸಂದರ್ಭದಲ್ಲಿ ಲೋಕಸಭಾ ಸದಸ್ಯ ಸಾಗರ್ ಖಂಡ್ರೆ ಅವರನ್ನು ಭೇಟಿಯಾದ ಅಲೆಮಾರಿ ಸಮುದಾಯದ ಸಿಂದೋಳ, ಕೋರವ ಹಾಗೂ ಮಾಂಗರವಾಡಿ ಸಮುದಾಯದ ಮುಖಂಡರು ತಮ್ಮ ಸಮಸ್ಯೆಗಳನ್ನು ವಿವರಿಸಿದರು. ಈ ವೇಳೆ ಸರ್ವೇ ನಂ.45ರ ಸರ್ಕಾರಿ ಜಮೀನಿನಲ್ಲಿ ತಾತ್ಕಾಲಿಕವಾಗಿ ಗುಡಿಸಲು ಹಾಕಿಕೊಂಡು ಬದುಕಲು ಅವಕಾಶ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡುವಂತೆ ಮನವಿ ಮಾಡಿದರು.

ಅಲೆಮಾರಿ ಸಮುದಾಯದ ಜನರು ಕಳೆದ 20–25 ವರ್ಷಗಳಿಂದ ಚೌಳಿಕಮಾನ ಸಮೀಪ ಗುಡಿಸಲುಗಳಲ್ಲಿ ವಾಸಿಸುತ್ತಿದ್ದು, ಶುದ್ಧ ಕುಡಿಯುವ ನೀರು, ವಿದ್ಯುತ್, ಶೌಚಾಲಯ ಸೇರಿದಂತೆ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದೆ ಜೀವನ ಸಾಗಿಸುತ್ತಿದ್ದಾರೆ. ಮಹಿಳೆಯರು ಹಾಗೂ ಮಕ್ಕಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದು, ಸುತ್ತಮುತ್ತಲಿನ ಕೆಲವರಿಂದ ನಿರಂತರ ಕಿರುಕುಳವೂ ಎದುರಿಸುತ್ತಿದ್ದಾರೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಬಾಗೆ ಕಾರಂಜಾ (ಬೆಚಿರಾಕ್) ಗ್ರಾಮದ ಸರ್ವೇ ನಂ.45ರ ಸರ್ಕಾರಿ ಜಮೀನಿನಲ್ಲಿ ತಗ್ಗು–ಗುಂಡಿಗಳನ್ನು ಸಮತಟ್ಟುಗೊಳಿಸಿ, ಸರ್ಕಾರದಿಂದ ಶಾಶ್ವತ ಮನೆ ನಿರ್ಮಾಣವಾಗುವವರೆಗೆ ತಾತ್ಕಾಲಿಕವಾಗಿ ಗುಡಿಸಲು ನಿರ್ಮಿಸಿಕೊಂಡು ವಾಸಿಸಲು ಅನುಮತಿ ನೀಡಬೇಕು ಎಂದು ಒತ್ತಾಯಿಸಲಾಗಿದೆ. ಅಲ್ಲದೆ, ಶುದ್ಧ ಕುಡಿಯುವ ನೀರು, ವಿದ್ಯುತ್ ಸಂಪರ್ಕ ಹಾಗೂ ಶೌಚಾಲಯ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ತಕ್ಷಣವೇ ಕಲ್ಪಿಸುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಲಾಗಿದೆ.

ಸಭೆಯಲ್ಲೇ ಲೋಕಸಭಾ ಸದಸ್ಯ ಸಾಗರ್ ಖಂಡ್ರೆ ಅವರು ಜಿಲ್ಲಾಧಿಕಾರಿಗಳಿಗೆ ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡುವಂತೆ ಮನವಿ ಮಾಡಲಾಗಿದೆ. ಅಲ್ಲದೆ, ಸ್ಥಳದಲ್ಲಿದ್ದ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ ಪೂಜಾರ್ ಅವರಿಗೆ ಚೌಳಿಕಮಾನ ಸಮೀಪ ವಾಸಿಸುತ್ತಿರುವ ಅಲೆಮಾರಿ ಸಮುದಾಯದ ಜನರಿಗೆ ಯಾವುದೇ ತೊಂದರೆ ಉಂಟಾಗದಂತೆ ರಾತ್ರಿ ವೇಳೆಯಲ್ಲಿ ಪೊಲೀಸ್ ಭದ್ರತೆ ಒದಗಿಸುವಂತೆ ಮನವಿ ಸಲ್ಲಿಸಲಾಗಿದೆ.

ಸರ್ವೇ ನಂ.45ರ ಸರ್ಕಾರಿ ಜಮೀನಿನಲ್ಲಿ ತಾತ್ಕಾಲಿಕವಾಗಿ ಗುಡಿಸಲು ಹಾಕಿಕೊಂಡು ವಾಸಿಸಲು ಅನುಮತಿ ದೊರೆಯುವವರೆಗೆ ಜುಲೈ 20 ರಿಂದ ವಿಶ್ವ ಕ್ರಾಂತಿ ದಿವ್ಯ ಪೀಠದ ವತಿಯಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು ಎಂದು ವಿಶ್ವ ಕ್ರಾಂತಿ ದಿವ್ಯ ಪೀಠದ ಅಧ್ಯಕ್ಷ ಓಂಪ್ರಕಾಶ್ ರೊಟ್ಟೆ ಎಚ್ಚರಿಕೆ ನೀಡಿದ್ದಾರೆ.

## ಸಂಗೋಳಗಿ ಗ್ರಾಮದಲ್ಲಿ ಬೇಟಿ ಬಚಾವೊ, ಬೇಟಿ ಪಡಾವೊ ಜಾಗೃತಿ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸಂಗೋಳಗಿ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೀದರ, ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸಂಗೋಳಗಿ ಇವರ ಜಂಟಿ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ "ಬೇಟಿ ಬಚಾವೊ, ಬೇಟಿ ಪಢಾವೊ" (ಹೆಣ್ಣು ಮಗುವನ್ನು ಉಳಿಸಿ, ಹೆಣ್ಣು ಮಗುವನ್ನು ಓದಿಸಿ) ಜಾಗೃತಿ ಕಾರ್ಯಕ್ರಮದ ಕುರಿತು ಸಮಾಜದಲ್ಲಿ ಹೆಣ್ಣು ಮಕ್ಕಳ ರಕ್ಷಣೆ ಮತ್ತು ಅವರಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಪ್ರತಿಯೊಬ್ಬ ನಾಗರಿಕರ ಆದ್ಯ ಕರ್ತವ್ಯವಾಗಿದೆ ಸಮಾಜಕ್ಕೆ ಕಂಟಕವಾಗಿರುವ ಬಾಲ್ಯ ವಿವಾಹ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾರ್ವಜನಿಕರು ಕೈಜೋಡಿಸಬೇಕೆಂದು ಅಂಗನವಾಡಿ ಮೇಲ್ವಿಚಾರಕಿ ಸುರೇಖಾ ರವರು ಮನವಿ ಮಾಡಿದರು.

"ಶಿಕ್ಷಣದಿಂದ ಮಾತ್ರ ಹೆಣ್ಣು ಮಕ್ಕಳ ಸಬಲೀಕರಣ ಸಾಧ್ಯ. ಶಾಲೆಗೆ ದಾಖಲಾಗುವ ಪ್ರತಿಯೊಂದು ಹೆಣ್ಣು ಮಗುವೂ ತನ್ನ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳುವುದು ಪೋಷಕರ ಮತ್ತು ಶಿಕ್ಷಕರ ಜವಾಬ್ದಾರಿಯಾಗಿದೆ.

–ಸಂಧ್ಯಾರಾಣಿ, ಪ್ರಭಾರಿ ಮುಖ್ಯ ಗುರುಗಳು ಸ.ಹಿ ಪ್ರಾಥಮಿಕ ಶಾಲೆ ಸಂಗೋಳಗಿ

ಕಾರ್ಯಕ್ರಮದ ಸ್ವಾಗತ ಜ್ಯೋತಿ ಸಹ ಶಿಕ್ಷಕಿ ನೆರವೇರಿಸಿದರು, ಕಾರ್ಯಕ್ರಮ ಸಂಚಲನೆ ಸೂರ್ಯಕಾಂತ ಸಹ ಶಿಕ್ಷಕರು ನಡೆಸಿಕೊಟ್ಟರು, ಪ್ರಶಾಂತ ಶಿಕ್ಷಕರು, ಉಷಾ, ಸುವರ್ಣ, ಮರ್ಷಿ, ಕಸ್ತೂರಬಾಯಿ, ಸಂಗೀತಾ, ಸುರೇಖಾ ಸೇರಿದಂತೆ ಅಂಗನವಾಡಿ ಶಿಕ್ಷಕರು ಮತ್ತು ಆಶಾ ಕಾರ್ಯಕರ್ತೆಯರು, ಶಾಲೆಯ ಶಿಕ್ಷಕ ವೃಂದ, ಗ್ರಾಮದ ಹಿರಿಯರು, ಪೋಷಕರು ಹಾಗೂ ನೂರಾರು ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಜಗದೇವಿ ಚನ್ನಶೆಟ್ಟಿ ಲಿಂಗ ಸಮಾನತೆಯ ಬಗ್ಗೆ ಮಾತನಾಡಿ ಇಂದಿನ ಆಧುನಿಕ ಯುಗದಲ್ಲಿ ಹೆಣ್ಣು ಮಕ್ಕಳು ಪುರುಷರಿಗೆ ಸಮಾನವಾಗಿ ಎಲ್ಲಾ ರಂಗಗಳಲ್ಲೂ ಸಾಧನೆ ಮಾಡುತ್ತಿದ್ದಾರೆ. ಹೆಣ್ಣು ಮತ್ತು ಗಂಡು ಎಂಬ ತಾರತಮ್ಯ ಮಾಡದೆ ಇಬ್ಬರಿಗೂ ಸಮಾನ ಅವಕಾಶಗಳನ್ನು ನೀಡಬೇಕು ಹೆಣ್ಣು ಮಕ್ಕಳಿಗಾಗಿ ರಕ್ಷಣೆ, ಶಿಕ್ಷಣ ಹಾಗೂ ಸಬಲೀಕರಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ವಿವಿಧ ಕಲ್ಯಾಣ ಕಾರ್ಯಕ್ರಮವಾಗಿದೆ.

–ಜಗದೇವಿ ಚನ್ನಶೆಟ್ಟಿ, ಮುಖ್ಯ ಅತಿಥಿ

## ಮಳೆಗಾಗಿ ದೇವರ ಮೊರೆ ಹೋದ ಯುವಸಮೂಹ, ಪಾದಯಾತ್ರೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್





ತಾಲ್ಲೂಕಿನ ರಾಜಗೀರಾ ಗ್ರಾಮದ ಯುವಕರ ತಂಡವು ಶನಿವಾರ ಮಳೆಗಾಗಿ ಪ್ರಾರ್ಥಿಸಿ ರಾಜ–ಗೀರಾ ಗ್ರಾಮದ ದಕ್ಷಿಣ ಮುಖಿ ಹನುಮಾನ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪಾದಯಾತ್ರೆ ಕೈಗೊಂಡರು.

ಪಾದಯಾತ್ರೆಯು ರಾಜಗೀರಾ ಗ್ರಾಮದಿಂದ ಪ್ರಾರಂಭಗೊಂಡು ಹೋಕರಾಣ(ಕೆ), ಹೋಕರಾಣ(ಬಿ), ಧರ್ಮಾಪುರ, ಚಿಂತಲಗೇರಾ, ಬರೂರ, ಗೌಸಪುರ, ಮನ್ನಳ್ಳಿ, ಯಾಕತಪುರ, ತಡಪಳ್ಳಿ ಮಾರ್ಗವಾಗಿ ಸಂಚರಿಸಿ ಪಾತರಪಳ್ಳಿ ಗ್ರಾಮದಲ್ಲಿ ಸಮಾಪ್ತಿಗೊಂಡಿತು.

ಭಜನಾ ವಾದ್ಯಗಳನ್ನು ಹಿಡಿದು ವಿವಿಧ ಭಜನೆ ಗೀತೆಗಳನ್ನು ಹಾಡುತ್ತಾ ಅತ್ಯಂತ ಉತ್ಸಾಹ, ಭಕ್ತಿ ಹಾಗೂ ಶ್ರದ್ದೆಯಿಂದ ಹೆಜ್ಜೆ ಹಾಕುತ್ತಾ ಉತ್ತಮ ಮಳೆಗಾಗಿ ಮಾರ್ಗಮದ್ಯೆದಲ್ಲಿ ಬರುವ ಹನುಮಾನ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸುತ್ತಾ ದಿನವಿಡಿ ಸಂಸರಿಸಿತು ರಾಜಗೀರಾ ಗ್ರಾಮದ ಯುವಕರ ತಂಡ.

ಈಗಾಗಲೆ ಮಳೆಯ ಕೊರತೆಯಿಂದ ರೈತರು ಬಿತ್ತಿದ ಸೋಯಾ, ತೊಗರಿ, ಉದ್ದು, ಹೆಸರು ಸೇರಿದಂತೆ ಮತ್ತಿತರ ಬೆಳೆಗಳು ಒಣಗುತ್ತಿವೆ. ಸಂಕಷ್ಟದಲ್ಲಿರುವ ರೈತರ ನೆರವಿಗಾಗಿ ದೇವರನ್ನು ಪ್ರಾರ್ಥಿಸಲು ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು ಜೊತೆಗೆ ರಾಜ್ಯ ಸರ್ಕಾರವು ಕೂಡಲೇ ರೈತರ ಕಷ್ಟಕ್ಕೆ ಸ್ಪಂದಿಸಬೇಕು ಎಂದು ಪಾದ ಯಾತ್ರೆಯಲ್ಲಿ ಭಾಗವಹಿಸಿದ ಯುವ ಮುಖಂಡ ಆಕಾಶ ಅಡ್ಡೆ ಹೇಳಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಬಕ್ಕಣ್ಣ ದೇಗುಲ್ಮಡಿ, ಬಸ್ವರಾಜ, ಸಂತೋಷ ಶೇರಿಕಾರ, ಸುನಿಲ ಶೇರಿಕರ, ಶಿವರಾಜ ಸ್ವಾಮಿ, ರಾಜಕುಮಾರ ಶೇರಿಕಾರ, ತುಕಾರಾಮ ಯರನಳ್ಳಿ, ಶ್ರೀನಿವಾಸ ಭುತ್ತಾಳೆ, ನಾಗಶೆಟ್ಟಿ ವಗ್ಯರ, ಯಲ್ಲಾಲಿಂಗ, ಬಕ್ಕಪ್ಪ, ರೇವಣಪ್ಪಾ, ನರಸಪ್ಪಾ ಸೇರಿದಂತೆ ಇತರರಿದ್ದರು.

## ವರ್ತಮಾನದ ಬಗ್ಗೆ ತಪಸ್ಸಿನ ರೀತಿಯಲ್ಲಿ ಓದು ಬರಹಕ್ಕೆ ಸಲಹೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಯುವಕರಿಗೆ ವಿಫುಲವಾದ ಅವಕಾಶಗಳಿಗೆ ತಾವು ವರ್ತಮಾನದ ಬಗ್ಗೆ ತಪಸ್ಸಿನ ರೀತಿಯಲ್ಲಿ ಓದು ಬರಹ ಮಾಡಿದರೆ ಭವಿಷ್ಯದಲ್ಲಿ ನಿಮಗೆ ಒಳ್ಳೆದಾಗುತ್ತದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ರಾಘವೇಂದ್ರ ಉಪಾಧ್ಯೆ ಅವರು ಹೇಳಿದರು.

ನಗರದ ಡಾ.ಚನ್ನಬಸವ ಪಟ್ಟದೇವರ ರಂಗ ಮಂದಿರ ಇತ್ತೀಚಿನ ನಡೆದ ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಪದವಿ ಪೂರ್ವ ಇಲಾಖೆ ಮತ್ತು ಶಿಶು ಅಭಿವೃದ್ಧಿ ಯೋಜನೆ ಬೀದರ ಸಂಯುಕ್ತಾಶ್ರಯದಲ್ಲಿ "ಭವಿಷ್ಯದ ದಾರಿ ಯೋಜನೆಯಡಿ" ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗಾಗಿ ಒಂದು ದಿನದ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂದಿನ ಕಾಲದಲ್ಲಿ ನಮಗೆ ಯಾರು ಕೂಡ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಮುಗಿದ ನಂತರ ಮುಂದೆ ಏನು ಮಾಡಬೇಕು ಎಂದು ಹೇಳಿ ಕೊಡುವವರು ಯಾರು ಇದ್ದಿರಲಿಲ್ಲ. ಇಂದು ಸರ್ಕಾರ ಬಾಲ ವಿಕಾಸ ಅಕಾಡೆಮಿಯವರು ಮಕ್ಕಳು ಯಾವ ರೀತಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಕಾರ್ಯಾಗಾರವನ್ನು ಹಮ್ಮಿಕೊಂಡಿರುತ್ತಾರೆ. ನೀವುಗಳು ಅದೃಷ್ಟಶಾಲಿಗಳು ಎಂದು ಹೇಳಿದರು. ಯುವಕರಿಗೆ ವಿಫುಲವಾದ ಅವಕಾಶಗಳಿಗೆ ತಾವು ವರ್ತಮಾನದ ಬಗ್ಗೆ ತಪಸ್ಸಿನ ರೀತಿಯಲ್ಲಿ ಓದು ಬರಹ ಮಾಡಿದರೆ ಭವಿಷ್ಯದಲ್ಲಿ ನಿಮಗೆ ಒಳ್ಳೆದಾಗುತ್ತದೆಂದು ತಿಳಿಸಿದರು.

ಧಾರವಾಡ ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷರಾದ ಅಡಿವೇಶಗಿ ಇಟಗಿ ಅವರು ಮಾತನಾಡಿ, "ಭವಿಷ್ಯದ ದಾರಿ ಯೋಜನೆಯಡಿ" ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗಾಗಿ ಒಂದು ದಿನದ ವೃತ್ತಿ ಮಾರ್ಗದರ್ಶನದಲ್ಲಿ ಮಕ್ಕಳು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿ ಅವರಿಗೆ ಸೂಕ್ತ ವೇದಿಕೆ ಸಿಗಬೇಕು ಎಂದು ಅವರು ಹೇಳಿದರು.

ಭವಿಷ್ಯದ ದಾರಿ ಯೋಜನೆಯನ್ನು ಜಾರಿಗೆ ತರಲಾಗಿದೆ ಮಕ್ಕಳು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿ ಅವರಿಗೆ ಸೂಕ್ತ ವೇದಿಕೆ ಸಿಗಬೇಕು ಅವರು ಸೇವಾಭಿವೃದ್ಧಿ ಮಾಡುವುದೇ ನಮ್ಮ ಬಾಲವಿಕಾಸ ಅಕಾಡೆಮಿಯ ಉದ್ದೇಶವಾಗಿರುತ್ತದೆ. ಇಂದಿನ ಮಕ್ಕಳು ಇಂದಿನ ಪ್ರಜೆಗಳಾಗಿರುತ್ತಾರೆ. ಮಕ್ಕಳು ಮೊಬೈಲ್‌ನಿಂದ ದೂರವಿದ್ದು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ತಿಳಿಸಿದರು.

ಧಾರವಾಡ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಕಾರ್ಯದರ್ಶಿಗಳಾದ ವಿ.ಎಸ್.ಪಾಟೀಲ್ ಅವರು ಮಾತನಾಡಿ, ಮೊಬೈಲ್‌ನ ದುರ್ಬಳಕೆ ಮತ್ತು ಸದ್ಬಳಕೆಯ ಕುರಿತು ಮಕ್ಕಳಿಗೆ ಜಾಗೃತಿ ಸಲಹೆ ನೀಡಿದರು.

ಬೀದರ್ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ಶೀಮಪ್ಪಾ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ವಯಸ್ಸಿನಲ್ಲಿ ಕಷ್ಟಪಟ್ಟು ಓದಬೇಕು ಮತ್ತು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಂತೆ ತಿಳಿಸಿದರು.

ಬೀದರ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ಮಾತನಾಡಿ, ಬೀದರ ಜಿಲ್ಲೆಯ ಮಕ್ಕಳು ಇಷ್ಟು ಶಿಸ್ತು ಬದ್ಧವಾಗಿ ಸತತವಾಗಿ ನಾಲ್ಕು ಗಂಟೆಗಳ ಕಾಲ ಕಾರ್ಯಾಗಾರ ನಡೆದರೂ ಕೂಡ ಯಾವುದೇ ಗಲಾಟೆ ಮಾಡಲಾರದೆ ಸಂಮಯಮದಿಂದ ಕೂತುಕೊಂಡು ಕೇಳಿಸಿಕೊಂಡಿರುತ್ತೀರಿ. ಅದೇರೀತಿ ಮೂರು ವರ್ಷದ ತಪಸ್ಸು ಎಸ್.ಎಸ್.ಎಲ್.ಸಿ, ಪಿಯುಸಿ ಪ್ರಥಮ ಮತ್ತು ದ್ವಿತೀಯ ವರ್ಷ ಈ ಮೂರು ವರ್ಷದಲ್ಲಿ ತಪಸ್ಸಿನ ರೀತಿಯಲ್ಲಿ ತಾವು ಓದಿದರೆ ಮುಂದಿನ ನೂರು ವರ್ಷ ತಾವು ಸಂತೋಷವಾಗಿ ಬಾಳಬಹುದು. ನಿಮ್ಮ ಭವಿಷ್ಯದ ಶಿಲ್ಪಿ ನೀವೆ ಆಗಿರುತ್ತೀರಿ. ಎಂದೂ ಕೂಡ ಫೇಲ್ ಆಗಿದ್ದೇವೆಂದು ಆತ್ಮ ಹತ್ಯೆ ಮಾಡಿಕೊಳ್ಳಬಾರದು ಯಾಕೆಂದರೆ ಯಾವುದೇ ಜೀವ ರಾಶಿಯಲ್ಲಿ ಆತ್ಮ ಹತ್ಯೆ ಮಾಡಿಕೊಳ್ಳುವುದಿಲ್ಲ. ಮಾನವ ಜನ್ಮದಲ್ಲಿ ಮಾತ್ರ ಆತ್ಮ ಹತ್ಯೆ ಮಾಡಕೋತಿವಿ. ಹಾಗಾಗಿ ಯಾವುದೇ ರೀತಿಯಲ್ಲಿ ಫೇಲ್ ಆದರೆ ಆತ್ಮ ಹತ್ಯೆ ಮಾಡಿಕೊಳ್ಳಬಾರದೆಂದು ಧೈರ್ಯದ ಮಾತುಗಳನ್ನಾಡಿದರು.

ಈ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಗೀತಾಗಡ್ಡೆ, ಸಂತೋಷ ಪುಜಾರಿ, ಬೀದರ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಕ್ಷಣಾಧಿಕಾರಿ ಗೌರಿಶಂಕರ ಪರತಾಪೂರೆ ನಿರೂಪಿಸಿದರು. ಬೀದರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೂಪಾ ಎಸ್.ಕೋಟೆಗೌಡರ್ ಸ್ವಾಗತಿಸಿದರು. ಹುಮನಾಬಾದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಪ್ರಕಾಶ ವಂದಿಸಿದರು.

## ಮಳೆಗಾಗಿ ಬಸವ ಪರ ಸಂಘಟನೆಗಳಿಂದ ಪುರುಷ ಕಟ್ಟೆಯಲ್ಲಿ ಪೂಜೆ




• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಜಿಲ್ಲೆಯ ರೈತರು ಅತ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟಿದೆ. ಬಿತ್ತನೆ ಮಾಡಿದ ಬೆಳೆಗಳು ಒಣಗುತ್ತಿವೆ, ಭೂಮಿ ತಾಯಿ ಒಣಗಿ ಬಿರುಕು ಬಿಟ್ಟಿದ್ದಾಳೆ. ಬಿತ್ತಿದ ಬೀಜಕ್ಕೆ ಹಾಕಿದ ಬಂಡವಾಳವೂ ಸಿಗದೆ, ಇಡೀ ಜಗತ್ತಿಗೆ ಅನ್ನ ಹಾಕುವ ನಮ್ಮ ರೈತರು ಇವತ್ತು ಕಣ್ಣೀರಲ್ಲಿ ಕೈ ತೊಳೆಯುವಂತಾಗಿದೆ ಎಂದು ಗುಣತೀರ್ಥ ವಾಡಿಯ ಪೂಜ್ಯ ಶ್ರೀ ಬಸವ ಪ್ರಭು ಸ್ವಾಮೀಜಿ ತಿಳಿಸಿದರು. ಅವರು ಬಸವ ಪರ ಸಂಘಟನೆಗಳು ರಾಷ್ಟ್ರೀಯ ಬಸವದಳ, ಬಸವಕೇಂದ್ರ, ಬಸವ ತತ್ವ ಮತ್ತು ಪ್ರಸಾರ ಕೇಂದ್ರದ ಪ್ರಮುಖರು ಹಾಗೂ ರೈತ ಬಾಂಧವರು ಒಟ್ಟಾಗಿ ಇಲ್ಲಿನ ಪವಿತ್ರವಾದ 'ಪುರುಷ ಕಟ್ಟೆ'ಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು. ತಾಲ್ಲೂಕು ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ರವಿ ಕೊಳಕೂರ. ಮಾತನಾಡಿ ಮಳೆಯ ಕೊರತೆ ಇದ್ದಾಗಿ ಬಿತ್ತನೆಗೆ ಹಿನ್ನಡೆ ಯಾಗದ್ದು ಸರ್ಕಾರ ರೈತರ ನೆರವಿಗೆ ಬರಬೇಕು ಅಲ್ಲದೆ ಬೀದರ ಜಿಲ್ಲೆಯ ಬರ ಪೀಡಿತ ಎಂದು ಘೋಷಿಸಿ ಪರಿಹಾರ ನೀಡಬೇಕು ಎಂದರು. ಈ ಸಂದರ್ಭದಲ್ಲಿ ಬಸವ ತತ್ವ ಮತ್ತು ಪ್ರಸಾರ ಕೇಂದ್ರ ಅದ್ಯಕ್ಷರಾದ ಜಯಪ್ರಕಾಶ ಸದಾನಂದೆ, ಹುಲಸೂರ ಬಸವ ಕೇಂದ್ರ ಅದ್ಯಕ್ಷ ಆಕಾಶ ಖಂಡಾಳೆ, ಹುಲಸೂರ ರಾ.ಬ ದ ಅದ್ಯಕ್ಷ ದತ್ತಾತ್ರೇಯ ರಾಘವ, ರೈತ ಮುಖಂಡರಾದ ಚಂದ್ರಶೇಖರ ಜಮಖಂಡಿ, ಗಣಪತಿ ಕಾಸ್ತೆ, ಸಂಗಮೇಶ ತೆ–ಉಗರಖೇಡೆ, ಜಗದೀಶ ನೆಲವಡಕರ್, ಸೊನಾಲಿ ನೀಲಕಂಠ, ಕವಿತಾ ಸಜ್ಜನ್. ಸಚಿನ ಕವಟೆ, ಶಿವಕುಮಾರ ಪಾಟೀಲ ಕಾದೆಪುರ . ಮಹಾದೇವ ಇಜಾರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸಾಹಿತ್ಯ ರತ್ನ ಅಣ್ಣಾಭಾವು ಸಾಠೆ ಅವರ 57ನೇ ಪುಣ್ಯಸ್ಮರಣೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ವಿಶ್ವಾಸನಗರ ಬಡಾವಣೆಯಲ್ಲಿ ಮಹಾನ್ ಸಮಾಜ ಚಿಂತಕ, ಹೋರಾಟಗಾರ ಹಾಗೂ ಸಾಹಿತ್ಯ ರತ್ನ ಅಣ್ಣಾಭಾವು ಸಾಠೆ ಅವರ 57ನೇ ಪುಣ್ಯಸ್ಮರಣೆ ದಿನವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.ಕಾರ್ಯಕ್ರಮದ ಆರಂಭದಲ್ಲಿ ಜನಾಬಾಪು ಅವರ ಭಾವಚಿತ್ರಕ್ಕೆ ಜನಾರ್ದನ್ ಸಾವರಗೇಕರ ಅವರು ವಿಶೇಷ ಪೂಜೆ ಸಲ್ಲಿಸಿ, ಪುಷ್ಪ ನಮನ ಗೈದರು.ನಂತರ ಮಾತನಾಡಿ, "ಅಣ್ಣಾಭಾವು ಸಾಠೆ ಅವರು ಕೇವಲ ಸಾಹಿತಿಯಷ್ಟೇ ಅಲ್ಲದೆ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಸಮಾಜಕ್ಕೆ ಬೆಳಕನ್ನು ತೋರಿಸಿದ ಮಹಾನ್ ಹೋರಾಟಗಾರರು. ಅವರ ಆದರ್ಶಗಳು ಮತ್ತು ಚಿಂತನೆಗಳು ಇಂದಿನ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿವೆ" ಎಂದು ಸ್ಮರಿಸಿದರು.ಈ ಸಂದರ್ಭದಲ್ಲಿ ಪ್ರಮುಖರಾದ ಶಾಮ್ ಹಕ್ಕಿಹಾಳ, ಅಮರ್ ಹುಣಸೂರು, ತುಳಸಿರಾಮ್ ಜಕಾತೆ, ವಿಶಾಲ್, ವಿಕಾಸ್, ಪ್ರಶಾಂತ್, ಕೃಷ್ಣವಾಗ್ಮಾರೆ ಹಾಗೂ ಗೋರಕ್ ಸೇರಿದಂತೆ ಬಡಾವಣೆಯ ನೂರಾರು ನಾಗರಿಕರು ಉಪಸ್ಥಿತರಿದ್ದರು.

## ಬಿರುಕು ಬಿಟ್ಟ ವಿದ್ಯುತ್ ಕಂಬ:ಆತಂಕದಲ್ಲಿ ಜನತೆ

• ಮಲ್ಲಮ್ಮ ನುಡಿ ವಾರ್ತೆಕುರುಗೋಡು



ಇಲ್ಲಿಗೆ ಸಮೀಪದ ಹೆಚ್. ವೀರಾಪುರ ಗ್ರಾಮದ ಅಗಸೆ ಬಳಿ ಇರುವ ಸಿಮೆಂಟಿನ ವಿದ್ಯುತ್ ಕಂಬ ಬಿರುಕು ಕಾಣಿಸಿಕೊಂಡು ಸುಮಾರು ವರ್ಷಗಳಾಗಿದ್ದು, ಈ ಬಗ್ಗೆ ಎಮ್ಮಿಗನೂರು ಜೆಸ್ಕಾಂ ಅಧಿಕಾರಿಗಳಿಗೆಮೌಖಿಕವಾಗಿ, ದೂರವಾಣಿಮೂಲಕಸಾಕಷ್ಟು ಬಾರಿ ಗಮನಕ್ಕೆ ತಂದರು ಯಾವುದೇ ಕ್ರಮಕೈಗೊಂಡಿಲ್ಲ. ಇದರಿಂದ ಇಲ್ಲಿನ ಸಾರ್ವಜನಿಕರು ಜೀವ ಭಯದಲ್ಲಿ ಓಡಾಡುವಂತಾಗಿದೆ ಎಂದು ಓಣಿಯ ನಿವಾಸಿಗಳು ತಿಳಿಸಿದ್ದಾರೆ.ಕಂಬ ಅಳವಡಿಸಿ ಸಾಕಷ್ಟು ವರ್ಷಗಳಾಗಿದ್ದರಿಂದ ಎಲ್ಲೆಡೆ ಬಿರುಕು ಕಾಣಿಸಿಕೊಂಡು ರಸ್ತೆಯತ್ತ ಬಾಗಿದೆ. ವಿದ್ಯುತ್ ಕೇಬಲ್ ಆಧಾರದ ಮೇಲೆ ಮಾತ್ರ ನಿಂತಿದ್ದು, ಮಳೆ, ಗಾಳಿಗೆ ಮುರಿದು ಬೀಳುವ ಹಂತದಲ್ಲಿದೆ. ಈ ರಸ್ತೆ ಮೂಲಕ ಸಾಕಷ್ಟು ಸಾರ್ವಜನಿಕರು, ಶಾಲಾ ಮಕ್ಕಳು ಅಡ್ಡಾಡುತ್ತಾರೆ. ಇದರಿಂದ ಯಾವ ಕ್ಷಣದಲ್ಲಾದರು ಅಪಾಯ ಎದುರಾಗುವ ಸಾಧ್ಯತೆ ಇದೆ. ಈ ಹಿಂದೆ ಅಗಸೆ ಪಕ್ಕದಲ್ಲಿ ಯಾರು ಇಲ್ಲದ ಸಮಯದಲ್ಲಿ ವಿದ್ಯುತ್ ಕಂಬ ತಂತಿ ಸಮೇತ ಬಿದ್ದಿದೆ. ಆದರೆ ಯಾವುದೇ ಅನಾಹುತ ಸಂಭವಿಸಿಲ್ಲ. ಈ ಕುರಿತಾಗಿ ಜೆಸ್ಕಾಂ ಅಧಿಕಾರಿಗಳಿಗೆ ನೆನಪು ಮಾಡಿಕೊಡಲಾಗಿದೆ. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ.ಈಗ ಮಳೆಗಾಲ ಪ್ರಾರಂಭವಾಗಿದೆ. ಓಣಿಯಲ್ಲಿ ವಯೋವೃದ್ಧರು ಸೇರಿದಂತೆ ಚಿಕ್ಕಮಕ್ಕಳು ಇದ್ದಾರೆ. ಏನಾದರು ಅನಾಹುತ ಸಂಭವಿಸಿದರೆ ಗತಿ ಏನು. ಆದ್ದರಿಂದ ಕೂಡಲೇ ಮೇಲಾಧಿಕಾರಿಗಳು ಈ ಕುರಿತು ಅಗತ್ಯ ಕ್ರಮ ಕೈಗೊಂಡು ಆಗುವ ಅನಾಹುತ ತಪ್ಪಿಸಬೇಕೆಂದು ಓಣಿಯ ನಿವಾಸಿಗಳಾದ ಕುಮಾರಸ್ವಾಮಿ, ಹೆಚ್. ಶಾರದ, ಎಂ. ಬಸವರಾಜಸ್ವಾಮಿ, ಹೆಚ್. ಅನಿಲ್ ಕುಮಾರ್ ಆಗ್ರಹಿಸಿದ್ದಾರೆ.

# ಮದ್ಯಮುಕ್ತರಾಗಿ ನವಜೀವನ ನಡೆಸಲು ಪೂಜ್ಯ ಗುರುಬಸವ ಪಟ್ಟದೇವರು ಕರೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ (ರಿ), ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಹಾಗೂ ಮದ್ಯವರ್ಜನ ಶಿಬಿರ ವ್ಯವಸ್ಥಾಪನಾ ಸಮಿತಿ ಕಮಲನಗರದ ಜಂಟಿ ಆಶ್ರಯದಲ್ಲಿ ಸ್ಥಳೀಯ ಬಸವ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ 2085ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭವು ಶನಿವಾರ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದ ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಗುರುಬಸವ ಪಟ್ಟದೇವರು, "ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅನೇಕ ಜನಪರ ಯೋಜನೆಗಳನ್ನು ತಂದಿದ್ದಾರೆ. 12ನೇ ಶತಮಾನದ ಬಸವಣ್ಣನವರು ಸಮಾಜದ ಬಗ್ಗೆ ಯಾವ ರೀತಿಯ ಕಾಳಜಿಯನ್ನು ಹೊಂದಿದ್ದರೋ, ಅದೇ ರೀತಿಯ ಕಾಳಜಿಯನ್ನು ಇಂದು ವೀರೇಂದ್ರ ಹೆಗ್ಗಡೆಯವರು ಹೊಂದಿದ್ದಾರೆ" ಎಂದು ಶ್ಲಾಘಿಸಿದರು.

ಮುಂದುವರಿದು ಮಾತನಾಡಿದ ಪೂಜ್ಯಶ್ರೀಗಳು, "ಹೆಗ್ಗಡೆಯವರ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ಅತ್ಯಂತ ಮಹತ್ವದ ಕಾರ್ಯವೆಂದರೆ ಈ ಮದ್ಯವರ್ಜನ ಶಿಬಿರವಾಗಿದೆ. ಸಮಾಜಕ್ಕೆ ಮಾರಕವಾಗುವ ಮದ್ಯಪಾನ ವ್ಯಸನಿಗಳನ್ನು ಸನ್ಮಾರ್ಗಕ್ಕೆ ತಂದು, ಅವರಿಗೆ ನವಜೀವನವನ್ನು ಕಲ್ಪಿಸಿಕೊಡುವ ಅತ್ಯುನ್ನತ ಕೆಲಸ ಈ ಶಿಬಿರದ ಮೂಲಕ ನಡೆದಿದೆ. ನಮ್ಮ ದೇಹವೇ ಒಂದು ದೇಗುಲವಿದ್ದಂತೆ, ಅದನ್ನು ನಿಮ್ಮ ಕೈಯಾರೆ ನೀವೇ ಹಾಳು ಮಾಡಿಕೊಳ್ಳಬೇಡಿ ಎಂದು ಎಲ್ಲರಲ್ಲೂ ಕೈಮುಗಿದು ವಿನಂತಿಸುತ್ತೇನೆ. ಇನ್ನುಮುಂದೆ ಶಿಬಿರಾರ್ಥಿಗಳು ಒಳ್ಳೆಯ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಬಾಳಬೇಕು. ನಿಮ್ಮ ಮಕ್ಕಳ ಊಟ ಮತ್ತು ಶಿಕ್ಷಣಕ್ಕೆ ನೆರವಾಗಲು ಹಿರೇಮಠ ಸಂಸ್ಥಾನವು ಸದಾ ಸಿದ್ಧವಿದ್ದು, ನೀವು ಸನ್ಮಾರ್ಗದಲ್ಲಿ ನಡೆದ–ರೆ ನಮ್ಮ ಬೆಂಬಲ ಸದಾ ಇರಲಿದೆ" ಎಂದು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯರಾದ ಶ್ರೀ ಮಡಿವಾಳಪ್ಪ ಮುರ್ಕೆ ಅವರು ಮಾತನಾಡಿ, ಕುಟುಂಬದ ಜವಾಬ್ದಾರಿಗಳ ಕುರಿತು ಶಿಬಿರಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. "ಇಂದಿನ ಸಮಾಜವು ಮದ್ಯಪಾನ ಮಾಡಲು ಪ್ರಚೋದನೆ ನೀಡುತ್ತದೆ. ಆದರೆ ಅದನ್ನು ಮೆಟ್ಟಿ ನಿಂತು ನೀವು ಮದ್ಯದಿಂದ ದೂರವುಳಿದರೆ ಮಾತ್ರ ಇಂತಹ ಶಿಬಿರಗಳು ನಿಜವಾದ ಯಶಸ್ಸನ್ನು ಕಾಣಲು ಸಾಧ್ಯ" ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮಾಜಿ ತಾ.ಪಂ. ಅಧ್ಯಕ್ಷರಾದ ಗಿರೀಶ ಒಡೆಯರ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಹಾಗೂ ಪ್ರಮುಖರಾದ ಮಾರುತಿ ವಾಡೆಕ್ಕರ ಅವರು ಮಾತನಾಡುತ್ತಾ ಶಿಬಿರದ ಮಹತ್ವ ಹಾಗೂ ಮದ್ಯಮುಕ್ತ ಸಮಾಜ ನಿರ್ಮಾಣದಲ್ಲಿ ಧರ್ಮಸ್ಥಳ ಯೋಜನೆಯ ಪಾತ್ರವನ್ನು ಶ್ಲಾಘಿಸಿದರು.ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶಿಬಿರ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಸುರೇಶ ಸೋಲಾಪುರೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ನವಜೀವನ ಸಮಿತಿಯ ಸದಸ್ಯರು, ಪ್ರಮುಖರಾದ ಶಿವಕುಮಾರ ಸಿ.ಎಮ್.,ಬಸವರಾಜ ಪೂಜಾರಿ, ಶರಣಬಸಪ್ಪ, ವಿಲಾಸ, ಮಲ್ಲೇಶ, ಒಲಯದ ಸೇವಾಪ್ರತಿನಿಧಿಗಳು, ನವಜೀವನ ಸಮಿತಿಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಶಿಬಿರದ ಯಶಸ್ಸಿಗೆ ಶ್ರಮಿಸಿದ ಗಣ್ಯರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

# ಕಾರ್ಯ ನಿರತ ಪತ್ರಕರ್ತರ ಧ್ವನಿ ನೇತೃತ್ವದಲ್ಲಿ ಮಾದರಿ ಪತ್ರಿಕಾ ದಿನಾಚರಣೆ ಕಾರ್ಯಕ್ರಮಕ್ಕೆ ಭರದ ಸಿದ್ಧತೆ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ

ಜುಲೈ 21 ರಂದು ಮಂಗಳವಾರ ಹಗರಿಬೊಮ್ಮನಹಳ್ಳಿ ಪಟ್ಟಣದ ಕೂಡ್ಲಿಗಿ ರಸ್ತೆಯಲ್ಲಿರುವ ಮಹರ್ಷಿ ಶ್ರೀ ವಾಲ್ಮೀಕಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿರುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಇಲಾಖೆಯ ಸರ್ಕಾರಿ ನೌಕರರು ಹಾಗೂ ಸರ್ಕಾರಿಯೇತರ ವ್ಯಕ್ತಿಗಳಿಗೆ ಸಾಮಾಜಿಕವಾಗಿ ಸನ್ಮಾನ ಮಾಡುವುದರ ಮೂಲಕ ತಾಲೂಕಿನ ಎಲ್ಲಾ ವ್ಯಕ್ತಿಗಳನ್ನು ಹಾಗೂ ಬುದ್ಧಿಜೀವಿಗಳನ್ನು ಕಕಾಪ ಧ್ವನಿ. ಹುರಿದುಂಬಿಸುತ್ತಿದ್ದಾರೆ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿರುವಂತಹ ಸಾಮಾಜಿಕ ಸೇವಕರುಗಳನ್ನು ಗುರುತಿಸುವ ಸಣ್ಣ ಪ್ರಯತ್ನದೊಂದಿಗೆ ಎಲೆಮರೆ ಕಾಯಿಯಂತಿರುವ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನು ಗುರುತಿಸುವ ಸಲುವಾಗಿ ಕಲೆ, ಸಾಹಿತ್ಯ, ಸಮಾಜಿಕವಾಗಿ ಕೆಲಸಮಾಡಿದ 25 ಸಾಧಕರನ್ನು ಗುರುತಿಸಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಇ ಮೂಲಕ ಸಾಧಕರ ಸಾಧನೆಯನ್ನು ಇಡೀ ಲೋಕಕ್ಕೆ ಕಾಣಿಸುವಂತಹ ಮಹತ್ವದಾಯಕ ಸಮಾಜಮುಖಿ ಕಾರ್ಯಕ್ರಮದ ಮೂಲಕ ಈ ಸಲದ ಪತ್ರಿಕಾ ದಿನಾಚರಣೆಯನ್ನು ವಿಶಿಷ್ಟ ಮತ್ತು ಅರ್ಥಪೂರ್ಣ ಆಚರಣೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಯ ತಾಲೂಕ ಘಟಕ ಪಾತ್ರವಹಿಸಿದೆ.

*ಪ್ರಶಸ್ತಿ ಪುರಸ್ಕೃತರು :

ಕಕಾಪಧ್ವನಿ ನೀಡುತ್ತೀರುವ, ಪ್ರತಿಷ್ಠಿತ 'ಜಾನಪದ ರತ್ನ' ಪ್ರಶಸ್ತಿಗೆ ನಾಡಿನ ಹೆಸರಾಂತ ಜೋಗತಿ ನೃತ್ಯ ಕಲಾವಿದೆ ಹೊಸಪೇಟೆ ತಾಲೂಕಿನ ಗೊಲ್ಲರಹಳ್ಳಿಯ ರಾಮಕ್ಕ ಜೋಗತಿ, ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಿನ ಯಡ್ರಮ್ಮನಹಳ್ಳಿಯ ಖ್ಯಾತ ತೊಗಲುಗೊಂಬೆ ಕಲಾವಿದರಾದ ಕಿಳ್ಳಿಕ್ಯಾತರ ನಿಂಗಪ್ಪ ಅವರುಗಳು ಆಯ್ಕೆಗೊಂಡಿದ್ದಾರೆ.

ಹಾಗೇನೆ ಉದ್ಯಮ ರತ್ನ' ಪ್ರಶಸ್ತಿಗೆ ತಾಲೂಕಿನ ಉಪನಾಯಕನಹಳ್ಳಿಯ ಶ್ರೀ ಲಕ್ಷ್ಮೀ ಪೌಲ್ಟ್ರಿ ಫಾರಂ ನ ವಂಶಿ ಸುಬ್ಬಾರೆಡ್ಡಿ ,ಲೋಕಪ್ಪನಹೊಲದ ಎರ್ ಮೆಟಾಲಿಕ್ಸ್ ನ ರಾಜಕುಮಾರ ಗೋಯೆಲ್, ಹಂಪಾಪಟ್ಟಣ ಬಳಿಯ ಆರ್ ಬಿಎನ್ ನ ಆಜಯ್ ಎಸ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶಿಕ್ಷಣರತ್ನ ಪ್ರಶಸ್ತಿಗೆ ಕೂಡ್ಲಿಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮೈಲೇಶ್ ಬೇವೂರ್, ಸಾಹಿತ್ಯ ರತ್ನ' ಪ್ರಶಸ್ತಿಗೆ ಜಿಲ್ಲೆಯ ಹಿರಿಯ ಸಾಹಿತಿ ಹಿ.ಮ. ಕೊಟ್ರಯ್ಯ, ನಾಟಿ ವೈದ್ಯಕೀಯ ರತ್ನ ಪ್ರಶಸ್ತಿ. ಹರಪನಹಳ್ಳಿ ತಾಲೂಕಿನ ಬಾಗಳಿಯ ಖ್ಯಾತ ಜನಪದ ವೈದ್ಯರಾದ ಡಾ.ಬಿ.ಬಿ.ಹೊಸೂರಪ್ಪ ಅವರ ಮುಡಿಗೇರಿದೆ.

ಇನ್ನೂ ಆರಕ್ಷಕ ರತ್ನ' ಪ್ರಶಸ್ತಿಗೆ ಹಗರಿಬೊಮ್ಮನಹಳ್ಳಿ ಪೊಲೀಸ್ ಇಲಾಖೆಯ ಮಲ್ಲೇಶ್ ನಾಯ್ಕ್, ದಶರಥ, ಹಾಗೂ ಮುಖ್ಯಮಂತ್ರಿ ಪದಕಕ್ಕೆ ಭಾಜನರಾಗಿರುವ ಕೂಡ್ಲಿಗಿಯ ಕೊಟ್ರೇಶ್ ಅವರಿಗೂ ಮತ್ತು ಸಾಹಿತ್ಯ ರತ್ನ ಕುಂ.ರವಿ ಗೂ ಪ್ರಶಸ್ತಿ ಒಲಿದಿದೆ.

ವೈದ್ಯಕೀಯ ಸೇವೆ ರತ್ನ ಪ್ರಶಸ್ತಿ :

ಸಾರ್ವಜನಿಕ ಆಸ್ಪತ್ರೆಯ ವೈದ್ಯರಾದ ಶ್ರೀ ಮತಿ ಡಾ.ಲಕ್ಷ್ಮೀದೇವಿ, ಶ್ರೀ ಡಾ.ವಿನಾಯಕ ಶ್ರೀ ಡಾ.ತಿಪ್ಪೇಸ್ವಾಮಿ ಹಾಗೂ ಶ್ರೀ ರಾಜೇಶ್ ನಾಯ್ಕ್ ಮತ್ತು ಆರೋಗ್ಯ ಇಲಾಖೆ ಆಂಬುಲೆನ್ಸ್ ಡ್ರೈವರ್ ಮೊಹಮ್ಮದ್ ರವರಿಗೂ ಚಾಲಕರತ್ನ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಉಳಿದಂತೆ ಹಗರಿಬೊಮ್ಮನಹಳ್ಳಿ ಪಟ್ಟಣದ ಕನ್ನಡಪರ ಹೋರಾಟಗಾರರು,ಸಮಾಜಿಕ ಕಳಕಳಿ ಇರುವ ವಿಶ್ವನಾಥ ಅವರಿಗೆ ಹೆಮ್ಮೆಯ ಕನ್ನಡಿಗ ಪ್ರಶಸಿ, ಕಂದಾಯ ಇಲಾಖೆಯ ಆಸಿಫ್ ಅಲಿಗೆ 'ಸೇವಾ ರತ್ನ,ಯುವ ರೈತ ಎ.ರೇವಪ್ಪಗೆ ರೈತ ಸೇವಾ ರತ್ನ ರಂಗನಟ ಹಂಚಿನಮನಿ ರಮೇಶಗೆ ರಂಗಭೂಮಿ ಕಲಾ ರತ್ನ' ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ಈಸಮಯದಲ್ಲಿಕಲೆ,ಸಾಹಿತ್ಯ,ರಂಗಭೂಮಿ,ಉದ್ಯಮ,ಆರೋಗ್ಯ,ಸಂಗೀತಾ ಸಾಹಿತ್ಯ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಅರ್ಥಪೂರ್ಣವಾಗಿ ಸಮಾಜಮುಖಿ ಕಾರ್ಯಕ್ರಮ ಜರುಗಲಿದೆ.

ವಿವಿಧ ಮಠಾಧೀಶರೂಗಳ ಸಾನಿಧ್ಯದಲ್ಲಿ ಹಾಗೂ ಕಾಂಗ್ರೆಸ್ ನ ಪ್ರದಾನ ಕಾರ್ಯದರ್ಶಿಯದಾ ಶ್ರೀಮತಿ ರಾಣಿ ಸಂಯುಕ್ತ ಅವರು ಸಾಧಕರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಿದ್ದಾರೆ.

ಹಗರಿಬೊಮ್ಮನಹಳ್ಳಿ ತಹಶಿಲ್ದಾರ ಆರ್.ಕವಿತಾ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿಯದಾ ವಿಶ್ವನಾಥ ಪಾಲಯ್ಯನಕೋಟೆ,ಪುರಸಭೆ ಮುಖ್ಯಾಧಿಕಾರಿ ಎಂ ಕೆ.ಮುಗುಳಿ, ಪೋಲಿಸ್ ಅಧಿಕಾರಿಗಳಾದ ಸಿಪಿಐ ವಿಕಾಸ ಲಮಾಣಿ, ಹಾಗೂ ಪಿಎ ಉಮಾಪತಿ ನಾಯ್ಕ್ , ಕ್ಷೇತ್ರ ಶಿಕ್ಷಣಾಧಿಕಾರಿ ಜಗದೀಶ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆ, ಗ್ರಾಮಪಂಚಾಯತಿ ಅಧಿಕಾರಿಗಳು ಮತ್ತು ಚಾಲಕ ಸಿಬ್ಬಂದಿಗಳು ಹಾಗೂ ಸರ್ಕಾರಿ ಇಲಾಖೆಗಳ ಗಣ್ಯರು ಕಾರ್ಯಕ್ರಮಕ್ಕೆ ಭಾಜನರಾಗುವುದರ ಮೂಲಕ ಸಾಕ್ಷಿಯಾಗಲಿದ್ದಾರೆ.

# ಕೆ. ಕರಿಯಪ್ಪ ಅವರ 60ನೇ ಜನ್ಮದಿನೋತ್ಸವ; ಆಶ್ರಮದಲ್ಲಿ ಅರ್ಥಪೂರ್ಣ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು



ಜು.18.ಭಾರತೀಯ ಜನತಾ ಪಾರ್ಟಿ ಸಿಂಧನೂರು ಘಟಕ ಹಾಗೂ ಕೆ. ಕರಿಯಪ್ಪ ಅಭಿಮಾನಿ ಬಳಗದ ವತಿಯಿಂದ, ಬಿಜೆಪಿ ಮುಖಂಡ ಕೆ. ಕರಿಯಪ್ಪ ಅವರ 60ನೇ ವರ್ಷದ ಜನ್ಮದಿನವನ್ನು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ 'ಶ್ರೀಮಠ ಸೇವಾ ಟ್ರಸ್ಟ್‌ನ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮ'ದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಆಶ್ರಮದ ನಿವಾಸಿಗಳಿಗೆ ಅನ್ನಸಂತರ್ಪಣೆ ಮಾಡುವುದರ ಜೊತೆಗೆ ಹಣ್ಣುಹಂಪಲುಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕೆ. ಕರಿಯಪ್ಪ ಅವರ ಸಮಾಜಮುಖಿ ಸೇವೆ ಹಾಗೂ ಸರಳ ವ್ಯಕ್ತಿತ್ವವನ್ನು ಗುರುತಿಸಿ, ಆಶ್ರಮದ ವತಿಯಿಂದ ಅವರನ್ನು ಕರುನಾಡ ಕಾರುಣ್ಯ ಕರುಣಾಮಯಿಗಳು ಎಂಬ ಗೌರವಾನ್ವಿತ ಬಿರುದಿನೊಂದಿಗೆ ಸನ್ಮಾನಿಸಲಾಯಿತು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷ ಡಾ. ಚನ್ನಬಸವ ಸ್ವಾಮಿ ಹಿರೇಮಠ, "ಕೆ. ಕರಿಯಪ್ಪ ಅವರು ಕಳೆದ ಹತ್ತು ವರ್ಷಗಳಿಂದ ಆಶ್ರಮಕ್ಕೆ ಆಧಾರಸ್ತಂಭವಾಗಿ ನಿಂತಿದ್ದಾರೆ. ವೃದ್ಧರಿಗೆ ಮಗನಾಗಿ, ಮೊಮ್ಮಗನಾಗಿ ಹಾಗೂ ಬುದ್ಧಿಮಾಂದ್ಯರಿಗೆ ಸಹೋದರನಾಗಿ ಅವರು ನೀಡುತ್ತಿರುವ ಪ್ರೀತಿ ಅಪಾರ. ಅವರ 'ಸುಂದರ ಸಿಂಧನೂರು' ಕನಸು ನನಸಾಗಲಿ" ಎಂದು ಹಾರೈಸಿದರು.

ಜನ್ಮದಿನದ ಅಂಗವಾಗಿ ಕೆ. ಕರಿಯಪ್ಪ ಅವರು ನಾಡಿನ ರೈತರ ಕಷ್ಟನಿವಾರಣೆಗಾಗಿ ಪರ್ಜನ್ಯಹೋಮ ಹಾಗೂ ವರುಣ ಯಾಗವನ್ನು ನೆರವೇರಿಸಿರುವುದು ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ. ಅಲ್ಲದೆ, ಅವರ ಪತ್ನಿ ಶ್ರೀಮತಿ ಕೆ. ವಿಜಯಲಕ್ಷ್ಮಿ ಅವರು ಸಹ ನೊಂದ ಜೀವಿಗಳಿಗೆ 'ಕಾರುಣ್ಯ ಮಾತೆ'ಯಾಗಿ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.ಈ ಕಾರ್ಯಕ್ರಮದಲ್ಲಿ ಆಶ್ರಮದ ಸದಸ್ಯೆ ಸುಜಾತ ಹಿರೇಮಠ, ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ, ಮರಿಯಪ್ಪ, ಜ್ಯೋತಿ, ಶರಣು ಸ್ವಾಮಿ ಹಾಗೂ ಕೆ. ಕರಿಯಪ್ಪ ಅವರ ಅಪಾರ ಅಭಿಮಾನಿಗಳು ಪಾಲ್ಗೊಂಡಿದ್ದರು.

## ಕಾರುಣ್ಯ ಆಶ್ರಮ ಸೇವಾ ಕಾರ್ಯ ಶ್ಲಾಘನೀಯ: ಶಾಸಕ ದೊಡ್ಡನಗೌಡ ಪಾಟೀಲ್

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು



ಜು.18.ಪವಿತ್ರದೇವಾಲಯದಂತಿರುವ ಕಾರುಣ್ಯ ನೆಲೆ ವೃದ್ಧಾಶ್ರಮಕ್ಕೆ ಭೇಟಿ ನೀಡಿದ್ದು ನನ್ನ ಜನ್ಮ ಸಾರ್ಥಕವಾಯಿತು. ಸರ್ಕಾರದ ಯಾವುದೇ ಅನುದಾನವಿಲ್ಲದೇ ನಿರ್ಗತಿಕರು ಮತ್ತು ಬುದ್ಧಿಮಾಂದ್ಯರಿಗೆ ಆಶ್ರಯ ನೀಡುತ್ತಿರುವ ಈ ಸಂಸ್ಥೆಯ ಸೇವೆ ನಿಜಕ್ಕೂ ಮಾದರಿಯಾಗಿದೆ" ಎಂದು ಕುಷ್ಟಗಿ ಶಾಸಕ ಹಾಗೂ ಸರ್ಕಾರದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್

ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ರಾಜ್ಯ ಪ್ರಶಸ್ತಿ ಪುರಸ್ಕೃತ ಶ್ರೀಮಠ ಸೇವಾ ಟ್ರಸ್ಟ್‌ನ 'ಕಾರುಣ್ಯ ನೆಲೆ' ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿದ ಅವರು, ಆಶ್ರಯದಾತರಿಗೆ ಹಣ್ಣು–ಹಂಪಲು ವಿತರಿಸಿ, ಅವರೊಂದಿಗೆ ಆತ್ಮೀಯವಾಗಿ ಮಾತನಾಡಿದರು. ನಂತರ ಸಂಸ್ಥೆಯ ವತಿಯಿಂದ ಶಾಸಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, "ಅದೆಷ್ಟೋ ಆಶ್ರಮಗಳನ್ನು ನೋಡಿದ್ದೇನೆ, ಆದ–ರೆ ಸಿಂಧನೂರಿನ ಕಾರುಣ್ಯ ಆಶ್ರಮ ನಿಜವಾದ ಕರುಣೆಯ ಮಂದಿರವಾಗಿದೆ. ಚನ್ನಬಸವ ಸ್ವಾಮೀಜಿ ಅವರು ತಮ್ಮ ತಂದೆ ಅಮರಯ್ಯ ಸ್ವಾಮಿಯವರ ಮಾರ್ಗದರ್ಶನದಲ್ಲಿ ಹಿರಿಯರು ಮತ್ತು ಬುದ್ಧಿಮಾಂದ್ಯರಿಗೆ ನೀಡುತ್ತಿರುವ ಸೇವೆ ಅನನ್ಯ. ಕುಷ್ಟಗಿಯ ರವಿಕುಮಾರ ಅಜ್ಜನವರ ಪ್ರೇರಣೆಯಿಂದ ನಡೆಯುತ್ತಿರುವ ಈ ಕಾರ್ಯ ಸಂಸ್ಥೆಯ ಘನತೆಯನ್ನು ಹೆಚ್ಚಿಸಿದೆ ಎಂದರು.

ಸಂಸ್ಥೆಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಲು ನಾನು ಸದಾ ಬೆಂಬಲವಾಗಿರುತ್ತೇನೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಸ್ವಂತ ಜಾಗ ಮತ್ತು ಅನುದಾನ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಆಶ್ರಮದ ಯಾವುದೇ ಸಮಸ್ಯೆಗಳಿಗೆ ನನ್ನನ್ನು ನೇರವಾಗಿ ಸಂಪರ್ಕಿಸಬಹುದು ಎಂದು ಭರವಸೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ಶಾಂಭವಿ ಪುಣ್ಯಾಶ್ರಮದ ಪೀಠಾಧಿಪತಿ ವೇ.ಮೂ. ವೀರೇಶಯಡಿಯೂರುಮಠ, ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ, ಆಶ್ರಮದ ಕಾರ್ಯಾಧ್ಯಕ್ಷ ಡಾ. ಚನ್ನಬಸವ ಸ್ವಾಮಿ ಹಿರೇಮಠ, ಮಂಜು ಕೊರಡಕೇರಾ, ಮಲ್ಲಿಕಾರ್ಜುನ, ಶರಣಪ್ಪ ನಾಯಕ ಕಸಬಾ ಲಿಂಗಸೂಗೂರು, ಆಶ್ರಮದ ಸಿಬ್ಬಂದಿ, ಪೊಲೀಸ್ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ಇಂಡಿಯ ಸಿದ್ದಸಿರಿ ಮಲ್ಟಿಸ್ಟೇಟ್ ಮಲ್ಟಿ ಪ್ರಪೋಜ್ ಸೊಸೈಟಿಯಲ್ಲಿ 200 ಕೋಟಿ ರೂ. ಠೇವಣಿ



• ಮಲ್ಲಮ್ಮ ನುಡಿ ವಾರ್ತೆ ಇಂಡಿ

:ನಗರದಲ್ಲಿರುವ ಸಿದ್ದಸಿರಿ ಬ್ಯಾಂಕು ಪ್ರಾರಂಭವಾಗಿ 20 ವರ್ಷ ಪೂರೈಸಿದೆ. ಇದೀಗ ಬ್ಯಾಂಕಿನಲ್ಲಿ 200 ಕೋಟಿ ರೂ ಠೇವಣಿ ಸಂಗ್ರಹವಾಗಿದೆ. ಇಂಡಿ ತಾಲೂಕಿನಲ್ಲಿಯೇ 18 ಶಾಖೆಗಳನ್ನು ತೆರೆಯಲಾಗಿದೆ. ಬ್ಯಾಂಕಿನ ಸೇವೆಯ ಬಗ್ಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಸಿದ್ದಸಿರಿ ಬ್ಯಾಂಕಿನ ನಿರ್ದೇಶಕ ಜಗದೀಶ ಕ್ಷತ್ರಿ ಹೇಳಿದರು. ಶನಿವಾರ ನಗರದ ಬ್ಯಾಂಕಿನಲ್ಲಿ 20 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಪೂಜೆ ನೆರವೇರಿಸಿ ಮಾತನಾಡಿದರು. ತಾಲೂಕಿನಲ್ಲಿ 18 ಶಾಖೆಗಳು ಕಾರ್ಯ ನೇರವೇರಿಸುತ್ತಿದ್ದು ಅವೆಲ್ಲ ಸೇರಿ ಒಟ್ಟು 500 ಕೋಟಿ ಠೇವಣಿ ಸಂಗ್ರಹಿಸಿವೆ. ಜನರ ಸಹಕಾರದಿಂದ ಈ ಸಂಸ್ಥೆ ಬೆಳೆದು ಹೆಮ್ಮರವಾಗಿದೆ. ಇದಕ್ಕೆ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಸ್ವಚ್ಚ ಆಡಳಿತ ಪಾರದರ್ಶಕ ನಿರ್ದೇಶಕ ಮಂಡಳಿ ಕಾರಣ ಎಂದರು. ರಾಜ್ಯದಲ್ಲಿ ಈ ಸಂಸ್ಥೆಯಲ್ಲಿ 5800 ಕೋಟಿ ಠೇವಣಿಯಿದೆ. ಪ್ರಸಕ್ತ ವರ್ಷದಿಂದ ಈ ಸಂಸ್ಥೆಯಲ್ಲಿ ಮಲ್ಟಿಸ್ಟೇಟ್ ಮಲ್ಟಿ ಪ್ರಪೋಜ್ ಆಗಿ ದೇಶವ್ಯಾಪಿ ತೆರೆಯಲು ಅನುಮತಿ ಪಡೆದು–ಕೊಂಡಿದೆ. ಈಗಾಗಲೇ ನಮ್ಮ ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ ಶಾಖೆಗಳನ್ನು ತೆರೆಯಲು ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆ. ಈ ಸಂಸ್ಥೆಯ ಅಂಗ ಸಂಸ್ಥೆಗಳಾದ ಸಕ್ಕರೆ ಕಾರ್ಖಾನೆ ಕೋಲ್ಡ ಸ್ಟೋರೇಜ್ ಕೃಷಿ ಕೇಂದ್ರಗಳು ಇಂಧನ ಕೇಂದ್ರಗಳು ಸಿದ್ದೇಶ್ವರ ಸೂಪರ್ ಮಾರ್ಕೆಟ ಸೂಪರ ಸ್ಪತಶಾಲಿಟಿ ಆಸ್ಪತ್ರೆ ಮುಂತಾದ ವಿಭಾಗಗಳಲ್ಲಿ ಸಿದ್ದಸಿರಿ ಕೆಲಸ ಮಾಡುತ್ತಿದೆ. ಈ ಸಂಸ್ಥೆಯಿಂದ 5000 ಕುಟುಂಬಗಳಿಗೆ ಕೆಲಸ ನೀಡಲಾಗಿದೆ ಎಂದರು. ಇಂಡಿ ತಾಲೂಕಿನಲ್ಲಿ ಪ್ರತಿ ನಿತ್ಯ 20 ಲಕ್ಷ ಪಿಗ್ಮಿ ಸಂಗ್ರಹಿಸಲಾಗುತ್ತಿದೆ. ಅದೇ ರೀತಿ ತಾಲೂಕಿನ್ಯಾದಂತ ವ್ಯಾಪಾರಸ್ಥರಿಗೆ ರಿಯಲ್ ಇಸ್ಟೇಟ ಮತ್ತು ಕೈಗಾರಿಕೆಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ ಎಂದರು.

# ಮೊಬೈಲ್ ಯುಗದಲ್ಲೂ ಜಾನಪದ ಕಲೆಗಳನ್ನು ಉಳಿಸಿ: ಚನ್ನಬಸಪ್ಪ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೊಬೈಲ್ ಯುಗದಲ್ಲೂ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಪ್ರಯತ್ನ ಅಗತ್ಯವಾಗಿದೆ. ಕಲಾವಿದರನ್ನು ಗುರುತಿಸಿ ಗೌರವಿಸುವ ಇಂತಹ ಕಾರ್ಯಕ್ರಮಗಳು ಅಭಿನಂದನೀಯವಾಗಿವೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಚನ್ನಬಸಪ್ಪ ಮುದೋಳ್ ಹೇಳಿದರು.

ತಾಲೂಕಿನ ಯರಗೋಳ ಗ್ರಾಮದಲ್ಲಿ ಭೀಮಜ್ಯೋತಿ ಗ್ರಾಮೀಣ ಅಭಿವೃದ್ಧಿ ಶಿಕ್ಷಣ ಸಂಸ್ಥೆ (ರಿ), ಯಾದಗಿರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಜಾನಪದ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದ್ದು, ಶಿಕ್ಷಕರು ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು' ಎಂದರು.

ಸರಸ್ವತಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಲೆಕ್ಕಾಧಿಕಾರಿ (ಕೆಎಸ್ಎಎಸ್) ವೆಂಕಟೇಶ ಚಟ್ನಳ್ಳಿ ಮಾತನಾಡಿ, 'ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಶ್ಲಾಘನೀಯ. ಯಾದಗಿರಿ ಜಿಲ್ಲೆ ಶೈಕ್ಷಣಿಕ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿದ್ದು, ವಿದ್ಯಾರ್ಥಿಗಳು ನಿರಂತರ ಪರಿಶ್ರಮದಿಂದ ಇನ್ನಷ್ಟು ಸಾಧನೆ ಮಾಡಬೇಕು' ಎಂದು ಕರೆ ನೀಡಿದರು.

ವಡಗೇರಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶಶೀಧರ ಹಿರೇಮಠ ಮಾತನಾಡಿ, 'ಕಠಿಣ ಪರಿಶ್ರಮ, ಪ್ರಾಮಾಣಿಕತೆ, ನಿಷ್ಠೆ ಮತ್ತು ಸಮಯಪ್ರಜ್ಞೆ ಜೀವನದಲ್ಲಿ ಯಶಸ್ಸಿನ ಮೂಲಮಂತ್ರಗಳಾಗಿವೆ. ವಿದ್ಯಾರ್ಥಿಗಳು ಸ್ಪಷ್ಟ ಗುರಿಯೊಂದಿಗೆ ಶ್ರಮಿಸಿದರೆ ಯಾವುದೇ ಸಾಧನೆ ಅಸಾಧ್ಯವಲ್ಲ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಉತ್ತಮ ಆಡಳಿತ ಸೇವಾರತ್ನ ಪ್ರಶಸ್ತಿಯನ್ನು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಚನ್ನಬಸಪ್ಪ ಮುದೋಳ್ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಲೆಕ್ಕಾಧಿಕಾರಿ (ಕೆಎಸ್ಎಎಸ್) ವೆಂಕಟೇಶ ಚಟ್ನಳ್ಳಿ ಅವರಿಗೆ ಪ್ರದಾನಿಸಲಾಯಿತು.

ಕರ್ನಾಟಕ ಕಲಾ ರತ್ನ ಪ್ರಶಸ್ತಿಯನ್ನು ಯರಗೋಳದ ಹಿರಿಯ ಬಯಲಾಟ ಕಲಾವಿದ ಯಂಕಣ್ಣ ಮಾಸ್ತರ ಅವರಿಗೆ ಹಾಗೂ ಕರ್ನಾಟಕ ಸಮಾಜ ಸೇವಾ ರತ್ನ ಪ್ರಶಸ್ತಿಯನ್ನು ಯಾದಗಿರಿ ಮತ್ತು ಕಲಬುರಗಿ ಈದಿನ.ಕಾಮ್ ಜಿಲ್ಲಾ ವರದಿಗಾರರಾದ ಕುಮಾರಿ ಗೀತಾ ಹೊಸಮನಿ ಅವರಿಗೆ ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಎಸ್ಎಸ್ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರು ಬಾಬು ಚವ್ಹಾಣ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪರಶುರಾಮ, ವೀರಪ್ಪ ಕನ್ನೆಳ್ಳಿ, ಮಹಾದೇವ ಬಾಬಳಿಗ, ಓಂಕಾರ್ ರೆಡ್ಡಿ, ಮಲ್ಲಣ್ಣ ಸಂಕನೂರ, ವಿಜಯಲಕ್ಷ್ಮಿ ಶಾಬಾದಿ, ಚನ್ನಬಸಪ್ಪ ಜೋಗಿ, ಚಂದ್ರಪ್ಪ ಗುಂಜನೂರು, ಜಯಶ್ರೀ ದೇವಣ್ಣ ದೇಸಿ, ಕಲ್ಪನಾ, ರಮೇಶ್, ಯಲ್ಲಾಲಿಂಗ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನೇತೃತ್ವವನ್ನು ಭೀಮಾಶಂಕರ ಎಂ. ಯರಗೋಳ ವಹಿಸಿಕೊಂಡಿದ್ದರು.

ಸಂದರ್ಭದಲ್ಲಿ ಪ್ರಾರ್ಥನಾ ಗೀತೆ, ಭರತನಾಟ್ಯ, ಸುಗಮ ಸಂಗೀತ, ಭಾವಗೀತೆ, ಸಮೂಹ ನೃತ್ಯ, ಜಾನಪದ ನೃತ್ಯ, ಜಾನಪದ ಸಂಗೀತ, ಲಂಬಾಣಿ ನೃತ್ಯ ಹಾಗೂ ಬಂಜಾರ ಗೀತೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರ ಮನಗೆದ್ದವು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ ಅಧಿಕಾರಿಗಳು, ಶಿಕ್ಷಕರು, ಕಲಾವಿದರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣದ ಜೊತೆಗೆ ಕೌಶಲಾಭಿವೃದ್ಧಿಯೂ ಅತ್ಯಗತ್ಯ: ಫಾ. ಶಾಬು ಫ್ರಾನ್ಸಿಸ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜು 18: ಡಾನ್ ಬೋಸ್ಕೋ ಡಿಬಿ ಟೆಕ್, ಯಾದಗಿರಿಯಲ್ಲಿ 2026–27ನೇ ಸಾಲಿನ ಐಟಿ ಕಸ್ಟಮರ್ ಕೇರ್ ಎಕ್ಸಿಕ್ಯೂಟಿವ್ (ITCCE) 57ನೇ ಬ್ಯಾಚ್–2ರ ಉದ್ಘಾಟನಾ ಸಮಾರಂಭವು ವಿಜೃಂಭಣೆಯಿಂದ ನಡೆಯಿತು. ಕಾರ್ಯಕ್ರಮವನ್ನು ಡಾನ್ ಬೋಸ್ಕೋ ಸಂಸ್ಥೆಯ ರೆಕ್ಟರ್ ಹಾಗೂ ಮ್ಯಾನೇಜರ್ ಫಾ. ಸಾಜಿ ಜಾರ್ಜ್ ಅವರು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ನಂತರ ನಡೆದ ಸಭೆಯ ಅಧ್ಯಕ್ಷತೆಯನ್ನು ಡಾನ್ ಬೋಸ್ಕೋ ಸೆಂಟರ್ ಫಾರ್ ಸೋಶಿಯಲ್ ಆಕ್ಷನ್‌ನ ನಿರ್ದೇಶಕರಾದ ಫಾ. ಶಾಬು ಫ್ರಾನ್ಸಿಸ್ ವಹಿಸಿದ್ದರು.

ಅಧ್ಯಕ್ಷೀಯ ನುಡಿಯಲ್ಲಿ ಫಾ. ಶಾಬು ಫ್ರಾನ್ಸಿಸ್ ಅವರು ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣದ ಜೊತೆಗೆ ಕೌಶಲ್ಯಾಭಿವೃದ್ಧಿಯೂ ಅತ್ಯಗತ್ಯವಾಗಿದೆ. ಡಾನ್ ಬೋಸ್ಕೋ ಡಿಬಿ ಟೆಕ್ ಸಂಸ್ಥೆಯು ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಯುವಜನರಿಗೆ ಉಚಿತ ಗುಣಮಟ್ಟದ ಕೌಶಲ್ಯ ತರಬೇತಿ, ಜೀವನ ಕೌಶಲ್ಯ, ಸಂವಹನ ಕೌಶಲ್ಯ ಹಾಗೂ ಉದ್ಯೋಗ ಮಾರ್ಗದರ್ಶನ ನೀಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿಸುವ ಮಹತ್ತರ ಕಾರ್ಯವನ್ನು ಮಾಡುತ್ತಿದೆ ಎಂದು ಹೇಳಿದರು. ಅಭ್ಯರ್ಥಿಗಳ ಪೋಷಕರು ನಮ್ಮ ಸಂಸ್ಥೆಯ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುವುದು ನಮ್ಮ ಮೊದಲ ಆದ್ಯತೆಯಾಗಿದೆ. ತರಬೇತಿ ಪೂರ್ಣಗೊಳಿಸಿದ ಪ್ರತಿಯೊಬ್ಬ ಅಭ್ಯರ್ಥಿಗೂ ಉತ್ತಮ ಉದ್ಯೋಗ ದೊರಕುವಂತೆ ಸಂಸ್ಥೆಯು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ತರಬೇತಿಯೊಂದಿಗೆ ಉತ್ತಮ ವ್ಯಕ್ತಿತ್ವ, ಶಿಸ್ತು ಮತ್ತು ಜೀವನ ಮೌಲ್ಯಗಳನ್ನು ಬೆಳೆಸಿಕೊಳ್ಳುವಂತೆ ಅಭ್ಯರ್ಥಿಗಳಿಗೆ ಕರೆ ನೀಡಿದರು. ಉದ್ಘಾಟನಾ ನುಡಿಯಲ್ಲಿ ಫಾ. ಸಾಜಿ ಜಾರ್ಜ್ ಅವರು ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಸಮಯಪಾಲನೆ, ಶಿಸ್ತು, ಪ್ರಾಮಾಣಿಕತೆ ಹಾಗೂ ನಿರಂತರ ಕಲಿಕೆಯ ಮನೋಭಾವ ಅತ್ಯಂತ ಮುಖ್ಯವಾಗಿದೆ. ತರಬೇತಿಯ ಪ್ರತಿಯೊಂದು ದಿನವೂ ನಿಮ್ಮ ಭವಿಷ್ಯವನ್ನು ರೂಪಿಸುವ ಅಮೂಲ್ಯ ಅವಕಾಶವಾಗಿದೆ. ಆದ್ದರಿಂದ ಪ್ರತಿಯೊಬ್ಬ ಅಭ್ಯರ್ಥಿಯೂ ತರಗತಿಗಳಿಗೆ ನಿಯಮಿತವಾಗಿ ಹಾಜರಾಗಿ, ತರಬೇತಿಯನ್ನು ಗಂಭೀರವಾಗಿ ಪರಿಗಣಿಸಿ, ತಾಂತ್ರಿಕ ಕೌಶಲ್ಯದ ಜೊತೆಗೆ ಉತ್ತಮ ಸಂವಹನ ಕೌಶಲ್ಯ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಜೀವನದಲ್ಲಿ ಯಶಸ್ಸು ಸಾಧಿಸಲು ಪರಿಶ್ರಮ ಮತ್ತು ಬದ್ಧತೆ ಅತ್ಯಗತ್ಯ ಎಂದು ತಿಳಿಸಿದರು.



ಮಲ್ಲಿಕಾರ್ಜುನ ಎಸ್. ಕುರುಕುಂದಿ ಅವರು ಮಾತನಾಡಿ, ಐಟಿಸಿಸಿಇ ತರಬೇತಿ ಕಾರ್ಯಕ್ರಮದ ಉದ್ದೇಶ, ತರಗತಿ ನಿಯಮಗಳು, ಹಾಜರಾತಿ ಹಾಗೂ ಉದ್ಯೋಗಾವಕಾಶಗಳ ಕುರಿತು ಅಭ್ಯರ್ಥಿಗಳಿಗೆ ವಿವರವಾದ ಮಾಹಿತಿ ನೀಡಿದರು. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಕನಿಷ್ಠ 85% ಹಾಜರಾತಿ ಕಡ್ಡಾಯವಾಗಿದ್ದು, ಪ್ರತಿಯೊಬ್ಬ ಅಭ್ಯರ್ಥಿಯೂ ನಿಯಮಿತವಾಗಿ ತರಗತಿಗಳಿಗೆ ಹಾಜರಾಗುವಂತೆ ಮನವಿ ಮಾಡಿದರು. ಕರ್ನಾಟಕ ರಾಜ್ಯ ಸಹಾಯಕ ವ್ಯವಸ್ಥಾಪಕರಾದ ಶ್ರೀ ಪ್ರಿಟ್ಟೋ ಥಾಮಸ್ ಅವರು ಹಂಚಿಕೊಂಡ ಮಾಹಿತಿಯಂತೆ, ಡಾನ್ ಬೋಸ್ಕೋ ಡಿಬಿ ಟೆಕ್, ಯಾದಗಿರಿ ಕೇಂದ್ರವು 86% ಅಭ್ಯರ್ಥಿಗಳ ಉಳಿಕೆ ಪ್ರಮಾಣ (Retention Rate) ಸಾಧಿಸಿದ್ದು, ಅತ್ಯಂತ ಕಡಿಮೆ ಡ್ರಾಪ್ ಔಟ್ ಪ್ರಮಾಣ ಹೊಂದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು. ಸಾರಿಗೆ ಸಮಸ್ಯೆಯಿಂದ ಬಳಲುವ ಅಭ್ಯರ್ಥಿಗಳ ಅನುಕೂಲಕ್ಕಾಗಿ ಫಾ. ಶಾಬು ಫ್ರಾನ್ಸಿಸ್ ಅವರ ವಿಶೇಷ ಪ್ರಯತ್ನದಿಂದ ವಸತಿ ಸೌಲಭ್ಯ ಕಲ್ಪಿಸಲಾಗಿದೆ ಎಂದು ತಿಳಿಸಿ, ತರಬೇತಿ ಅವಧಿಯುದ್ದಕ್ಕೂ ಗುಣಮಟ್ಟದ ತರಬೇತಿ, ವೈಯಕ್ತಿಕ ಮಾರ್ಗದರ್ಶನ ಹಾಗೂ ಉದ್ಯೋಗ ಸಹಾಯವನ್ನು ಸಂಸ್ಥೆ ಒದಗಿಸಲಿದೆ ಎಂದು ಭರವಸೆ ನೀಡಿದರು.

ಶರಣಪ್ಪ ಅವರು ಮಾತನಾಡಿ, ಕೌಶಲ್ಯಾಭಿವೃದ್ಧಿ, ಶಿಸ್ತು, ಆತ್ಮವಿಶ್ವಾಸ ಹಾಗೂ ಪರಿಶ್ರಮವೇ ಯಶಸ್ಸಿನ ಮೂಲಾಧಾರಗಳಾಗಿವೆ. ತರಬೇತಿಯನ್ನು ಕೇವಲ ಪ್ರಮಾಣಪತ್ರಕ್ಕಾಗಿ ಅಲ್ಲ, ಜೀವನವನ್ನು ರೂಪಿಸಿಕೊಳ್ಳುವ ಸುವರ್ಣಾವಕಾಶವೆಂದು ಪರಿಗಣಿಸಿ ಸಂಪೂರ್ಣ ಬದ್ಧತೆಯಿಂದ ಕಲಿಯಬೇಕು. ಉತ್ತಮ ಕೌಶಲ್ಯವನ್ನು ಪಡೆದು ಉದ್ಯೋಗವಂತರಾಗಿ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಅಭ್ಯರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದ ಅಂಗವಾಗಿ ಹೊಸದಾಗಿ ಸೇರ್ಪಡೆಯಾದ ಎಲ್ಲಾ ಅಭ್ಯರ್ಥಿಗಳಿಗೆ ತರಬೇತಿ ಕಿಟ್‌ಗಳನ್ನು ವಿತರಿಸಿ ಅವರ ಕೌಶಲ್ಯಾಭಿವೃದ್ಧಿ ಪಯಣಕ್ಕೆ ಅಧಿಕೃತ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ದೇವೀಂದ್ರಪ್ಪ ಬಿ. ತೆಲಗೂರು (WeLive ಯೋಜನೆ), ಸೂರ್ಯಕಾಂತ್ (MINDS ಯೋಜನೆ), ಪ್ರತಿಭಾ ವೈ. (ಐಟಿಸಿಸಿಇ ಡೊಮೇನ್ ತರಬೇತಿದಾರರು), ಡಯಾನಾ (ಡಿಜಿಟಲ್ ಮಿತ್ರ ಡೊಮೇನ್ ತರಬೇತಿದಾರರು), ಜೆಸ್ಸಿಕಾ (ಇಂಗ್ಲಿಷ್ ಕಮ್ಯುನಿಕೇಟಿವ್ ತರಬೇತಿದಾರರು) ಸೇರಿದಂತೆ ಸಂಸ್ಥೆಯ ಸಿಬ್ಬಂದಿ ಹಾಗೂ ಎಲ್ಲಾ ಅಭ್ಯರ್ಥಿಗಳು ಉಪಸ್ಥಿತರಿದ್ದರು.

# ಗ್ಯಾಲಕ್ಸಿ ಕ್ಲಬ್-ಎಂಡಿಆರ್‌ಟಿ ಸಾಧನೆ ಶೇಖರ ಮುದುಗಲರಿಗೆ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ



ತಾಲೂಕಿನ ರಾಜನಕೋಳೂರು ಗ್ರಾಮದವರಾದ ಎಲ್‌ಐಸಿ ಏಜೆಂಟ್ ಶೇಖರ ತಮ್ಮಣ್ಣ ಮುದುಗಲ ಅವರು ಎಲ್‌ಐಸಿ ಕ್ಷೇತ್ರದಲ್ಲಿ ನಿರಂತರವಾಗಿ ಅತ್ಯುತ್ತಮ ಸಾಧನೆ ಮಾಡಿ ಗಮನ ಸೆಳೆದಿದ್ದಾರೆ. ಕೇವಲ ಮೂರು ವರ್ಷಗಳ ಅವಧಿಯಲ್ಲಿ ಸತತವಾಗಿ ಮೂರು ಬಾರಿ ಗ್ಯಾಲಕ್ಸಿ ಕ್ಲಬ್ ಸದಸ್ಯತ್ವ ಹಾಗೂ ಎಂಡಿಆರ್‌ಟಿ (MDRT) ಗೌರವವನ್ನು ಪಡೆದು ಅಪರೂಪದ ಸಾಧನೆ ಮಾಡಿದ್ದಾರೆ. ಅಲ್ಲದೆ, ಶಹಾಪುರ ಎಲ್‌ಐಸಿ ಶಾಖೆಯ 25ನೇ ಬೆಳ್ಳಿ ಹಬ್ಬದ ಅಂಗವಾಗಿ ನಡೆದ ವಿಶೇಷ ವ್ಯವಹಾರ ಅಭಿಯಾನದಲ್ಲಿ ಅತ್ಯಧಿಕ ವಿಮಾ ಪ್ರಪೋಸಲ್‌ಗಳನ್ನು ದಾಖಲಿಸಿ, ಶಾಖೆಯ ನಂಬರ್ ಒನ್ ಸಾಧಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರ ಈ ಸಾಧನೆಯನ್ನು ಗುರುತಿಸಿ ಜುಲೈ 19, 2026 (ರವಿವಾರ) ರಂದು ಶಹಾಪುರ ಎಲ್‌ಐಸಿ ಶಾಖೆಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಗುತ್ತಿದೆ.

ಕಾರ್ಯಕ್ರಮದಲ್ಲಿ ಶಹಾಪುರ ಎಲ್‌ಐಸಿ ಶಾಖೆಯ ಬ್ರಾಂಚ್ ಮ್ಯಾನೇಜರ್, ಹುಣಸಗಿ ಎಲ್‌ಐಸಿ ಶಾಖೆಯ ಬ್ರಾಂಚ್ ಮ್ಯಾನೇಜರ್, ಎಬಿಎಂ (ABM), ಶಹಾಪುರ ಶಾಖೆಯ ಸಿಬ್ಬಂದಿ ವರ್ಗ ಹಾಗೂ ಎಲ್‌ಐಸಿ ಏಜೆಂಟರು ಉಪಸ್ಥಿತರಿದ್ದು, ಶೇಖರ ಮುದುಗಲ ಅವರ ಸಾಧನೆಯನ್ನು ಅಭಿನಂದಿಸಿ ಗೌರವಿಸಲಿದ್ದಾರೆ. ಶೇಖರ ಮುದುಗಲ ಅವರ ಈ ಸಾಧನೆ ವಿಮಾ ಕ್ಷೇತ್ರದಲ್ಲಿ ಸೇವಾ ಮನೋಭಾವ, ಪರಿಶ್ರಮ ಹಾಗೂ ಗ್ರಾಹಕರ ವಿಶ್ವಾಸದಿಂದ ಉನ್ನತ ಸಾಧನೆ ಮಾಡಬಹುದು ಎಂಬುದಕ್ಕೆ ಉತ್ತಮ ನಿದರ್ಶನವಾಗಿದೆ.

# ಗ್ರಾಮಸ್ಥರಿಂದ ಮಳೆಗಾಗಿ ದೇವರಲ್ಲಿ ಪ್ರಾರ್ಥನೆ

• ಮಲ್ಲಮ್ಮ ನುಡಿ ವಾರ್ತೆಮುದಗಲ್



ಸಂಸ್ಕಾರ ಬದ್ಧವಾಗಿ ಪಟ್ಟಣ ಸಮೀಪದ ಬನ್ನಿಗೋಳ ಗ್ರಾಮಸ್ಥರು ಮಳೆಗಾಗಿ ಮಡಿ ಸಮೇತ ಶ್ರದ್ಧಾ ಭಕ್ತಿಯಿಂದ ಪ್ರಾರ್ಥನೆಗುರುವಾರ ಪ್ರಾರ್ಥನೆ ಮಾಡಿದರು.

ಬಿತ್ತನೆ ಸಂದರ್ಭದಲ್ಲಿ ಮಳೆ ಕೈಕೊಟ್ಟಿರುವುದು ರೈತರನ್ನು ಆತಂಕಕ್ಕೆ ದೂಡಿದೆ. ಮಳೆಗಾಗಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಲು ಗ್ರಾಮಸ್ಥರೆಲ್ಲರೂ ನಿರ್ಧರಿಸಿ, ಮಳೆಗಾಗಿ ದೇವರಲ್ಲಿ ಪ್ರಾರ್ಥಿಸುವುದು ನಮ್ಮ ಸಂಸ್ಕೃತಿಯಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ. ಬನ್ನಿಗೋಳ ಗ್ರಾಮದಲ್ಲಿ ರೈತರೆಲ್ಲರೂ ಕೃಷಿ ಚಟುವಟಿಕೆ ಸ್ಥಗಿತಗೊಳಿಸಿ

ಗುರುವಾರ ದಿಂದ ಐದು ದಿನಗಳಕಾಲ ಭಜನಾ ಕಾರ್ಯಕ್ರಮ ಏರ್ಪಡಿಸಿ, ಗ್ರಾಮಸ್ಥರು ದ್ಯಾಮಮ್ಮ ದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಳೆ ನಿರೀಕ್ಷೆಗಾಗಿ ದೇವಿಗೆ ಉಡಿ ತುಂಬಿ ಇಷ್ಟಾರ್ಥ ಸಿದ್ಧಿಗಾಗಿ ಮಡಿ ಸಮೇತ ಬಾವಿಯಿಂದ ನೀರು ತೆಗೆದು ಗುಡ್ಡೆ ಕಲ್ಲಿಗೆ ಪೂಜೆ ಸಲ್ಲಿಸಿ ನೀರು ಹಾಕಿ ಪ್ರಸ್ತ ಮಾಡಿದರು.

# ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ದೀರ್ಘಕಾಲದ ಸಹಭಾಗಿತ್ವ ಅಗತ್ಯ: ಲೋಕಸಭಾ ಸದಸ್ಯ ಜಿ.ಕುಮಾರ

ರಾಯಚೂರು ಜು 18 : ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಮಾತ್ರವಲ್ಲದೆ. ವಿವಿಧ ಕಂಪನಿಗಳ ಪರಿಣಿತಿ, ಅನುಭವ, ತಾಂತ್ರಿಕ ಜ್ಞಾನ ಹಾಗೂ ಸಮಾಜದೊಂದಿಗೆ ದೀರ್ಘಕಾಲದ ಸಹಭಾಗಿತ್ವವೂ ಅಗತ್ಯವಾಗಿದೆ ಎಂದು ರಾಯಚೂರು ಲೋಕಸಭಾ ಕ್ಷೇತ್ರದ ಸದಸ್ಯರಾದ ಜಿ.ಕುಮಾರ್ ನಾಯಕ ಅವರು ಹೇಳಿದರು.

ಜುಲೈ 18ರ ಶನಿವಾರ ದಂದು ನಗರದ ಬಿಜನಗೇರಾ ರಸ್ತೆಯ ನವೋದಯ ತಾಂತ್ರಿಕ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ರಾಯಚೂರು ಮಹಾನಗರ ಪಾಲಿಕೆಯ ವತಿಯಿಂದ ರಾಯಚೂರು ಇಂಪ್ಯಾಕ್ಟ್ ಸಮ್ಮಿಟ್–2026ರ ಜಿಲ್ಲಾ ಮಟ್ಟದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಸಮಾವೇಶ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಹಿಂದೆ ರಾಯಚೂರಿನ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ದಿನಗಳನ್ನು ಸ್ಮರಿಸಿದ ಅವರು, ಈ ಹಿಂದೆ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಬಳಿ ಸಾಕಷ್ಟು ಹಣದ ಕೊರತೆ ಇತ್ತು. ಆದರೆ ಈಗ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಲಕ್ಷಾಂತರ ಕೋಟಿ ರೂಪಾಯಿಗಳ ಬಜೆಟ್ ಹೊಂದಿದ್ದರೂ ಅಭಿವೃದ್ಧಿಯ ಎಲ್ಲ ಅಗತ್ಯಗಳನ್ನು ಪೂರೈಸಲು ಅದು ಸಾಕಾಗುತ್ತಿಲ್ಲ. ಆದ್ದರಿಂದ ಸರ್ಕಾರದ ಜೊತೆಗೆ ಖಾಸಗಿ ಸಂಸ್ಥೆಗಳ ಸಹಭಾಗಿತ್ವ ಅತ್ಯಗತ್ಯವಾಗಿದೆ ಎಂದರು. ಕಂಪನಿಗಳು ತಮ್ಮ ಲಾಭದ ಒಂದು ಭಾಗವನ್ನು ಸಮಾಜದ ಅಭಿವೃದ್ಧಿಗೆ ಬಳಸುವ ಉದ್ದೇಶದಿಂದ ಸಿಎಸ್‌ಆರ್ ಅನುದಾನದ ವ್ಯವಸ್ಥೆ ಜಾರಿಗೆ ಬಂದಿದೆ. ಆದರೆ ರಾಯಚೂರಿಗೆ ಕೇವಲ ಹಣ ನೀಡಿದರೆ. ಸಾಕಾಗುವುದಿಲ್ಲ. ಕಂಪನಿಗಳ ಪ್ರತಿನಿಧಿಗಳು ಜಿಲ್ಲೆಗೆ ಬಂದು ಇಲ್ಲಿನ ಜನರು, ಅಧಿಕಾರಿಗಳು ಹಾಗೂ ಸ್ಥಳೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ತಮ್ಮ ಪರಿಣತಿಯ ಆಧಾರದ ಮೇಲೆ ಜಿಲ್ಲೆಯ ಅಭಿವೃದ್ದಿಗೆ ಒತ್ತು ನೀಡಬೇಕು ಎಂದು ಲೋಕಸಭಾ ಸದಸ್ಯರು ಕರೆ ನೀಡಿದರು.

ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ದೇಶದ ಇತರೆ ಭಾಗಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿರುವ ಅಭಿವೃದ್ಧಿ ಮಾದರಿಗಳು, ಸಹಕಾರ ಸಂಘಗಳು, ಹೈನುಗಾರಿಕೆ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದ ಉತ್ತಮ ಅನುಭವಗಳನ್ನು ರಾಯಚೂರಿಗೂ ತರಬೇಕು. ಈ ಅನುಭವ ಹಂಚಿಕೆಯಿಂದ ಜಿಲ್ಲೆಯ ಅಭಿವೃದ್ಧಿಗೆ ಹೊಸ ದಿಕ್ಕು ದೊರೆಯಲಿದೆ ಎಂದರು.

ಶಾಲೆಗಳಲ್ಲಿ ಕಟ್ಟಡ, ತರಗತಿ ಕೊಠಡಿ ಅಥವಾ ಶೌಚಾಲಯ ನಿರ್ಮಾಣದಂತಹ ಕಾಮಗಾರಿಗಳಿಗೆ ಮಾತ್ರ ಸೀಮಿತವಾಗದೆ. ಶಿಕ್ಷಣದ ಗುಣಮಟ್ಟ, ವಿದ್ಯಾರ್ಥಿಗಳ ಪ್ರೇರಣೆ, ಕೌಶಲ್ಯಾಭಿವೃದ್ಧಿ, ಆರೋಗ್ಯ ಹಾಗೂ ಜನರಿಗೆ ಪೂರಕವಾದ ಯೋಜನೆಗಳಿಗೂ ಆದ್ಯತೆ ನೀಡಬೇಕು. ಸರ್ಕಾರದ ಯೋಜನೆಗಳಲ್ಲಿ ಇರುವ ಕೊರತೆಗಳನ್ನು ಗುರುತಿಸಿ ಅವುಗಳನ್ನು ಸಿಎಸ್‌ಆರ್ ಮೂಲಕ ತುಂಬುವ ಕೆಲಸವಾಗಬೇಕು ಎಂದರು.

# ದಮ್ಮೂರ : 389 ನೇ ಶಿವಾನುಭವ ಗೋಷ್ಠಿಯಲ್ಲಿ ಪ್ರಶಸ್ತಿಗಾಗಿ ಅರ್ಜಿ

• ಮಲ್ಲಮ್ಮ ನುಡಿ ವಾರ್ತೆಯಲಬುರ್ಗಾ



ತಾಲೂಕಿನ ಸುಕ್ಷೇತ್ರವಾದ ಭಾವೈಕ್ಯತೆಯ ಗ್ರಾಮ ದಮ್ಮೂರಿನಲ್ಲಿ, 2025–2026 ಸಾಲಿನ ಎಸ್.ಎಸ್ ಎಲ್.ಸಿ. ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡ 80% ರಷ್ಟು ಮೇಲೆ ಪರ್ಸೆಂಟೇಜ್ ಮಾಡಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಶಿವಾನುಭವಸೇವಾ ಸಮಿತಿಯಿಂದ, ಅಗಷ್ಟ 11 ರಂದು ಮಂಗಳವಾರ, ನಾಗರ ಅಮಾವಾಸ್ಯೆ ಚತುರ್ದಶಿ ನಿಮಾತ್ಯವಾಗಿ ಅಂದು ವಿಶೇಷವಾಗಿ ದಮ್ಮೂರ ಗ್ರಾಮದ ವಿದ್ಯಾರ್ಥಿಗಳಿಗೆ, ಗೌರವಿಸಿ ಸನ್ಮಾನ ಮತ್ತು ಪ್ರಶಸ್ತಿ ನೀಡಿ, ಗೌರವಿಸಲಾಗುವುದು. ಆದಕಾರಣ ವಿದ್ಯಾರ್ಥಿಗಳು ಇದೇ ಜುಲೈ 31ನೇ ತಾರೀಕಿನೊಳಗೆ, ಶ್ರೀ ಮಠದ ಒಡೆ–ಯರಾದ, ಹನುಮಂತಪ್ಪಜ್ಜನವರಲ್ಲಿ ತಮ್ಮ ಇತ್ತೀಚಿನ ಫೋಟೋ, ಖಖಐಅ ಅಂಕಪಟ್ಟಿ ಜೆರಾಕ್ಸ್, ಮತ್ತು ದ್ವಿತೀಯ ಪಿ.ಯು.ಸಿ ಅಂಕಪಟ್ಟಿ ಜೆರಾಕ್ಸ್ ಹಾಗೂ ಆಧಾರ್ ಕಾರ್ಡ್ ಸಲ್ಲಿಸಿ, ಹೆಸರು ನೋಂದಾಯಿಸಿಕೊಳ್ಳಬೇಕೆಂದು ದಮ್ಮೂರಿನ ಶ್ರೀ ಭೀಮಾಂಬಿಕಾದೇವಿ ಶಿವಾನುಭವ ಸೇವಾ ಸಮಿತಿಯ ಅದ್ಯಕ್ಷರು, ಸದಸ್ಯರು ವಿನಂತಿಸಿದ್ದಾರೆ.

# ಸಾರಿಗೆ ನಿಯಮಗಳ ಉಲ್ಲಂಘಿಸಿದರೆ ಕಾನೂನು ಕ್ರಮ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಜಿಲ್ಲೆಯ ಎಲ್ಲಾ ಶಾಲಾ ಕಾಲೇಜು ವಾಹನಗಳ ಮಾಲೀಕರು ಸಾರಿಗೆ ನಿಯಮಗಳನ್ನು ಪಾಲಿಸಬೇಕು. ಶಾಲಾ ಕಾಲೇಜು, ವಿದ್ಯಾಸಂಸ್ಥೆಗಳ ವಾಹನಗಳ ಮಾಲೀಕರು, ಪ್ರಾಂಶುಪಾಲರು ತಮ್ಮ ವ್ಯಾಪ್ತಿಯ ವಾಹನಗಳ ಅರ್ಹತಾ ಪತ್ರ ನವೀಕರಿಸದ, ರಹದಾರಿ ಮಾನ್ಯತೆ ಮುಕ್ತಾಯಗೊಂಡಿರುವ, ತೆರಿಗೆ ಪಾವತಿಸದ, ವಿಮೆ ನವೀಕರಿಸದ ಹಾಗೂ ವಾಹನ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ನವೀಕರಿಸದ ವಾಹನಗಳ ಮಾಲೀಕರುಗಳು ತಮ್ಮ ದಾಖಲೆಗಳನ್ನು ನವೀಕರಿಸಿಕೊಳ್ಳಲು ತಿಳಿಸಿದೆ. ಮಕ್ಕಳ ಸುರಕ್ಷತೆಯ ಹಿತದೃಷ್ಟಿಯಿಂದ ವಿಶೇಷವಾಗಿ ಶಾಲಾ ವಾಹನಗಳು ಮಾನ್ಯತೆ ಹೊಂದಿದ ಅರ್ಹತಾಪ್ರಮಾಣ ಪತ್ರ, ಚಾಲಕರ ಚಾಲನಾ ಅನುಜ್ಞಾ ಪತ್ರ, ರಹದಾರಿ ಪ್ರಮಾಣ ಪತ್ರ, ತೆರಿಗೆ ರಸೀದಿ, ವಿಮೆ ಪ್ರಮಾಣ ಪತ್ರ ಹಾಗೂ ವಾಹನ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರಗಳೊಂದಿಗೆ ಶಾಲಾ ವಾಹನಗಳ ಮಾಲೀಕರು ತಮ್ಮ ಶಾಲಾ ಕಾಲೇಜು ವಾಹನಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಸ್ಪೀಡ್ ಗೌರರ್, ಜಿ.ಪಿ.ಎಸ್. ಹಾಗೂ ಅಗ್ನಿಶಾಮಕ ಅಳವಡಿಸಿರಬೇಕು. ನಿಗದಿತ ಆಸನ ಮಿತಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ಕರೆದೊಯ್ಯಬಾರದು. ಶಾಲಾ ಕಾಲೇಜು ವಾಹನಗಳು ನೋಂದಣಿ ಆದ ದಿನಾಂಕದಿಂದ 15 ವರ್ಷ ಮೀರಿರಬಾರದು.

# ಪ್ರಧಾನಿ ನರೇಂದ್ರ ಮೋದಿ ಅವರಿಂದ ಹೊಸ ರೂಪ ಪಡೆದ ಕೊಪ್ಪಳ ರೈಲು ನಿಲ್ದಾಣ ಲೋಕಾರ್ಪಣೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಕೇಂದ್ರಸರ್ಕಾರದ 'ಅಮೃತ್ ಸ್ಟೇಷನ್' ಯೋಜನೆಯಡಿ ಹೊಸ ರೂಪ ಪಡೆದ ಕೊಪ್ಪಳ ರೈಲ್ವೆ ನಿಲ್ದಾಣವನ್ನು ಭಾರತದ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರು ಜುಲೈ 17 ರಂದು ಲೋಕಾರ್ಪಣೆ ಮಾಡಿದರು. ಕೊಪ್ಪಳ ಜಿಲ್ಲೆಯ ಜೊತೆಗೆ ರಾಜ್ಯದ 4 ನಿಲ್ದಾಣಗಳು ಸೇರಿದಂತೆ ದೇಶದ ಒಟ್ಟು 75 ರೈಲು ನಿಲ್ದಾಣಗಳು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಮೇಲ್ದರ್ಜೆಗೇರಿದ್ದು, ಪ್ರಧಾನಮಂತ್ರಿಗಳು ಪಂಜಾಬ್‌ನ ಜಲಂಧರ್ ಕಂಟೋನ್ಮೆಂಟ್‌ನಿಂದ ವರ್ಚುವಲ್ ಮೂಲಕ ಲೋಕಾರ್ಪಣೆಗೊಳಿಸಿದರು. ಲೋಕಾರ್ಪಣೆ ಹಿನ್ನೆಲೆಯಲ್ಲಿ ಕೊಪ್ಪಳ ರೈಲು ನಿಲ್ದಾಣವನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಬಹು ಕೋಟಿ ರೂ.ಗಳ ವೆಚ್ಚದಲ್ಲಿ, ಅಮೃತ ಭಾರತ ನಿಲ್ದಾಣ ಯೋಜನೆಯಡಿಯಲ್ಲಿ ಕರ್ನಾಟಕದ 50ಕ್ಕೂ ಅಧಿಕ ರೈಲು ನಿಲ್ದಾಣಗಳ ಅಭಿವೃದ್ಧಿ ಕಾರ್ಯ ಚಾಲನೆಯಲ್ಲಿದ್ದು, ಈ 50 ನಿಲ್ದಾಣಗಳ ಪೈಕಿ ಅಭಿವೃದ್ಧಿ ಕಾರ್ಯ ಪೂರ್ಣಗೊಂಡ ರಾಜ್ಯದ ಕೊಪ್ಪಳ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಬಾಗಲಕೋಟೆ ಜಿಲ್ಲೆಯ ಬಾದಾಮಿ ಹಾಗೂ ಧಾರವಾಡ ಜಿಲ್ಲೆಯ ಅಳ್ನಾವರ ರೈಲು ನಿಲ್ದಾಣಗಳು ಪ್ರಯಾಣಿಕರ ಬಳಕೆಗೆ ಇಂದು ಲೋಕಾರ್ಪಣೆಗೊಂಡವು. ಹೊಸ ರೂಪದಲ್ಲಿ ನಿಲ್ದಾಣಗಳು: ಪುನರಾಭಿವೃದ್ಧಿಗೊಂಡ ಕೊಪ್ಪಳ ಸೇರಿದಂತೆ ರಾಜ್ಯದ ಅಳ್ನಾವರ, ಬಾದಾಮಿ ಮತ್ತು ಬಂಟ್ವಾಳ ರೈಲು ನಿಲ್ದಾಣಗಳು ಆಧುನಿಕ ಸೌಲಭ್ಯಗಳು, ಸುಧಾರಿತ ಪ್ರವೇಶ ವ್ಯವಸ್ಥೆ, ಉನ್ನತೀಕೃತ ಪ್ರಯಾಣಿಕರ ಸೌಲಭ್ಯಗಳು, ವಿಶಾಲ ಸಂಚಾರ ಸ್ಥಳಗಳು ಹಾಗೂ ನವೀಕೃತ ನಿಲ್ದಾಣ ಪರಿಸರದೊಂದಿಗೆ ಹೊಸ ರೂಪ ಪಡೆದುಕೊಂಡಿದೆ. ದೇಶದ ರೈಲ್ವೆ ನಿಲ್ದಾಣಗಳ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಮಹತ್ವದ ಮೈಲುಗಲ್ಲಾಗಿದೆ. ಹೊಸದಾಗಿ ನಿರ್ಮಾಣಗೊಂಡ ರಾಜ್ಯದ ಕೊಪ್ಪಳ ರೈಲು ನಿಲ್ದಾಣದಲ್ಲಿ ಹೈಟೆಕ್ ಎಸ್ಕಲೇಟರ್‌ಗಳು, 12 ಮೀಟರ್ ಅಗಲದ ವಿಶಾಲ ಮೇಲ್ಸೇತುವೆಗಳು, ಹಿರಿಯ ನಾಗರಿಕರು ಮತ್ತು ವಿಶೇಷಚೇತನರಿಗೆ ಸುಲಭ ಸಂಚಾರ ಸೇರಿದಂತೆ ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ಒಳಗೊಂಡಿದೆ. ಸುಸಜ್ಜಿತ ವಿಶ್ರಾಂತಿ ಕೊಠಡಿ, ವಿದ್ಯುತ್ ಲೈಟ್, ವಾಹನ ಪಾರ್ಕಿಂಗ್ ವ್ಯವಸ್ಥೆ, ಭದ್ರತೆಗಾಗಿ ಸಿಸಿಟಿವಿ, ಮೊದಲಿಗಿಂತ ಅಧಿಕ ಮತ್ತು ಹೆಚ್ಚು ಉದ್ದನೆಯ ಪ್ಲಾಟ್‌ಫಾರ್ಮ್‌ಗಳು ಸೇರಿದಂತೆ ಎಲ್ಲ ಸೌಕರ್ಯಗಳು ಈ ನಿಲ್ದಾಣ ಹೊಂದಿದೆ. ಪ್ರತ್ಯೇಕ ಪ್ರವೇಶ, ನಿರ್ಗಮನ ದ್ವಾರಗಳು, ಉಚಿತ ವೈಫೈ ಸೌಲಭ್ಯ, ಉನ್ನತೀಕರಿಸಿದ ನಿರೀಕ್ಷಣಾ ಕೊಠಡಿಗಳು, ಸ್ಕೈವಾಕ್ ಜೊತೆಗೆ ಎರಡು ಲಿಫ್ಟಳು ಇವೆ. ನಿಲ್ದಾಣದ ಮುಂಭಾಗದ ಸೌಂದರ್ಯ–ಕ್ಕೆ ಆದ್ಯತೆ ನೀಡಲಾಗಿದೆ. ಕೊಪ್ಪಳ ಸೇರಿದಂತೆ ಅಳ್ನಾವರ, ಬಾದಾಮಿ, ಬಂಟ್ವಾಳ ನಿಲ್ದಾಣಗಳಲ್ಲೂ ಇದೇ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ನಾಲ್ಕು ನಿಲ್ದಾಣಗಳಿಗೆ ಅಂದಾಜು 80 ಕೋಟಿ ರೂಪಾಯಿ ಖರ್ಚಾಗಿದೆ. ಕೊಪ್ಪಳ ರೈಲು ನಿಲ್ದಾಣದ ಪುನರಾಭಿವೃದ್ಧಿಗೆ ಅಂದಾಜು ರೂ.21.14 ಕೋಟಿ ವೆಚ್ಚ ಮಾಡಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುನಿರಾಬಾದ್ ತುಂಗಾಭದ್ರಾ ಯೋಜನೆ (ಕಾಡಾ) ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹಸನ್‌ಸಾಬ್ ನಬಿಸಾಬ್ ದೋಟಿಹಾಳ ಅವರು ಮಾತನಾಡಿ, ಕೊಪ್ಪಳ ಜಿಲ್ಲಾ ಕೇಂದ್ರವಾಗಿದ್ದು, ಇಲ್ಲಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಉನ್ನತೀಕರಿಸಿದ ರೈಲು ನಿಲ್ದಾಣದ ಅಗತ್ಯವಿತ್ತು. ಕೇಂದ್ರ ಸರ್ಕಾರದ ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿ ನಮ್ಮ ಜಿಲ್ಲಾ ಕೇಂದ್ರದ ರೈಲು ನಿಲ್ದಾಣ ಎಲ್ಲ ಮೂಲಸೌಕರ್ಯಗಳೊಂದಿಗೆ ಪುನರಾಭಿವೃದ್ಧಿಗೊಂಡಿದ್ದು, ಅಭಿವೃದ್ಧಿಯೆಡೆಗಿನ ಮಹತ್ವದ ಹೆಜ್ಜೆಯಾಗಿದೆ. ಇದರಂತೆ ಕುಷ್ಟಗಿಯಿಂದ ಹುಬ್ಬಳ್ಳಿಗೆ ರೈಲು ಸಂಪರ್ಕವಿರುವಂತೆ ಕುಷ್ಟಗಿಯಿಂದ ಬೆಂಗಳೂರಿಗೆ ನೇರ ಸಂಪರ್ಕ ಒದಗಿಸಲು ಇಲಾಖೆಯ ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ಈ ಬಗ್ಗೆ ಸ್ಪಷ್ಟ ಯೋಜನೆ ರೂಪಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು. ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವರಾದ ವಿ.ಸೋಮಣ್ಣ ಅವರು ನಮ್ಮ ರಾಜ್ಯದವರೇ ಇದ್ದು, ಅವರ ಮೂಲಕ ಜಿಲ್ಲೆಗೆ ಇನ್ನೂ ಹೆಚ್ಚಿನ ರೈಲು ಸೇವೆಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ರೈಲ್ವೇ ಇಲಾಖೆಯ ಸಿಪಿಎಂ ಸಂಜಯ್ ಕುಮಾರ್ ಸ್ವಾಗತಿಸಿ, ಪ್ರಸ್ತಾವಿಕ ಮಾತನಾಡಿದರು. ಇಲಾಖೆಯ ಸಿಸಿಎಂ ವಿ ನಾಯಕ ಆರ್. ನಾಯಕ, ಐಜಿ ಕಮ್ ಪಿಸಿಎಸ್‌ಸಿ ಸಂತೋಷ ಎನ್.ಚಂದ್ರನ್, ಎಡಿಆರ್‌ಎಂ ಪ್ರೇಮಚಂದ್, ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ನ ಅಧ್ಯಕ್ಷರಾದ ನಾಲವಾಡ ಸೇರಿದಂತೆ ರೈಲ್ವೇ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಮಲ್ಲಮ್ಮ ನುಡಿ
ಪ್ರಾದೇಶಿಕ ಕನ್ನಡ ದಿನಪತ್ರಿಕೆ


# ಹಾಲು ಉತ್ಪಾದಕರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ**

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತಗೆ ನೂತನ ಅಧ್ಯಕ್ಷರಾಗಿ ಗುಣವತಿ ಮತ್ತು ಉಪಾಧ್ಯಕ್ಷರಾಗಿ ಶಿವಮ್ಮ ರವರು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಅವಿರುದ್ಧವಾಗಿ ಆಯ್ಕೆಯಾದರು.

ತಾಲೂಕಿನ ಆಯತನಹಳ್ಳಿ ಗ್ರಾಮದ ನಿರ್ದೇಶಕರಗಳಾಗಿ ಗೌರಮಣಿ. ಪುಟ್ಟ ಗೌರಮ್ಮ. ಸುಧಮಣಿ. ಲಕ್ಷ್ಮಮ್ಮ. ಲತಾ. ಸರೋಜ. ಸಾವಿತ್ರಿ. ಅಕ್ಕಯಮ್ಮ. ಮಂಜುಳ. ಕಾಮಾಕ್ಷಿ. ಆಯ್ಕೆಯಾಗಿದ್ದು ಚುನಾವಣೆ ಅಧಿಕಾರಿಯಾಗಿ ಸಿಡಿಓ ಯತೀಂದ್ರ ರವರು ಕಾರ್ಯನಿರ್ವಹಿಸಿದ್ದರು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತ ಮುಖ್ಯ ಕಾರ್ಯನಿರ್ವಾಹಕರು ವಸಂತಕುಮಾರಿ ಗ್ರಾಮಸ್ಥರುಗಳಾದ ರಾಜಶೇಖರ್ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜು ನಾಯಕ್ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮಹದೇವ್ ಕೆಡಿಪಿ ಸದಸ್ಯ ಕಾಂತೇಗೌಡ ಎ ಬಿ ಬಸವರಾಜಪ್ಪ. ರಾಮಭೋವಿ. ಸಿದ್ದರಾಮೇಗೌಡ. ಶಿವರುದ್ರಪ್ಪ. ನಾಗಣ್ಣ. ಸುರೇಶ್ ಚಾರ್. ರಾಜಶೇಖರ್. ರಾಜೇಂದ್ರ ನಾಯಕ. ಸುದೀಪ್. ಗಣೇಶ್ ಎ ಜೆ ಹಾಗೂ ಗ್ರಾಮಸ್ಥರು ಭಾಗವಹಿಸಿದರು.

# ಬರದ ಬವಣೆ : ತೋಟಗಾರಿಕೆ ಬೆಳೆ ರಕ್ಷಣೆ ನಿರ್ವಹಣೆ

• **ಮಲ್ಲಮ್ಮ ನುಡಿ ವಾರ್ತೆ ಇಂಡಿ**



ಮಳೆಯ ಕೊರತೆ ಮತ್ತು ಅಸ್ಥಿರ ಹವಾಮಾನ ಪರಿಣಾಮ ತೋಟಗಾರಿಕೆ ಬೆಳೆಗಳ ಮೇಲೆ ಒತ್ತಡ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ತೆಂಗು, ಮಾವು, ತರಕಾರಿ ಉಳ್ಳಾಗಡ್ಡೆ ಸೇರಿದಂತೆ ಇತರೆ ತೋಟಗಾರಿಕೆ ಬೆಳೆಗಳ ತುರ್ತು ನಿರ್ವಹಣಾ ಕ್ರಮ ಅನುಸರಿಸಿದರೆ ಬರದ ಪರಿಣಾಮವನ್ನು ತಗ್ಗಿಸಿ ಉತ್ತಮ ಬೆಳವಣಿಗೆ ಹಾಗೂ ಇಳುವರಿಯನ್ನು ಕಾಯ್ದು ಕೊಳ್ಳಬಹುದು ಎಂದು ಡಾ. ಹೀನಾ ಹೇಳಿದರು.

ನಗರದ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ ಬರ ಮಳೆಯ ಕೊರತೆ ನಿಮಿತ್ಯ ತೋಟಗಾರಿಗೆ ಬೆಳೆಗಳ ಸಂರಕ್ಷಣೆ ರೈತರಿಗೆ ಮಾಹಿತಿ ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ತೋಟಗಳಲ್ಲಿ ಮಣ್ಣಿನ ತೇವಾಂಶ ಸಂರಕ್ಷಣೆ ಹನಿ ನೀರಾವರಿ ಸಮತೋಲನ, ಗೊಬ್ಬರ ನಿರ್ವಹಣೆ ಹಾಗೂ ಸಮಗ್ರ ಕೀಟ ರೋಗ ನಿಯಂತ್ರಣಕ್ಕೆ ಆಧ್ಯತೆ ನೀಡುವದು ಅತ್ಯಗತ್ಯವಾಗಿದೆ. ಜೈವಿಕ ಗೊಬ್ಬರಗಳ ಬಳಕೆ ಹೆಚ್ಚಿಸುವುದರ ಜತೆಗೆ ಮಲ್ಚಿಂಗ ಅಂತರಬೆಳೆ ಮತ್ತು ಸೂಕ್ಷ್ಮ ಪೋಷಕಾಂಶಗಳ ಪೂರೈಕೆ ಮಾಡುವದರಿಂದ ಬರ ಎದುರಿಸುವ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತದೆ ಎಂದರು.

ವಿಜ್ಞಾನಿ ಡಾ. ಪ್ರಸಾದ ಮಾತನಾಡಿ ತೆಂಗಿನ ಗಿಡದ ಒಣಗಿದ ಗರಿಗಳನ್ನು ತೆಗೆದು ಹಾಕಬೇಕು, ಕಬ್ಬಿನ ರವದಿ ಗಿಡದ ಬಡ್ಡೆಯಲ್ಲಿ ಹೊದಿಕೆ ಮಾಡುವದರಿಂದ ನೀರಿನ ಸಂರಕ್ಷಣೆ ಮಾಡಬಹುದು, ಹಣ್ಣಿನ ಬೆಳೆಗಳಿಗೆ ಶೇ 5 ಕಯೋಲಿನ ದ್ರಾವಣವನ್ನು ಎಲೆಗಳ ಮೇಲೆ ಸಿಂಪಡಿಸಬೇಕು,ತರಕಾರಿ ಬೆಳೆಗಳಿಗೆ ಪೋಟ್ಯಾಸಿಯಂ ನೈಟ್ರೇಟ್ ಸಿಂಪಡಿಸಬೇಕು ಎಂದರು.

ವಿಜ್ಞಾನಿ ಡಾ. ಪ್ರಕಾಶ ಮಾತನಾಡಿ ಉಳ್ಳಾಗಡ್ಡೆಗೆ ಗಡ್ಡೆ ಪ್ರಾರಂಭ ಹಂತದಲ್ಲಿ ನೀರಿಗೆ ಆದ್ಯತೆ ನೀಡಿ, ಬೇರೆ ಸಮಯದಲ್ಲಿ ಅವಶ್ಯಕತೆ ಇಲ್ಲ, ಡಾಳಿಂಬೆ ಮತ್ತು ಮೆಣಸಿನಕಾಯಿಗೆ 100 ರಿಂದ 150 ಪಿಪಿಎಂ ಸಲಿಶ್ಯಾಲಿಕ ಆಸಿಡ್ ದ್ರಾವಣ ಸಿಂಪಡಿಸಬೇಕು. ನಿಂಬೆ ಗಿಡಗಳಿದ್ದರೆ 5 ವರ್ಷಕ್ಕಿಂತ ದೊಡ್ಡ ಗಿಡದ ಕಾಂಡಗಳಿಗೆ ಸುಣ್ಣ ಲೇಪನ ಮಾಡಬೇಕು.ಬೊರ್ಡೋಪೆಸ್ಟ ಒಂದು ಕೆಜಿ ಸುಣ್ಣ ಒಂದು ಕೆಜಿ ಕಾಪರ್ ಸಲ್ಫೇಟ್ ದಿಂದ ಅಂಟುರೋಗನಿಯಂತ್ರಿಸಬಹುದು ಎಂದರು.

ಡಾ. ಪ್ರೇಮಚಂದ್ರ , ಡಾ. ಸುನೀಲ, ಜಕ್ಕಣ್ಣ ಬಿರಾದಾರ ವೇದಿಕೆಯ ಮೇಲಿದ್ದರು.

ಡಾ. ವೀಣಾ ಚಂದಾವರಿ ಸ್ವಾಗತಿಸಿದರು. ಮಂಜುಳಾ ನಿರೂಪಿಸಿದರು.

# ಜನಸಂಖ್ಯೆ ನಿಯಂತ್ರಣದಿಂದ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ: ಡಿಹೆಚ್ಓ ಡಾ. ಲಿಂಗರಾಜು

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)**




ಜಿಲ್ಲಾಡಳಿತ,ಜಿಲ್ಲಾಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ವಿಶ್ವ ಜನಸಂಖ್ಯೆ ದಿನಾಚರಣೆ ಅಂಗವಾಗಿ ಕಾನೂನು ಶನಿವಾರ ಆಯೋಜಿಸಲಾಗಿದ್ದ ಜನಸಂಖ್ಯೆ ನಿಯಂತ್ರಣ ಕುರಿತು ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇದು ಕೇವಲ ಒಂದು ದಿನದ ಕಾರ್ಯಕ್ರಮವಲ್ಲ; ಈ ಅಭಿಯಾನದ ಮೂಲಕ ನಿರಂತರವಾಗಿ ಜನಸಂಖ್ಯಾ ನಿಯಂತ್ರಣ ಹಾಗೂ ಆರೋಗ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದ ಅವರು, ಸುರಕ್ಷಿತ ಸಮಯದಲ್ಲಿ ಗರ್ಭಧಾರಣೆ ಹಾಗೂ ಒಂದು ಮಗುವಿನಿಂದ ಮತ್ತೊಂದು ಮಗುವಿನ ಜನನದ ನಡುವೆ ಕನಿಷ್ಠ 3 ವರ್ಷಗಳ ಆರೋಗ್ಯಕರ ಅಂತರ ಕಾಯ್ದುಕೊಳ್ಳುವುದು ತಾಯಿ–ಮಗು ಇಬ್ಬರ ಆರೋಗ್ಯದ ದೃಷ್ಟಿಯಿಂದಲೂ ಅಗತ್ಯವಾಗಿದೆ. ಅನಗತ್ಯ ಗರ್ಭಧಾರಣೆಯನ್ನು ತಡೆಯಲು ಆರೋಗ್ಯ ಇಲಾಖೆಯಲ್ಲಿ ಲಭ್ಯವಿರುವ ಒಂಕಿ ವ್ಯವಸ್ಥೆ, ಚುಚ್ಚುಮದ್ದು ಹಾಗೂ ಗರ್ಭನಿರೋಧಕ ಮಾತ್ರೆಗಳನ್ನು ಬಳಸಿಕೊಳ್ಳುವ ಮೂಲಕ ಜನಸಂಖ್ಯೆಯನ್ನು ನಿಯಂತ್ರಿಸಬಹುದು. ಕುಟುಂಬ ಯೋಜನೆ ಕೇವಲ ಮಹಿಳೆಯರಿಗೆ ಮಾತ್ರ ಸೀಮಿತವಲ್ಲ. ಪುರುಷರಲ್ಲೂ ಸುರಕ್ಷಿತ ಸಂತಾನಹರಣ ಚಿಕಿತ್ಸಾ ವಿಧಾನಗಳಿದ್ದು, ಮಹಿಳೆಯರ ಆರೋಗ್ಯದ ಹಿತದೃಷ್ಟಿಯಿಂದ ಪುರುಷರು ಸಹ ಈ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಡಿಹೆಚ್ಓ ಸಲಹೆ ನೀಡಿದರು.

ಅನಗತ್ಯ ಗರ್ಭಧಾರಣೆಯಿಂದ ಭವಿಷ್ಯದಲ್ಲಿ ತಾಯಂದಿರು ಮತ್ತು ಮಕ್ಕಳಲ್ಲಿ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಯಬಹುದು. ಜನಸಂಖ್ಯೆ ನಿಯಂತ್ರಣದಿಂದ ಮಾತ್ರ ಆರೋಗ್ಯವಂತ ಸಮಾಜ ಮತ್ತು ಭವ್ಯ ಭಾರತದ ನಿರ್ಮಾಣ ಸಾಧ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಾಥವು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಛೇರಿ (ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣ) ಉದ್ಘಾಟನೆಗೊಂಡು ನಂತರ ಪುಣ್ಯಮೂರ್ತಿ ಸರ್ಕಲ್, ಬಸ್ ನಿಲ್ದಾಣ, ಡಾ. ಪುನೀತ್ ರಾಜ್ ಕುಮಾರ್ ಸರ್ಕಲ್, ಅಂಬೇಡ್ಕರ್ ಸರ್ಕಲ್, ಮಾರ್ಗವಾಗಿ ಚಲಿಸಿ ದೊಡ್ಡ ಮಸೀದಿ ಮಾರ್ಗದಿಂದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಸಮಪ್ತಿಗೊಂಡಿತು.

ಈ ಜಾಥಾ ಕಾರ್ಯಕ್ರಮದಲ್ಲಿ ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ. ಜಂಬಯ್ಯ, ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ. ವಿನಯ್, ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ರಾಧಿಕಾ, ಆರೋಗ್ಯ ಶಿಕ್ಷಣಾಧಿಕಾರಿ ಎಂ ಪಿ.ದೊಡ್ಡಮನಿ, ಕ್ಷಯರೋಗ ನಿರ್ಮೂಲನಾಧಿಕಾರಿ ಭಾಸ್ಕರ್, ಆರೋಗ್ಯ ನಿರೀಕ್ಷಣಾಧಿಕಾರಿ ಧರ್ಮನ ಗೌಡ , ತಾಲ್ಲೂಕು ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕತೆ–ಯರು, ಶಾಲಾ ಕಾಲೇಜು ವಿದ್ಯಾರ್ಥಿನಿಯರು ಹಾಗೂ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

# ಅಗ್ನಿವೀರ ಬಸವರಾಜ್ ಗೋನಾಳ್‌ಗೆ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಮಾದಿನೂರಿನ ಯುವಕ ಬಸವರೆಡ್ಡಿ ಎಂ. ಗೋನಾಳ್ ಇವರು ಅಗ್ನಿವೀರ ನೇಮಕಾತಿ ಪಡೆದುಕೊಂಡಿದ್ದು ಇತ್ತೀಚಿಗೆ ಬೆಂಗಳೂರಿನಲ್ಲಿ ತರಬೇತಿಯನ್ನು ಪಡೆದು ಈಗ ಭಾರತೀಯ ಸೇನೆಯಲ್ಲಿ ಸೇವೆಗಾಗಿ ಭೂಪಾಲಗೆ ತೆರಳಲಿದ್ದು ಅವರನ್ನು ಗ್ರಾಮದ ಹಿರಿಯರು ಯುವಕರು ಸೇರಿಕೊಂಡು ಸನ್ಮಾನಿಸಿ ಬಿಳ್ಕೊಟ್ಟರು, ಈ ಸಂದರ್ಭದಲ್ಲಿ ಅಪ್ಪಣ್ಣ ಆಚಾರ್ ಪೂಜಾರ್ ರವರು ಮಾತನಾಡಿ, ಬಸವರಾಜ್ ಗೋನಾಳ ಅವರು ದೇಶ ಸೇವೆಗಾಗಿ ಹೊರಡಲಿದ್ದು ಅವರ ದೇಶ ಸೇವೆಯು ಸಾರ್ಥಕ ಮತ್ತು ಅತ್ಯಮೂಲ್ಯವಾದದ್ದು ಅದಕ್ಕೆ ಅವರಿಗೆ ಭಗವಂತನು ಮತ್ತು ಭಾರತ ಮಾತೆಯ ಶ್ರೀರಕ್ಷೆ ಅವರಿಗೆ ಇರಲಿ ಎಂದು ಆಶಿಸಿ ಶುಭ ಕೋರಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಬಸವರಾಜ್‌ರೆಡ್ಡಿ ಗೋನಾಳ್ 'ಗ್ರಾಮದ ಜನರ ಆಶೀರ್ವಾದ ಹಾರೈಕೆ ಸನ್ಮಾನಕ್ಕೆ ನಾನೆಂದಿಗೂ ಚಿರಋಣಿ ನಿಮ್ಮ ಹಾರೈಕೆ ಸದಾ ನನ್ನ ಮೇಲೆ ಇರಲಿ, ದೇಶ ಸೇವೆಗಾಗಿ ನಾನು ಹಗಲಿರಳು ಶ್ರಮಿಸುತ್ತೇನೆ ಹೆತ್ತ ತಂದೆ ತಾಯಿಗೆ ಜನ್ಮಕೊಟ್ಟ ಭೂಮಿ ತಾಯಿಗೆ ಸೇವೆಯನ್ನು ಮಾಡುವ ಸೌಭಾಗ್ಯ ನನಗೆ ಒದಗಿ ಬಂದಿದ್ದು ಒಳ್ಳೆಯ ಹೆಸರು ಮತ್ತು ಕೀರ್ತಿಯನ್ನು ಮಾದಿನೂರು ಗ್ರಾಮಕ್ಕೆ ತರುತ್ತೇನೆ'. ಎಂದರು. ಗ್ರಾಮದ ಯುವಕರು ಭಾರತ್ ಮಾತಾ ಕಿ ಜೈ ಎಂಬ ಜೈಕಾರವನ್ನು ಹೇಳುತ್ತಾ ಬಸವರಾಜ್ ರೆಡ್ಡಿ ಗೋನಾಳ್ ಅವರನ್ನು ಅಭಿಮಾನದಿಂದ ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಮಾದಿನೂರು ಗ್ರಾಮದ ಗಣ್ಯರಾದ ಅಪ್ಪಣ್ಣ ಆಚಾರ ಪೂಜಾರ. ಸಂತೋಷ್ ಪಾಟೀಲ್, ಮುತ್ತಣ್ಣ ತಳಕಲ, ಹನುಮರೆಡ್ಡಿ ಆಡೂರು, ಮಹಾಂತೇಶ ಗೋನಾಳ, ಬಸವರಾಜ ಗೋನಾಳ, ನಾಗರಾಜ್ ಬೃಂಗಿ, ಭರತೇಶ ತುಂಬಳ, ಹರ್ಷ ಪಾಟೀಲ್, ಶಿವು ನಂದಾಪುರು, ರಾಜು ಪಾಟೀಲ್, ಮಂಜುನಾಥ್ ಪಾಟೀಲ್, ಶಿವು ಬೃಂಗಿ, ಸಾಗರ ತುಂಬಳ, ನಾಗರೆಡ್ಡಿ ನರಸಿಮ್ಮನವರ, ಮನು ಶಿವಶಿಂಪರ, ಅಯ್ಯಪ್ಪ ಗೋನಾಳ ಇತರರು ಉಪಸ್ಥಿತರಿದ್ದರು.

# ಎಣ್ಣೆಕಾಳು ಯೋಜನೆಯಡಿ ಸಂಸ್ಕರಣಾ ಘಟಕ ಸ್ಥಾಪನೆಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)**

2026–27ನೇ ಸಾಲಿನ ರಾಷ್ಟ್ರೀಯ ಖಾದ್ಯತೈಲ ಅಭಿಯಾನ ಎಣ್ಣೆಕಾಳು ಯೋಜನೆಯಡಿ ಪ್ರಾಥಮಿಕ ಮತ್ತು ದ್ವಿತೀಯ ಎಣ್ಣೆಕಾಳು ಸಂಸ್ಕರಣಾ ಘಟಕ ಸ್ಥಾಪಿಸಲು ಆಸಕ್ತ ರೈತ ಹಾಗೂ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿದೆ. ಎಣ್ಣೆಕಾಳು ಸಂಸ್ಕರಣಾ ಘಟಕಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳು ಮತ್ತು ಸಲಕರಣೆಗಳಿಗಾಗಿ ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆಗಳು ಹಾಗೂ ರೈತ ಉತ್ಪಾದಕ ಸಂಘಗಳು ಅರ್ಜಿ ಸಲ್ಲಿಸಬಹುದು. ಕೇಂದ್ರ ಸರ್ಕಾರದ ಈ ಯೋಜನೆಯಡಿ ರಾಜ್ಯ, ಜಿಲ್ಲೆ ಹಾಗೂ ಕ್ಷೇತ್ರ ಮಟ್ಟದಲ್ಲಿ ಎಣ್ಣೆಕಾಳು ಬೆಳೆಗಳಾದ ಸೂರ್ಯಕಾಂತಿ, ಸೋಯಾ, ಅವರೆ, ಎಳ್ಳು ಹಾಗೂ ಶೇಂಗಾ ಬೆಳೆಗಳ ಕ್ಷೇತ್ರ ಉತ್ಪಾದನೆ, ಇಳುವರಿ ಹೆಚ್ಚಿಸುವುದು ಮತ್ತು ರೈತರ ಆದಾಯ ದ್ವಿಗುಣಗೊಳಿಸುವ ಗುರಿ ಹೊಂದಿದೆ. ಯೋಜನೆಯಡಿ ಅನುಮೋದಿತ ಯೋಜನಾ ವೆಚ್ಚದ ಶೇ.33 ರಷ್ಟು ಅಥವಾ ಗರಿಷ್ಠ ರೂ.9.99 ಲಕ್ಷದವರೆಗೆ ಸಹಾಯಧನ ನೀಡಲಾಗುವುದು. ಕಟ್ಟಡ ನಿರ್ಮಾಣ ವೆಚ್ಚ ಹಾಗೂ ಭೂಮಿ ಬಾಡಿಗೆ ವೆಚ್ಚವನ್ನು ಸಹಾಯಧನಕ್ಕೆ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕ ಡಿ. ಟಿ. ಮಂಜುನಾಥ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾಲ್ಕಿ ರೋಟರಿ ಕ್ಲಬ್ ವತಿಯಿಂದ ಉಚಿತ ನೇತ್ರ ಚಿಕಿತ್ಸಾ ಶಿಬಿರ ಇಂದು

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಭಾಲ್ಕಿ ನಗರದ ಪವನ ಆಪ್ಟಿಕಲ್ಸ್ (ಡಾ.ಜಾಧವ ಆಸ್ಪತ್ರೆ ಹತ್ತಿರ) ಮುಂಭಾಗದಲ್ಲಿ ರೋಟರಿ ಕ್ಲಬ್ ಆಫ್ ಭಾಲ್ಕಿ ಫೋರ್ಟ್(ಆರ್‌ಐ 3160) ಮತ್ತು ವ್ಹಿಜನ್ ಫೌಂಡೇಶನ್ ಇಂಡಿಯಾ ಹಾಗೂ ಉದಯಗಿರಿ ಲಾಯನ್ಸ್ ನೇತ್ರಾಲಯ ಉದಗೀರ ಅವರ ಸಂಯುಕ್ತಾಶ್ರಯದಲ್ಲಿ ಇಂದು ಭಾನುವಾರ ಜು.19 ರಂದು ಮುಂಜಾನೆ 10,00 ಗಂಟೆಗೆ ಮೋತಿ ಬಿಂದು ಶಸ್ತ್ರಕ್ರಿಯೆ ಮತ್ತು ಉಚಿತ ನೇತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ.ರೋಟರಿ ಕ್ಲಬ್ ಅಧ್ಯಕ್ಷ ಡಾ.ಶೈಲಜಾ ತಳವಾಡೆ ಅವರ ಅಧ್ಯಕ್ಷತೆಯಲ್ಲಿ ಬಿಕೆಐಟಿ ಕಾಲೇಜಿನ ಪ್ರಾಂಶುಪಾಲ ಡಾ.ಉದಯಕುಮಾರ ಕಲ್ಯಾಣೆ ಚಿಕಿತ್ಸಾ ಶಿಬಿರ ಉದ್ಘಾಟಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಉದಯಗಿರಿ ಲಾಯನ್ಸ್ ನೇತ್ರಾಲಯದ ಡಾ.ರಾಮಪ್ರಸಾದ ಲಕೋಟಿಯಾ ,ಡಾ.ಸಾಗರ ಸಮಗೆ ,ಸಮಾಲೋಚಕ ಪ್ರಸಾದ ಗಾಯಕವಾಡ ಭಾಗವಹಿಸಲಿದ್ದು ಸಾರ್ವಜನಿಕರು ಶಿಬಿರದ ಲಾಭ ಪಡೆದುಕೊಳ್ಳಬೇಕು ಎಂದು ರೋಟರಿ ಕಾರ್ಯದರ್ಶಿ ಅಶೋಕ ರಾಜೋಳೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೂರೂರು ಗ್ರಾಮದಲ್ಲಿ ಕನ್ನಡದ ಅತ್ಯಪರೂಪದ ಮಿಶ್ರಲಿಪಿ ಶಾಸನ ಪತ್ತೆ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**



ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಮೂರೂರು ಗ್ರಾಮದ ಮೇಲಿನದೇವಲಿ ಎಂಬಲ್ಲಿರುವ ಮಹಾವಿಷ್ಣು ದೇವಸ್ಥಾನದ ಪಕ್ಕದಲ್ಲಿರುವ ಪ್ರಾಚೀನ ಶಾಸನವೊಂದು ಕನ್ನಡ ಭಾಷೆ, ಲಿಪಿ, ಕೃಷಿ, ನೀರಾವರಿ ಮತ್ತು ಗ್ರಾಮೀಣ ಆಡಳಿತದ ಇತಿಹಾಸದ ದೃಷ್ಟಿಯಿಂದ ಅತ್ಯಂತ ಅಪರೂಪದ ಹಾಗೂ ಅಷ್ಟೇ ಮಹತ್ವದ ಶಾಸನವೆಂದು ಗುರುತಿಸಲಾಗಿದೆ ಎಂದು ಇತಿಹಾಸ ಸಂಶೋಧಕ ಶ್ಯಾಮಸುಂದರ ಗೌಡ, ಅಂಕೋಲಾ ಅವರು ಮಾಹಿತಿ ನೀಡಿದ್ದಾರೆ. ಓದಲು ಅತ್ಯಂತ ಕಠಿಣ ಹಾಗೂ ಅಷ್ಟೇ ಸವಾಲಿನಿಂದ ಕೂಡಿದ್ದು, ಈ ಶಾಸನವನ್ನು ಕರ್ನಾಟಕದ ಖ್ಯಾತ ಲಿಪಿತಜ್ಞರಾದ ಡಾ. ದೇವರಕೊಂಡಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಪ್ರೊ. ದೇವರಾಜಸ್ವಾಮಿ ಶ್ಯಾಮಸುಂದರ ಗೌಡ ಅವರು ಹಲವು ಹಂತಗಳಲ್ಲಿ ಪರಿಶೀಲಿಸಿ ಪಾಠ ಸಿದ್ಧಪಡಿಸಿದ್ದಾರೆ. ಶಿಲೆಯ ಅಕ್ಷರಗಳನ್ನು ಪರಿಶೀಲಿಸಿ, ಪಡಿಯಚ್ಚು ಮತ್ತು ಛಾಯಾಚಿತ್ರಗಳ ನೆರವಿನಿಂದ ಪದವಿಭಾಗ, ಪದಾರ್ಥ, ವ್ಯಾಕರಣ, ಅಳತೆಮಾಪನ, ಕೃಷಿ ನೀರಾವರಿ ಸಂಬಂಧಿತ ತಾಂತ್ರಿಕ ಪದಗಳು ಹಾಗೂ ಶಾಸನದ ಒಟ್ಟಾರೆ ಆಶಯವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ಹೊಸಗನ್ನಡಕ್ಕೆ ಅರ್ಥೈಸುವ ಕಾರ್ಯ ಕೈಗೊಳ್ಳಲಾಗಿದೆ. ಈ ಬಗ್ಗೆ ಎಲ್ಲ ರೀತಿಯ ಮಾಹಿತಿಯನ್ನು ಕಲೆ ಹಾಕಲಾಗಿದೆ ಎಂದು ಅವರು ತಿಳಿಸಿದರು.

# ಇಮೋಜಿ ದಿನ ಆಚರಣೆ




• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ತಾಲ್ಲೂಕಿನ ತಾಳಮಡಗಿ ಗಾಂಧಿನಗರದ ಸೆಂಟ್ ಮೇರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶುಕ್ರವಾರ ಇಮೋಜಿ ಡೇ ಆಚರಣೆ ಮಾಡಲಾಯಿತು. ವಿದ್ಯಾರ್ಥಿಗಳು ಹಳದಿ ಬಣ್ಣದ ಬಟ್ಟೆ ಧರಿಸಿ ವಿಭಿನ್ನ ಮುಖವಾಡ ಇದ್ದ ಇಮೋಜಿ ಫೋಟೋಗಳನ್ನು ಕೈಯಲ್ಲಿ ಹಿಡಿದು ಪ್ರದರ್ಶಿಸಿ ಸಂಭ್ರಮಿಸಿದರು.ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಸಿಸ್ಟರ್ ದೀಪ್ತಿ ಥೋಮಸ,ಸಹ ಶಿಕ್ಷಕಿಯರಾದ ಸಿಸ್ಟರ್ ಜಪಮಾಲ, ಸಂತೋಷಾ, ಪ್ರಿಯಾಂಕಾ ಸೇರಿದಂತೆ ಎಲ್.ಕೆ.ಜಿ ಹಾಗೂ ಯು.ಕೆ.ಜಿ ವಿದ್ಯಾರ್ಥಿಗಳಿದ್ದರು.

# ಮಂಜಗುಣಿ ರಸ್ತೆಯ ಅಕ್ಕಪಕ್ಕದಲ್ಲಿ ಗಟಾರ ದುರಸ್ತಿ, ಅಪಾಯಕಾರಿ ಕಲ್ಲು ತೆರವು



• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**

ಮಂಜಗುಣಿ–ಗಂಗಾವಳಿ ಸೇತುವೆ ನಿರ್ಮಾಣದಿಂದಾಗಿ ಅಂಕೋಲಾದಿಂದ ಮಂಜಗುಣಿಯವರೆಗೆ ತೆರಳುವ ರಸ್ತೆಯು ಕಿರಿದಾಗಿದ್ದು ರಸ್ತೆಯ ಅಕ್ಕಪಕ್ಕದಲ್ಲಿ ಅಪಾಯಕಾರಿ ಕಲ್ಲುಗಳಿವೆ. ಭಾರಿ ವಾಹನಗಳ ಸಂಚಾರ ಹೆಚ್ಚಿದ್ದರಿಂದಾಗಿ ಇಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ವರದಿ ಪ್ರಕಟಿಸಲಾಗಿತ್ತು. ಶನಿವಾರ ಜೆಸಿಬಿ ಮೂಲಕ ಲೋಕೋಪಯೋಗಿ ಇಲಾಖೆಯ ವತಿಯಿಂದ ಕಾರ್ಯ ಕೈಗೊಂಡಿದ್ದಾರೆ.

ಮಾಧ್ಯಮದಲ್ಲಿ ವರದಿ ಪ್ರಕಟಗೊಂಡ ನಂತರ ತಹಸೀಲ್ದಾರ ನಿಶ್ಚಲ ನರೋನಾ ಅವರು ಲೋಕೋಪಯೋಗಿ ಇಲಾಖೆಯ ಇಂಜೀನಿಯರ್ ನಯನಾ ನಾಯ್ಕ ಅವರನ್ನು ಕರೆಯಿಸಿ ತಾತ್ಕಾಲಿಕವಾಗಿ ಸಮಸ್ಯೆ ಬಗೆಹರಿಸುವಂತೆ ಹೇಳಿದ್ದರು. ಅದರಂತೆ ಶುಕ್ರವಾರ ನಯನಾ ನಾಯ್ಕ ಅವರು ಸ್ಥಳ ಪರಿಶೀಲನೆ ನಡೆಸಿದ್ದರು. ಸ್ಥಳೀಯ ಪ್ರಮುಖರಾದ ಶ್ರೀಪಾದ ನಾಯ್ಕ ಅವರು ಸ್ಥಳೀಯ ಸಮಸ್ಯೆಗಳ ಕುರಿತು ವಿವರಿಸಿದ್ದರು. ಶನಿವಾರ ಜೆಸಿಬಿ ಮೂಲಕ ಗಟಾರದಲ್ಲಿ ಬಿದ್ದ ಸಿಮೆಂಟ್ ಬ್ಲಾಕ್‌ಗಳನ್ನು ತೆಗೆದು ಸ್ವಚ್ಛ ಮಾಡಲಾಯಿತು. ಹಾಗೇ ರಸ್ತೆಯ ಅಕ್ಕಪಕ್ಕದಲ್ಲಿರುವ ಅಪಾಯಕಾರಿ ಕಲ್ಲುಗಳನ್ನು ತೆರವುಗೊಳಿಸಿದರು. ಬಾರಿ ವಾಹನ ಸಂಚಾರದಿಂದಾಗಿ ದ್ವಿಚಕ್ರವಾಹನ ಮತ್ತು ಇತರೆ ಸಣ್ಣ ವಾಹನಗಳಿಗೆ ರಾತ್ರಿ ಸಮಯದಲ್ಲಿ ರಾತ್ರಿ ಸಮಯದಲ್ಲಿ ಆತಂಕ ಇರುತ್ತಿತ್ತು. ಆದರೆ ಈಗ ಸ್ವಲ್ಪ ನಿಟ್ಟುಸಿರು ಬಿಟ್ಟಂತಾಗಿದೆ.

# ಚತುಷ್ಪಥ ಹೆದ್ದಾರಿಯ ಬಳಲೆಯಲ್ಲಿ ಗುಡ್ಡ ಕುಸಿತ



• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**

ತಾಲೂಕಿನ ಚತುಷ್ಪಥ ಹೆದ್ದಾರಿ ಬಳಲೆ ಬೊಮ್ಮಯ್ಯ ದೇವರ ದೇವಸ್ಥಾನದ ಪಕ್ಕ ಗುಡ್ಡ ಕುಸಿದು ರಸ್ತೆಯ ಮೇಲೆ ಬಿದ್ದಿದ್ದು, ಕೆಲಕಾಲ ರಸ್ತೆ ಸಂಚಾರ ವ್ಯತ್ಯಯವಾದ ಘಟನೆ ನಡೆದಿದೆ. ಇದರಿಂದಾಗಿ ವಾಹನ ಚಾಲಕರು ಕೂಡ ಈ ರಸ್ತೆಯ ಮೂಲಕ ಸಂಚರಿಸಲು ಈಗ ಭಯ ಪಡುವಂತಾಗಿದೆ. ಕಳೆದ 2 ವರ್ಷಗಳ ಹಿಂದೆ ಶಿರೂರಿನಲ್ಲಿ ಉಂಟಾದ ಗುಡ್ಡ ಕುಸಿತ ಎಲ್ಲರ ಮನಸ್ಸಿನಲ್ಲಿಯೂ ಅಚ್ಚಳಿಯಾಗಿ ಉಳಿದುಕೊಂಡಿದೆ. ಹೀಗಿರುವಾಗ ಅದೇ ಹೆದ್ದಾರಿಯ ಮೂಲಕ ಬಳಲೆಯಲ್ಲಿ ಗುಡ್ಡ ಕುಸಿದಿರುವುದು ಸಹಜವಾಗಿಯೇ ಆತಂಕಗೊಳ್ಳುವಂತಾಗಿದೆ. ಕೆಲವರು ಈ ರಸ್ತೆಯನ್ನು ಬಿಟ್ಟು ಮಂಜಗುಣಿ–ಗಂಗಾವಳಿ ಸೇತುವೆಯ ಮೂಲಕ ಸುತ್ತುಬಳಸಿ ಸಂಚರಿಸುತ್ತಿದ್ದಾರೆ.

ಜಿಲ್ಲಾಡಳಿತ ಕೂಡ ಕೆಲವು ಅಪಾಯಕಾರಿ ಸ್ಥಳಗಳನ್ನು ಗುರುತಿಸಿದೆ. ಆದರೆ ಅದನ್ನು ಹೇಗೆ ತಡೆಯಬೇಕು ಎನ್ನುವುದನ್ನು ಬಿಟ್ಟು ಹೆಚ್ಚು ಅಪಾಯಗಳು ಕಂಡುಬಂದಲ್ಲಿ ರಸ್ತೆ ಸ್ಥಗಿತಗೊಳ್ಳುವ ಬಗ್ಗೆ ಅಷ್ಟೇ ಚಿಂತಿಸುತ್ತಿದ್ದಾರೆ. ಆದರೆ ಅದಕ್ಕೆ ಶಾಶ್ವತ ಪರಿಹಾರದ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಿಲ್ಲ ಎನ್ನುವುದು ಸ್ಥಳೀಯರ ಆಕ್ರೋಶವಾಗಿದೆ. ಈ ನಿಟ್ಟಿನಲ್ಲಿ ಸರಕಾರ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

# 28 ರಂದು ಪಿಂಚಣಿ ಅದಾಲತ್

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)**

ಅಂಚೆ ಇಲಾಖೆಯಿಂದ ನಿವೃತ್ತರಾಗಿ ಕೇಂದ್ರಸರ್ಕಾರದಿಂದ ಪಿಂಚಣಿ ಪಡೆಯುತ್ತಿರುವ ಇಲಾಖಾ ನೌಕರರು ಹಾಗೂ ಕುಟುಂಬ ಪಿಂಚಣಿ ಪಡೆಯುತ್ತಿರುವ ನಿವೃತ್ತ ಅಂಚೆ ನೌಕರರ ಕುಟುಂಬ ಸದಸ್ಯರಿಗಾಗಿ ಜುಲೈ 28ರಂದು ಸಂಜೆ 4 ಗಂಟೆಗೆ ಬಳ್ಳಾರಿ ವಿಭಾಗದ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ಪಿಂಚಣಿ ಅದಾಲತ್ ಆಯೋಜಿಸಲಾಗಿದೆ.

# ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಿದ ಕಂದಾಯ ಇಲಾಖೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ಕೌಲ್ ಬಜಾರ್ ಹಾಗೂ ಕಂಟೋನ್ಮೆಂಟ್ ಪ್ರದೇಶಗಳಲ್ಲಿ ಅನಧಿಕೃತವಾಗಿ ಒತ್ತುವರಿಯಾಗಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಜೆಸಿಬಿ ಯಂತ್ರಗಳ ಸಹಾಯದೊಂದಿಗೆ ಯಶಸ್ವಿಯಾಗಿ ತೆರವುಗೊಳಿಸಿದ್ದಾರೆ.

ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್. ಕೆ ಅವರ ನಿರ್ದೇಶನದಂತೆ, ಅಪರ ಜಿಲ್ಲಾಧಿಕಾರಿ ಮಹಮ್ಮದ್.ಎನ್ ಝುಬೇರ್, ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಅವರ ನೇತೃತ್ವದಲ್ಲಿ ಶನಿವಾರ ಬಳ್ಳಾರಿ ತಹಶೀಲ್ದಾರ್ ಟಿ.ರೇಖಾ ಮತ್ತು ಕಂದಾಯ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿಯ ಜಂಟಿ ಕಾರ್ಯಾಚರಣೆ ನಡೆಯಿತು.

ಬಳ್ಳಾರಿ ನಗರದ ಸಿಟಿಸಿ ವಾರ್ಡ್ ನಂ. 20, ಬ್ಲಾಕ್ ನಂ. 13, ಟಿಎಸ್ ನಂ. 1074 ರಲ್ಲಿ ಬರುವ ಸುಮಾರು 0.93 ಸೆಂಟ್ಸ್ ವಿಸ್ತೀರ್ಣದ ಸರ್ಕಾರಿ ಹಳ್ಳದ ಜಮೀನನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಈ ಸ್ಥಳದಲ್ಲಿದ್ದ ಅನಧಿಕೃತ ತಾತ್ಕಾಲಿಕ ಶೆಡ್‌ಗಳು ಮತ್ತು ಕಟ್ಟಡಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಯಿತು.

ಬಳ್ಳಾರಿ ಕೋಟೆ ಸಮೀಪದ ಹೊಸಪೇಟೆ ರಸ್ತೆಯ ಕಂಟೋನ್ಮೆಂಟ್ ವ್ಯಾಪ್ತಿಯಲ್ಲಿರುವ ಸಿಟಿಸಿ ವಾರ್ಡ್ ನಂ. 21, ಬ್ಲಾಕ್ ನಂ. 03, ಟಿಎಸ್ ನಂ.59(ಪಿ) ರಲ್ಲಿ ಬರುವ 0.10.50 ಸೆಂಟ್ಸ್ ಸರ್ಕಾರಿ ಜಮೀನಿನ ಒತ್ತುವರಿಯನ್ನೂ ಸಹ ಅಧಿಕಾರಿಗಳ ತಂಡ ಸಮ್ಮುಖದಲ್ಲಿ ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆಯಲಾಯಿತು.

*ಎಚ್ಚರಿಕೆ ಫಲಕ ಅಳವಡಿಕೆ – ಕ್ರಿಮಿನಲ್ ಮೊಕದ್ದಮೆಯ ಎಚ್ಚರಿಕೆ:*

ತೆರವುಗೊಳಿಸಲಾದ ಜಾಗಗಳಲ್ಲಿ ಅಧಿಕೃತ ಸರ್ಕಾರಿ ಎಚ್ಚರಿಕೆ ಫಲಕಗಳನ್ನು ಅಳವಡಿಸಲಾಗಿದೆ. ಈ ಜಮೀನು ಸರ್ಕಾರಕ್ಕೆ ಸೇರಿದ್ದಾಗಿದ್ದು, ಮುಂದಿನ ದಿನಗಳಲ್ಲಿ ಯಾರಾದರೂ ಇದನ್ನು ಒತ್ತುವರಿ ಮಾಡಲು ಯತ್ನಿಸಿದರೆ ಅವರ ವಿರುದ್ಧ ಕಠಿಣ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ಬೋರ್ಡ್‌ಗಳ ಮೂಲಕ ಸಾರ್ವಜನಿಕರಿಗೆ ಕಡಕ್ ಎಚ್ಚರಿಕೆ ನೀಡಲಾಗಿದೆ. ಕಾರ್ಯಾಚರಣೆಯ ಸಂದರ್ಭದಲ್ಲಿ ಸ್ಥಳೀಯ ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಕೌಲ್ ಬಜಾರ್ ಪೊಲೀಸ್ ಠಾಣೆಯ ಸಿಬ್ಬಂದಿಗಳು ಉಪಸ್ಥಿತರಿದ್ದು ಯಾವುದೇ ಅಹಿತಕರ ಘಟನೆ ನಡೆಯದಂತೆ ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು. ಇಲಾಖೆಯ ಈ ದಿಟ್ಟ ಕ್ರಮಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಶ್ಲಾಘನೆ ವ್ಯಕ್ತವಾಗಿದೆ.

# ಮದ್ಯ ಮಾರಾಟವನ್ನು ಸರ್ಕಾರವೇ ನಡೆಸಲಿ
# ಬಳ್ಳಾರಿಯಿಂದ ರಾಜ್ಯ ಸರ್ಕಾರಕ್ಕೆ ಬೃಹತ್ ನೀತಿ ಪ್ರಸ್ತಾವನೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕರ್ನಾಟಕದಲ್ಲಿ ಖಾಸಗಿ ಆಧಾರಿತ ಮದ್ಯ ಮಾರಾಟ ವ್ಯವಸ್ಥೆಯನ್ನು ಹಂತ ಹಂತವಾಗಿ ಸ್ಥಗಿತಗೊಳಿಸಿ, ಆಂಧ್ರಪ್ರದೇಶ ಮಾದರಿಯಲ್ಲಿ ಸರ್ಕಾರವೇ ನೇರವಾಗಿ ಮದ್ಯ ಮಾರಾಟ ನಡೆಸುವ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿ, ವಕೀಲರು ಹಾಗೂ ಪ್ರಶ್ನೆ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಅರುಣ್ ಭೂಪಾಲ್ ರಾಜ್ಯ ಅಬಕಾರಿ ಸಚಿವರಿಗೆ ಸಮಗ್ರ ನೀತಿ ಮನವಿ ಸಲ್ಲಿಸಿದ್ದಾರೆ.

ಮನವಿಯಲ್ಲಿ, ಪ್ರಸ್ತುತ ಖಾಸಗಿ ವ್ಯವಸ್ಥೆಯಿಂದ ಸರ್ಕಾರಕ್ಕೆ ಸಿಗಬೇಕಾದ ಆದಾಯದ ದೊಡ್ಡ ಭಾಗ ಖಾಸಗಿ ವಲಯಕ್ಕೆ ಹೋಗುತ್ತಿದೆ ಎಂದು ವಾದಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ನೇರವಾಗಿ ಮದ್ಯ ಮಾರಾಟ ನಡೆಸಿದರೆ ವಾರ್ಷಿಕ ಆದಾಯದಲ್ಲಿ ಗಣನೀಯ ಹೆಚ್ಚಳ ಸಾಧ್ಯವೆಂದು ಮನವಿಯಲ್ಲಿ ಅಂದಾಜಿಸಲಾಗಿದೆ.

ಮನವಿಯ ಪ್ರಕಾರ, ಪ್ರಸ್ತುತ ಸರ್ಕಾರಕ್ಕೆ ಸುಮಾರು ?30,000–40,000 ಕೋಟಿ ಆದಾಯ ಲಭಿಸುತ್ತಿದ್ದು, ರಾಜ್ಯದ ಒಟ್ಟು ಮದ್ಯ ಮಾರುಕಟ್ಟೆ ?70,000–80,000 ಕೋಟಿಗಳಷ್ಟಿದೆ ಎಂದು ಹೇಳಲಾಗಿದೆ. ಸರ್ಕಾರ ನೇರ ಮಾರಾಟ ವ್ಯವಸ್ಥೆ ಅಳವಡಿಸಿಕೊಂಡರೆ ವಾರ್ಷಿಕ ಆದಾಯ ?45,000–55,000 ಕೋಟಿಗೆ ಏರಬಹುದು ಹಾಗೂ ?10,000–15,000 ಕೋಟಿ ಹೆಚ್ಚುವರಿ ಆದಾಯ ದೊರೆಯುವ ಸಾಧ್ಯತೆ ಇದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.



ಬಳ್ಳಾರಿ ಜಿಲ್ಲೆಯಂತಹ ಗಣಿ ಹಾಗೂ ಕಾರ್ಮಿಕ ಆಧಾರಿತ ಪ್ರದೇಶಗಳಲ್ಲಿ ಮದ್ಯ ಮಾರಾಟದ ಪ್ರಮಾಣ ಹೆಚ್ಚು ಇರುವುದರಿಂದ, ಸರ್ಕಾರದ ನೇರ ನಿಯಂತ್ರಣದ ಪೈಲಟ್ ಯೋಜನೆಯನ್ನು ಇದೇ ಜಿಲ್ಲೆಯಲ್ಲಿ ಆರಂಭಿಸಬೇಕು ಎಂದು ಆಗ್ರಹಿಸಲಾಗಿದೆ.

ಪ್ರಮುಖ ಬೇಡಿಕೆಗಳು

– ಬಳ್ಳಾರಿ ಜಿಲ್ಲೆಯನ್ನು ಪೈಲಟ್ ಯೋಜನೆಯಾಗಿ ಘೋಷಿಸಬೇಕು.

–ಸರ್ಕಾರದ ಮಾಲಿಕತ್ವದ ಮದ್ಯ ಅಂಗಡಿಗಳು ಹಾಗೂ ಬಾರ್‌ಗಳನ್ನು ಆರಂಭಿಸಬೇಕು.

–ಖಾಸಗಿ ಲೈಸೆನ್ಸ್‌ಗಳನ್ನು ಹಂತ ಹಂತವಾಗಿ ಮರುಪರಿಶೀಲಿಸಬೇಕು ಅಥವಾ ರದ್ದುಪಡಿಸಬೇಕು.

– ರಾಜ್ಯ ಮಟ್ಟದ ಬೆವರೇಜ್ ಕಾರ್ಪೊರೇಷನ್ ಮೂಲಕ ನಿರ್ವಹಣೆ ಮಾಡಬೇಕು.

–ಸಂಪೂರ್ಣ ಡಿಜಿಟಲ್ ಮಾನಿಟರಿಂಗ್ ವ್ಯವಸ್ಥೆ ಜಾರಿಗೊಳಿಸಬೇಕು.


ಮನವಿಯಲ್ಲಿ ಈ ವ್ಯವಸ್ಥೆಯ ಪ್ರಯೋಜನಗಳ ಜೊತೆಗೆ ಸವಾಲುಗಳನ್ನೂ ಉಲ್ಲೇಖಿಸಲಾಗಿದೆ. ಸರ್ಕಾರಿ ನಿಯಂತ್ರಣದಿಂದ ಬೆಲೆ, ಗುಣಮಟ್ಟ ಹಾಗೂ ಮಾರಾಟ ಸಮಯವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು ಮತ್ತು ಅಕ್ರಮ ಮದ್ಯ ಮಾರಾಟ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಮತ್ತೊಂದೆಡೆ, ಸರ್ಕಾರಕ್ಕೆ ಹೆಚ್ಚುವರಿ ಆಡಳಿತಾತ್ಮಕ ಹೊರೆ, ಸಿಬ್ಬಂದಿ ಹಾಗೂ ಮೂಲಸೌಕರ್ಯ ವೆಚ್ಚ, ಕಳ್ಳಬಜಾರ್ ಮತ್ತು ಭ್ರಷ್ಟಾಚಾರದಂತಹ ಸವಾಲುಗಳು ಎದುರಾಗುವ ಸಾಧ್ಯತೆಯೂ ಇದೆ ಎಂದು ಸೂಚಿಸಲಾಗಿದೆ.

ಈ ಕಾರಣದಿಂದ ರಾಜ್ಯವ್ಯಾಪಿ ಜಾರಿಗೆ ಮುನ್ನ ಬಳ್ಳಾರಿ ಸೇರಿದಂತೆ ಆಯ್ದ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಪೈಲಟ್ ಯೋಜನೆ ಅನುಷ್ಠಾನಗೊಳಿಸಿ, ಅದರ ಫಲಿತಾಂಶಗಳ ಆಧಾರದ ಮೇಲೆ ಮುಂದಿನ ನಿರ್ಧಾರ ಕೈಗೊಳ್ಳುವಂತೆ ಸರ್ಕಾರವನ್ನು ಮನವಿಯಲ್ಲಿ ಕೋರಲಾಗಿದೆ.

# ಅಭಿವೃದ್ಧಿಯೇ ಗುರಿ, ರಾಜಕೀಯ ಬದಿಗಿಟ್ಟು ಹೋರಾಟ: ಏಮ್ಸ್ ಹಾಗೂ ತಿಂತಿಣಿ ಜಲಾಶಯಕ್ಕಾಗಿ ಧ್ವನಿ ಎತ್ತಿದ ಮಾಜಿ ಸಚಿವರು

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಜು.18.ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಮಹತ್ವದ ಯೋಜನೆಗಳಾದ ಏಮ್ಸ್ ಸ್ಥಾಪನೆ ಮತ್ತು ತಿಂತಿಣಿ ಜಲಾಶಯ, ನವಲಿ ಸಮಾನಾಂತರ ಜಲಾಶಯ ಯೋಜನೆಯನ್ನು ಜಾರಿಗೊಳಿಸಲು ಒತ್ತಾಯಿಸಿ, ಪಕ್ಷಾತೀತವಾಗಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಮಾಜಿ ಸಚಿವ ಕೆ. ಶಿವನಗೌಡ ನಾಯಕ ಹೇಳಿದರು.



ನಗರದ ಕಾಕತೀಯ ಕ್ಲಬ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಎರಡೂ ಯೋಜನೆಗಳು ಈ ಭಾಗದ ರೈತರ ಪಾಲಿಗೆ ಜೀವನಾಡಿಯಾಗಿವೆ. ಆದ್ದರಿಂದ, ರಾಜಕೀಯ ಮತ್ಸರ ಮತ್ತು ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಅಭಿವೃದ್ಧಿಗಾಗಿ ನಾವೆಲ್ಲರೂ ಒಂದಾಗಬೇಕಿದೆ ಎಂದು ಕರೆ ನೀಡಿದರು.

ನವಲಿ ಸಮಾನಾಂತರ ಜಲಾಶಯ ಮತ್ತು ತಿಂತಿಣಿ ಜಲಾಶಯದ ಮೂಲಕ ಸಮಗ್ರ ನೀರಾವರಿ ಸೌಲಭ್ಯ ಒದಗಿಸುವುದು ನಮ್ಮ ಗುರಿ. ಇದಕ್ಕಾಗಿ ಮಠಾಧೀಶರು, ರಾಜಕೀಯ ಪಕ್ಷಗಳ ಮುಖಂಡರು, ರೈತ ಸಂಘಟನೆಗಳು ಹಾಗೂ ಪ್ರಗತಿಪರ ಚಿಂತಕರನ್ನು ಒಗ್ಗೂಡಿಸಿಕೊಂಡು ಶಾಂತಿಯುತ ಮತ್ತು ಕಾನೂನುಬದ್ಧ ಹೋರಾಟ ನಡೆಸಲಾಗುವುದು ಎಂದು ಅವರು ತಿಳಿಸಿದರು.

ಹೋರಾಟದ ಮುಂದಿನ ಹಂತಗಳ ಬಗ್ಗೆ ವಿವರಿಸಿದ ಅವರು, "ಪ್ರಥಮ ಹಂತದಲ್ಲಿ ಹಂತ ಹಂತವಾಗಿ ಪ್ರತಿಭಟನೆಗಳು, ಮನವಿ ಸಲ್ಲಿಕೆ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಒಂದು ವೇಳೆ ಸರ್ಕಾರಗಳು ಸ್ಪಂದಿಸದಿದ್ದರೆ, ಬೃಹತ್ ಜನಾಂದೋಲನದ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರಲಾಗುವುದು ಎಂದು ತಿಳಿಸಿದರು.

ಜಿಲ್ಲೆಯ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ಕೇವಲ ಒಂದು ಪಕ್ಷದ ಹೋರಾಟ ಸಾಕಾಗುವುದಿಲ್ಲ. ಮೂರು ರಾಜ್ಯಗಳ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರ ಸಹಕಾರದಿಂದ ಈ ಯೋಜನೆಗಳನ್ನು ಸಾಕಾರಗೊಳಿಸಲು ಬದ್ಧರಾಗಿರುವುದಾಗಿ ಅವರು ಹೇಳಿದರು.

ಬಿಜೆಪಿ ಮುಖಂಡ ಕೆ. ಕರಿಯಪ್ಪ ಅವರ ಹುಟ್ಟುಹಬ್ಬದ ಕಾರ್ಯಕ್ರಮದ ನಿಮಿತ್ತ ಸಿಂಧನೂರಿಗೆ ಆಗಮಿಸಿದ್ದ ವೇಳೆ ಈ ಮಹತ್ವದ ನಿರ್ಧಾರವನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಕೊಲ್ಲಾ ಶೇಷಗಿರಿರಾವ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ಆದಿಮನಿ ವೀರಲಕ್ಷ್ಮಿ ಪರಮೇಶ್ವರ್, ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷ ವೆಂಕೋಬ ನಾಯಕ, ನಿರುಪಾದಿ ಸುಕಾಲಪೇಟೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಉತ್ತಮ ಆರೋಗ್ಯ ಸೇವೆಯತ್ತ ಜಿಮ್ಸ್ ದಾಪುಗಾಲು:ಡಾ. ಉಮೇಶ್ ಎಸ್.ಆರ್.

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ




ಜು.18:ಅತಂತ್ಯಬಡ ಮತ್ತು ಅಗತ್ಯವಿರುವ ರೋಗಿಗಳಿಗೆ ಅತ್ಯುತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಜಿಮ್ಸ್ ಆಸ್ಪತ್ರೆಯು ನಿರಂತರವಾಗಿ ತನ್ನ ಸೇವೆಗಳನ್ನು ವಿಸ್ತರಿಸುತ್ತಿದ್ದು, ಯಶಸ್ವಿಯಾಗಿ ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಸೇವೆಗಳನ್ನು ಪ್ರಾರಂಭಿಸಿದೆ ಎಂದು ಕಲಬುರಗಿ ಜಿಮ್ಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಉಮೇಶ್ ಎಸ್.ಆರ್. ಹೇಳಿದರು. ಶನಿವಾರ, ನಗರದ ಕಲಬುರಗಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಆಸ್ಪತ್ರೆಯ 10ನೇ ಮಹಡಿಯಲ್ಲಿರುವ ಆಡಿಟೋರಿಯಂ ಸಭಾಂಗಣದಲ್ಲಿ ಆಯೋಜಿಸಿದ ಗುಲ್ಬರ್ಗಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಕಲಬುರಗಿ ಸಾಮಾನ್ಯ ಶಸ್ತ್ರಚಿಕಿತ್ಸಾ ವಿಭಾಗ ಮತ್ತು ಸಾಮಾನ್ಯ ವೈದ್ಯಕೀಯ ವಿಭಾಗ, ಕಲಬುರಗಿ ಸಿಟಿ ಬ್ರಾಂಚ್, ಕಲಬುರಗಿ ಶಾಖೆಯ ಕೆಎಸ್‌ಸಿ–ಎಎಸ್‌ಐ (KSCASI) ಮತ್ತು ಎಪಿಐ (API) ಸಹಯೋಗದೊಂದಿಗೆ "ಎಚ್‌ಪಿಬಿ ಅಪ್‌ಡೇಟ್ಸ್" ಸಿಎಮ್‌ಇ/ಸಿಎ ಜಾಗೃತಿ ಮತ್ತು ವೈಜ್ಞಾನಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕಲಬುರಗಿ ಜಿಮ್ಸ್ ಆಸ್ಪತ್ರೆಯು ಅತ್ಯಾಧುನಿಕ ತಂತ್ರಜ್ಞಾನದ ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗಳನ್ನು ಹೊಂದಿದ್ದು, ಲಿವರ್ (ಪಿತ್ತ ಜನಕಾಂಗ), ಗ್ಯಾಲ್‌ಬ್ಲಾಡರ್ (ಪಿತ್ತಕೋಶ), ಪ್ಯಾನ್‌ಕ್ರಿಯಾಸ್ (ಮೇದೋಜೀರಕ) ಗ್ರಂಥಿ ಹಾಗೂ ಎಂಡೋಸ್ಕೋಪಿ, ಲ್ಯಾಪರೊಸ್ಕೋಪಿ ಸೇರಿದಂತೆ ವಿವಿಧ ಅತ್ಯಾಧುನಿಕ ವೈದ್ಯಕೀಯ ಸವಲತ್ತುಗಳನ್ನು ರೋಗಿಗಳಿಗೆ ಒದಗಿಸುತ್ತಿದೆ. ಸಾಮಾನ್ಯ ಜನರಿಗೆ ಆಸ್ಪತ್ರೆಯ ಸೇವೆಗಳ ಬಗ್ಗೆ ಅರಿವು ಮೂಡಿಸಿ, ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ರೋಗಿಗಳಿಗೆ ತಲುಪಿಸುವುದೇ ಆಸ್ಪತ್ರೆಯ ಮುಖ್ಯ ಗುರಿಯಾಗಿದೆ ಎಂದು ತಿಳಿಸಿದರು.

ಕಲಬುರಗಿ ಜಿಮ್ಸ್ ಆಸ್ಪತ್ರೆಯ ಸಾಮಾನ್ಯ ಶಸ್ತ್ರಚಿಕಿತ್ಸಾ ವಿಭಾಗದ ವೈದ್ಯಕೀಯ ಅಧೀಕ್ಷಕರು, ಪ್ರಾಧ್ಯಾಪಕರು, ಮುಖ್ಯಸ್ಥರು, ಹಾಗೂ ಕಾರ್ಯಕ್ರಮ ಆಯೋಜನಾ ಅಧ್ಯಕ್ಷರಾದ ಡಾ. ಶಿವಕುಮಾರ್ ಸಿ. ರಾಜೇಶ್ವರ್ ಸ್ವಾಗತಿಸಿ, ಜಿಮ್ಸ್ ಆಸ್ಪತ್ರೆಯಲ್ಲಿ ಈಗಾಗಲೇ ಗ್ಯಾಸ್ಟ್ರೋ ಸರ್ಜನ್ ಮತ್ತು ಮೆಡಿಕಲ್ ಗ್ಯಾಸ್ಟ್ರೋ ಎಂಟರಾಲಜಿಸ್ಟ್ ಮುಂತಾದ ವಿವಿಧ ಸೌಲಭ್ಯಗಳು ಲಭ್ಯವಿದ್ದು, ಸಾರ್ವಜನಿಕರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಪ್ರಸ್ತಾವಿಕವಾಗಿ ಮಾತನಾಡಿದರು.

ಆಯೋಜನಾ ಕಾರ್ಯದರ್ಶಿಗಳಾದ, ಡಾ. ಮಹಮ್ಮದ್ ಎಫ್. ಆರ್. ಶೋಯೆಬ್ ಎಂ.ಎಸ್., ಡಿಎನ್‌ಬಿ (ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ), ಸಹಾಯಕ ಪ್ರಾಧ್ಯಾಪಕರು, ಸಾಮಾನ್ಯ ಶಸ್ತ್ರಚಿಕಿತ್ಸಾ ವಿಭಾಗ, ಜಿಮ್ಸ್, ಕಲಬುರಗಿ ಇವರು ಸೆಮಿನಾರ್ ಮಾಡಿ, ಯಕೃತ್ತಿನ ಪರೀಕ್ಷೆಗಳÀ (LFT) ವಿಶ್ಲೇಷಣೆ: ರೋಗಗಳನ್ನು ಗುರುತಿಸುವುದು ಹೇಗೆ? ಮತ್ತು ಯಕೃತ್ತಿನ ಪರೀಕ್ಷೆಗಳು ಕೇವಲ ವೈದ್ಯರಿಗೆ ಮಾತ್ರವಲ್ಲ, ಸಾಮಾನ್ಯರಿಗೂ ಪ್ರಮುಖವಾದ ವಿಷಯವಾಗಿದೆ. ಈ ಪರೀಕ್ಷೆಯ ವರದಿಯಲ್ಲಿನ 'ಟ್ರಾಮಿನೇಸ್' ಮಟ್ಟವು ಹೆಚ್ಚಾಗಿದ್ದರೆ, ಅದು ಯಕೃತ್ತಿನ ಸಮಸ್ಯೆಯನ್ನು ಸೂಚಿಸುತ್ತದೆ. ರೋಗಿಗಳಲ್ಲಿನ ರೋಗಲಕ್ಷಣಗಳನ್ನು ಮತ್ತು ಐಈಖಿ ವರದಿಯ ಫಲಿತಾಂಶಗಳನ್ನು ಸಮಗ್ರವಾಗಿ ನೋಡಿದಾಗ ಮಾತ್ರ ಸರಿಯಾದ ರೋಗನಿರ್ಣಯ ಸಾಧ್ಯ ಎಂಬುದರ ಕುರಿತು ಸಂವಾದ ನಡೆಸಿದರು.

ಡಾ. ಮಹೇಶ್ ಶೆಟ್ಟಿ ಅವರು ಮಾತನಾಡಿ, ಪ್ಯಾಂಕ್ರಿಯಾಟಿಕ್ ಸ್ಯೂಡೋಸಿಸ್ಟ್ ನಿರ್ವಹಣೆ: ಶಸ್ತ್ರಚಿಕಿತ್ಸೆಯ ವಿಷಯದ ಕುರಿತು ಸಂವಾದ ಮಡಿಸಿದರು.

ಕಾರ್ಯಕ್ರಮದಲ್ಲಿ ಡಾ. ಜೈರಾಜ್ ವಿ. ಬೊಮ್ಮನ್ ಎಂಡಿ, ಡಿಎನ್‌ಬಿ (ಮೆಡಿಕಲ್ ಗ್ಯಾಸ್ಟ್ರೋಎಂಟರಾಲಜಿ), ಸಹಾಯಕ ಪ್ರಾಧ್ಯಾಪಕರು, ಗ್ಯಾಸ್ಟ್ರೋಎಂಟರಾಲಜಿ ವಿಭಾಗ, ಎಸ್‌ಎಸ್‌ಹೆಚ್–ಜಿಮ್ಸ್ (SSH-GIMS), ಕಲಬುರಗಿ, ಡಾ. ರವಿಶಂಕರ್ ಬಿ, ಡಾ. ಪ್ರಸಾದ್ ಬಾಬು, ಡಾ. ವಿಶ್ವನಾಥ್ ರೆಡ್ಡಿ ಸೇರಿದಂತೆ ಜಿಮ್ಸ್ ಯುಜಿ, ಪಿಜಿ ವಿದ್ಯಾರ್ಥಿಗಳು, ತಜ್ಞರು ಮುಂತಾದವರು ಉಪಸ್ತಿತರಿದ್ದರು.

# ಜಿಟಿಟಿಸಿ: ತರಬೇತಿಗಾಗಿ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಸಂಸ್ಥೆಯ ಬಹುಕೌಶಾಲ್ಯಾಭಿವೃದ್ಧಿ ಕೇಂದ್ರದ ತರಬೇತಿಗಾಗಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹತ್ತನೇ ತರಗತಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪ.ಪಂಗಡದ ತಲಾ 10 ಯುವಕರಿಗೆ 'ಟೂಲರೂಮ್ ಮಶಿನಿಸ್ಟ್' ತಾಂತ್ರಿಕ ವೃತ್ತಿ ತರಬೇತಿಗೆ ಉಚಿತ ಪ್ರವೇಶಾತಿ ಪ್ರಾರಂಭವಾಗಿದೆ.

ತರಬೇತಿ ಹೊಂದಿದ ಅಭ್ಯರ್ಥಿಗಳಿಗೆ ಕೈಗಾರಿಕೆಗಳಲ್ಲಿ ಹೆಚ್ಚಿನ ಬೇಡಿಕೆಯಿದ್ದು, ಒಂದೇ ಕೋರ್ಸಿನಲ್ಲಿ ಫಿಟ್ಟರ್, ಟರ್ನರ್, ಮಿಲ್ಲರ್, ಸಿಎನ್‌ಸಿ, ಕ್ಯಾಡ್–ಕ್ಯಾಮ್ ಮತ್ತು ಟೂಲ್ ಆಂಡ್ ಡೈ ಮೇಕಿಂಗ್ ಟ್ರೇಡ್‌ಗಳಲ್ಲಿ ಆನ್ ದಿ ಜಾಬ್ ತರಬೇತಿ ನೀಡುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಉದ್ಯೋಗಾವಕಾಶಗಳು ದೊರಕುತ್ತವೆ. ಜೊತೆಗೆ ಅಟೊಕ್ಯಾಡ್, ಕನ್ನಡ ಮತ್ತು ಇಂಗ್ಲಿಷ್ ಭಾಷಾ ಕೌಶಲ್ಯ ಹಾಗೂ ಉದ್ಯೋಗ ಕೌಶಲ್ಯಗಳನ್ನು ಕಲಿಸಲಾಗುತ್ತದೆ. ಜಿಟಿಟಿಸಿ ಸಂಸ್ಥೆಯು ಉನ್ನತ ತಂತ್ರಜ್ಞಾನ ಮತ್ತು ತರಬೇತಿ ಸೌಲಭ್ಯಗಳನ್ನು ಅಳವಡಿಸಿಕೊಂಡಿದ್ದು, ಕೈಗಾರಿಕೆಗಳಲ್ಲಿ ಅನುಭವ ಹೊಂದಿದ ಶಿಕ್ಷಕರನ್ನು ಹೊಂದಿದೆ. ತರಬೇತಿಯ ನಂತರ ವಿದ್ಯಾರ್ಥಿಗಳಿಗೆ ಟೂಲಿಂಗ್, ವಿಮಾನ ತಯಾರಿಕೆ, ಮತ್ತು ಅಟೊಮೊಬೈಲ್ ವಲಯಗಳ ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಿಸಿ ಕೊಡಲಾಗುವುದು. ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ನಗರದ ಕಂಟೋನ್‌ಮೆಂಟ್ ನ ಐಶ್ವರ್ಯ ಕಾಲೋನಿಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ(ಐ.ಟಿ.ಐ. ಕ್ಯಾಂಪಸ್) ಅಥವಾ ದೂ.08392–200087, ಮೊ.9620057086, 6361880236, 7795680677ಗೆ ಸಂಪರ್ಕಿಸಬಹುದು ಎಂದು ಜಿಟಿಟಿಸಿಯ ಪ್ರಾಂಶುಪಾಲರು ಮುತ್ತಣ್ಣ ದರ್ಮಂತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣ
## ತಾ॥ ಬಸವಕಲ್ಯಾಣ ಜಿ॥ ಬೀದರ

ಸಂಖ್ಯೆ:ಪ್ರಾಕೃಪಸಸಬಸವಕಲ್ಯಾಣ/ / 2026 ದಿನಾಂಕ: 18/07/2026

### ಪತ್ರಿಕೆ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣ ತಾ॥ ಬಸವಕಲ್ಯಾಣ ಜಿ॥ ಬೀದರ ಸಂಘದ ಆವರಣದಲ್ಲಿ ನಿರ್ಮಿಸಿರುವ ಮಳಿಗೆಗಳು ಮತ್ತು ಬಸವ ಗಂಜಿನ ಮತ್ತು ಬೇಟಬಾಲಕುಂದಾ ಗ್ರಾಮದ ಗೋದಾಮು ಬಹಿರಂಗ ಹರಾಜು ಮೂಲಕ ಬಾಡಿಗೆ ನೀಡಲು ಸಂಘದ ಆಡಳಿತಾಧಿಕಾರಿಗಳು ಪ್ರಕಟಣೆ ನೀಡಿರುತ್ತಾರೆ, ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ನಿಗದಿತ ದಿನಾಂಕದಂದು ಸಮಯಕ್ಕೆ ಸರಿಯಾಗಿ ಹಾಜರಿದ್ದು ಈ ಸಂಘವು ನಿಗದಿಪಡಿಸಿದ ಷರ್ತಿಗೊಳಪಟ್ಟು ಬಹಿರಂಗ ಹರಾಜಿನಲ್ಲಿ ಭಾಗಿಯಾಗಿ ಬಾಡಿಗೆ ಪಡೆಯುವುದು, ಈ ಕುರಿತು ಮಾಹಿತಿಯು ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ | ಬಾಡಿಗೆ ನೀಡುವ ಮಳಿಗೆಗಳ ಸ್ಥಳ | ಬಹಿರಂಗ ಹರಾಜು ಮೂಲಕ ಬಾಡಿಗೆ ನೀಡುವ ಮಳಿಗೆಗಳ/ ಗೋದಾಮು ವಿಸ್ತೀರ್ಣ | ಬಾಡಿಗೆ ನೀಡುವ ಮಳಿಗೆ ಸಂಖ್ಯೆ | ಬಹಿರಂಗ ಹರಾಜಿನ ಸ್ಥಳ, ದಿನಾಂಕ & ಸಮಯ |
|---|---|---|---|---|
| 1 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣದ ಬಸವೇಶ್ವರ ವೃತ್ತದಲ್ಲಿರುವ ಮಳಿಗೆಗಳು | 1. ನೆಲ ಮಹಡಿಯ ಅಂಗಡಿಗಳ ವಿಸ್ತೀರ್ಣ 12X18 ಚ ಅಡಿ 05X18 ಚ ಅಡಿ<br>2. ಮೊದಲನೆ ಮಹಡಿಯ ಅಂಗಡಿಗಳ ವಿಸ್ತೀರ್ಣ 12X18 ಚ ಅಡಿ | 1,2,3,4,5,6,7,8,9,10,11,12,13,14,15,16,17,18,19,20,21,22,23,24,25,26,27,28,29,30,31,32,33,34,3561,62 63,64<br>36,37,38,42,48,49,50,51,52,53,54,55,56,57,58,59,60 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣ ಕಛೇರಿಯ ಆವರಣದಲ್ಲಿ ದಿನಾಂಕ: 01/08/2026 ಸಮಯ: 11:30 ಮುಂಜಾನೆ |
| 2 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣದ ಬಸವ ಗಂಜಿನ ಆವರಣದಲ್ಲಿರುವ ಗೋದಾಮು | 30X120 ಚ ಅಡಿ ಗೋದಾಮು | ನಗರಸಭೆ ನಂ. 27–146(Old) 27–154 (New) | |
| 3 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣದ ಬೇಟಬಾಲಕುಂದಾ ಗ್ರಾಮದ ಗೋದಾಮು | 13X24 ಚ ಅಡಿ ಗೋದಾಮ | II 488 | |

ಷರತ್ತುಗಳು:–

1. ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ರೂ.25,000/– ಠೇವಣಿಯನ್ನು ಸಂಘದ ಹೆಸರಿನಲ್ಲಿ ಡಿ.ಡಿ./ನಗದು ಹಣ ದಿನಾಂಕ: 21/07/2026 ರಿಂದ ದಿನಾಂಕ: 01/08/2026 ರ ಬೆಳ್ಳಿಗೆ 10:00 ಗಂಟೆಯೊಳಗೆ ರಶೀದಿಯನ್ನು ಪಡೆದು ಬಹಿರಂಗ ಹರಾಜಿನಲ್ಲಿ ಭಾಗವಹಿಸುವುದು.
2. ನೆಲಮಹಡಿ/ಮೊದಲನೇ ಮಹಡಿ/ಗೋದಾಮ ಮಗಳಿಗೆಗಳು ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಬಿಡ್ಡಿನ ಮೊತ್ತದ 25% ಹರಾಜಿನ ದಿನಾಂಕದಂದು ಪಾವತಿಸಿ ಉಳಿದ ಹಣವನ್ನು ಹರಾಜು ಆದ ನಂತರ 03 ದಿವಸಗಳ ಒಳಗೆ ಸಂಘಕ್ಕೆ ಪಾವತಿಸಬೇಕು, ಒಂದು ವೇಳೆ ಹರಾಜಿನ ಬಿಡ್ಡ ಮೊತ್ತವನ್ನು ನಿಗದಿತ ದಿನಾಂಕದಂದು ಮರು ಪಾವತಿಸಲು ವಿಫಲವಾದಲ್ಲಿ ತಾವು ಕೊಟ್ಟಿರುವ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಈ ಮಳಿಗೆಗಳಲ್ಲಿ ಮೌಂಸದ ಅಂಗಡಿ, ಮಧ್ಯದ ಅಂಗಡಿ ಮತ್ತು ಪತ್ತಿನ ಸಹಕಾರಿ ಸಂಘ ಸಂಸ್ಥೆಗಳನ್ನು ಹೊರತುಪಡಿಸಿ ಇತರರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.
4. ಈ ಮಳಿಗೆಗಳನ್ನು ಬಹಿರಂಗ ಹರಾಜು ಮಾಡುವುದು ಮತ್ತು ಮುಂದೂಡುವುದು ಹಾಗೂ ರದ್ದು ಪಡಿಸುವುದು ಅಂತಿಮ ಅಧಿಕಾರ ಆಡಳಿತ ಅಧಿಕಾರಿಯವರು ಹೊಂದಿರುತ್ತಾರೆ.
5. ಇನ್ನಿತರ ಷರತ್ತುಗಳು ಲೀಲಾವಿನ ಸಮಯದಲ್ಲಿ ಓದಿ ಹೇಳಲಾಗುವುದು.

ತಮ್ಮ ವಿಶ್ವಾಸಿ,

ಆಡಳಿತಾಧಿಕಾರಿಗಳು,
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.
ಬಸವಕಲ್ಯಾಣ ತಾ॥ ಬಸವಕಲ್ಯಾಣ ಜಿ॥ ಬೀದರ

ಮುಖ್ಯ ಕಾರ್ಯನಿರ್ವಾಹಕರು,
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘನಿ.
ಬಸವಕಲ್ಯಾಣ ತಾ॥ ಬಸವಕಲ್ಯಾಣ ಜಿ॥ ಬೀದರ

# ಗಾಳಿ ವಿದ್ಯುತ್ ಯೋಜನೆ: ಭೂ ಒಪ್ಪಂದ ಸಮಗ್ರ ತನಿಖೆಗೆ ಹರ್ಷಾ ಎಸ್ ಗುತ್ತೇದಾರ ಆಗ್ರಹ



ಕಲಬುರಗಿ:ಗಾಳಿ ವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದ ಭೂ ಒಪ್ಪಂದಗಳ BOOK-1ನೋಂದಣಿ ಕುರಿತು ತನಿಖೆ ನಡೆಸಿ, ರೈತ ಸ್ನೇಹಿ ಹಾಗೂ ಏಕರೂಪ ನೋಂದಣಿ ವ್ಯವಸ್ಥೆ ಜಾರಿಗೊಳಿಸುವಂತೆ ಜಿ.ಪಂ ಮಾಜಿ ಉಪಾಧ್ಯಕ್ಷ ಹರ್ಷಾ ಎಸ್ ಗುತ್ತೇದಾರ ಒತ್ತಾಯಿಸಿದ್ದಾರೆ.

ಶುಕ್ರವಾರ ಬೆಂಗಳೂರಿನಲ್ಲಿರುವ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ನೋಂದಣಿ ಮಹಾನಿರೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರಿಗೆ ಭೇಟಿಯಾಗಿ ಮನವಿ ಪತ್ರ ಸಲ್ಲಿಸಿರುವ ಅವರು, ಕಲಬುರಗಿ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಗಾಳಿ ವಿದ್ಯುತ್ ಯೋಜನೆಗಳಿಗಾಗಿ ಕೆಲವು ಖಾಸಗಿ ಕಂಪನಿಗಳು, ವಿಶೇಷವಾಗಿ ಬ್ಲೂ ಪೈನ್ ಎನರ್ಜಿ ಲಿಮಿಟೆಡ್, ರೈತರೊಂದಿಗೆ ಮಾಡಿಕೊಂಡಿರುವ ಭೂ ಒಪ್ಪಂದಗಳ ನೋಂದಣಿ ವಿಧಾನದಿಂದ ಸಾವಿರಾರು ರೈತರು ಹಲವು ರೀತಿಯ ತೊಂದರೆಗಳನ್ನು ಎದುರಿಸುತ್ತಿದ್ದಾರೆ, ಆದರೆ ರೈತರ ಹಕ್ಕುಗಳಿಗೆ ಧಕ್ಕೆಯಾಗದಂತೆ ನೋಂದಣಿ ವ್ಯವಸ್ಥೆ ರೈತ ಸ್ನೇಹಿಯಾಗಿರಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಪ್ರಸ್ತುತ ಕಂಪನಿಯು ಉಕಂ ಮೂಲಕ BOOK-1 ಅಡಿಯಲ್ಲಿ ಒಪ್ಪಂದಗಳನ್ನು ನೋಂದಣಿ ಮಾಡಿಸುತ್ತಿದೆ ಎಂದು ತಿಳಿದುಬಂದಿದೆ. ಇದರಿಂದ ರೈತರಿಗೆ ಇಅ ದಾಖಲೆ, ಬ್ಯಾಂಕ್ ಸಾಲ, ಬೆಳೆ ವಿಮೆ, ಸರ್ಕಾರಿ ಯೋಜನೆಗಳು, ಓಔಅ ಅಗತ್ಯ ಹಾಗೂ ಭವಿಷ್ಯದ ವ್ಯವಹಾರಗಳಲ್ಲಿ ತೊಂದರೆ ಉಂಟಾಗುತ್ತಿದೆ ಎಂದು ರೈತರು ತಮಗೆ ದೂರು ನೀಡಿದ್ದಾರೆ ಎಂದು ಹೇಳಿದ್ದಾರೆ.

ಇದಲ್ಲದೆ, ಸುಜ್ಲಾನ್ ಎನರ್ಜಿ ವಿಜಯಪುರ ಮತ್ತು ಗದಗ ಜಿಲ್ಲೆಗಳಲ್ಲಿ ದಾರಿಹಕ್ಕು ಹಾಗೂ ವೈಮಾನಿಕ ಹಕ್ಕುಗಳ Easement ಒಪ್ಪಂದಗಳನ್ನು BOOK–4ರಲ್ಲಿ ನೋಂದಣಿ ಮಾಡಿರುವುದಾಗಿ ತಿಳಿದುಬಂದಿದೆ. ಇದು ಕಾನೂನುಬದ್ಧವಾಗಿದ್ದರೆ, ಇದೇ ರೀತಿಯ ರೈತ ಸ್ನೇಹಿ ವ್ಯವಸ್ಥೆಯನ್ನು ರಾಜ್ಯಾದ್ಯಂತ ಪರಿಶೀಲಿಸಿ ಜಾರಿಗೊಳಿಸುವಂತೆ ಆಗ್ರಹಿಸಿದ್ದಾರೆ.

ಆದ್ದರಿಂದ ಇಲಾಖಾ ತನಿಖೆ ನಡೆಸಿ, BOOK-1 ಬದಲಿಗÉ BOOK-4 ಅಥವಾ ಇತರೆ ಕಾನೂನುಬದ್ಧ ರೈತ ಸ್ನೇಹಿ ವಿಧಾನವನ್ನು ಪರಿಶೀಲಿಸಿ, ರಾಜ್ಯಾದ್ಯಂತ ಏಕರೂಪ ಮಾರ್ಗಸೂಚಿ ಹೊರಡಿಸುವಂತೆ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

## ಬಣಜಿಗ ಸಮಾಜದ ಅಧ್ಯಕ್ಷರಾಗಿ ವೀರಭದ್ರಪ್ಪ ಆಯ್ಕೆ



**ಬಾಗಲಕೋಟೆ:** ತಾಲೂಕ ಬಣಜಿಗರ ಕ್ಷೇಮಾಭಿವೃದ್ಧಿ ಸಂಘದ ನೂತನ ಅಧ್ಯಕ್ಷರಾಗಿ ವೀರಭದ್ರಪ್ಪ ಅಂಗಡಿ, ಪ್ರಧಾನ ಕಾರ್ಯದರ್ಶಿಯಾಗಿ ಸಂಗಮೇಶ ಅಂಗಡಿ, ಕೋಶಾಧ್ಯಕ್ಷರಾಗಿ ಬಸವರಾಜ ಸಬರದ ಆಯ್ಕೆಯಾಗಿದ್ದಾರೆ.


ಶುಕ್ರವಾರ ಚರಂತಿಮಠದ ಶಿವಾನುಭವ ಮಂಟಪದಲ್ಲಿ ಜರುಗಿದ ನೂತನ ಸಭೆಯಲ್ಲಿ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಮಾಜದ ಹಿರಿಯರಾದ ಶಿವಕರಣ ಯಾದವಾಡ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಗೌರವಾಧ್ಯಕ್ಷರನ್ನಾಗಿ ಬಸವರಾಜ ಚಿನಿವಾಲರ, ಸಂಘಟನಾ ಕಾರ್ಯದರ್ಶಿಯಾಗಿ ಅರವಿಂದ ನಾವಲಗಿ, ಸಹ ಕಾರ್ಯದರ್ಶಿಯಾಗಿ ಮುರುಗೇಶ ಶಿವನಗುತ್ತಿ, ಉಪಾಧ್ಯಕ್ಷರುಗಳಾಗಿ ಪ್ರಭು ವೈಜಾಪುರ ಹಾಗೂ ಪಂಡಿತ ಆರಬ್ಬಿ ಅವರುಗಳನ್ನು ಆಯ್ಕೆ ಮಾಡಲಾಯಿತು.

ಆರಂಭದಲ್ಲಿ ಬಸವರಾಜ ಶೀಲವಂತರ ಕಳೆದ ನಾಲ್ಕು ವರ್ಷಗಳಿಂದ ಕೈಗೊಂಡ ಕಾರ್ಯಗಳ ಬಗ್ಗೆ ವಿವರಣೆ ನೀಡಿದರು.

ಸಭೆಯಲ್ಲಿ ಆನಂದ ಜಿಗಜಿನ್ನಿ ಮಾತನಾಡಿ, ತಾಲೂಕಿನಲ್ಲಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯನ್ನು ಸಂಘದ ಸದಸ್ಯರನ್ನಾಗಿ ಮಾಡಬೇಕು ಹಾಗೆಯೇ ಯುವ ಘಟಕ ಮತ್ತು ಮಹಿಳಾ ಘಟಕಗಳ ಸಹಯೋಗದೊಂದಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದರು.

ರವಿ ಕುಮಟಗಿ, ಮುತ್ತು ಜೋಳದ ಮಾತನಾಡಿದರು. ಸಭೆಯಲ್ಲಿ ವಿಶ್ವನಾಥ ವೈಜಾಪುರ, ಶಿವಾನಂದ ಶೆಟ್ಟರ, ಅಶೋಕ ಕಲ್ಯಾಣಶೆಟ್ಟರ, ಬಸವರಾಜ ಇಂಡಿ, ಈರಣ್ಣ ಮುಕುಪ್ಪಿ, ಪ್ರಕಾಶ ವಾಲಿ, ಶ್ರೀಶೈಲ ಅರಬ್ಬಿ, ಮಹಿಳಾ ಘಟಕದ ಅಧ್ಯಕ್ಷೆ ಮೇಘಾ ಜಿಗಜಿನ್ನಿ ಕಾರ್ಯದರ್ಶಿ ಶಿವಲೀಲಾ ಪಟ್ಟಣಶೆಟ್ಟಿ, ಸಂಘಟನಾ ಕಾರ್ಯದರ್ಶಿ ಚಿತ್ರಾ ಕುಮಟಗಿ ಹಾಗೂ ವೀಣಾ ಕುಮಟಗಿ, ಯುವ ಘಟಕದ ಮಹಾಂತೇಶ ಜೋಳದ, ಸಂತೋಷ ಕತ್ತಿ ಹಾಗೂ ಸಮಾಜ ಬಂಧುಗಳು ಪಾಲ್ಗೊಂಡಿದ್ದರು.

## ಬಿಜೆಪಿ ಎಸ್ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ರಾಜು ನಾಯ್ಕರ ನೇಮಕ



**ಬಾಗಲಕೋಟೆ:** ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸೂಚನೆಯ ಮೇರೆಗೆ ಬಿಜೆಪಿ ಕರ್ನಾಟಕ ಎಸ್.ಟಿ.ಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಬಾಗಲಕೋಟೆಯ ರಾಜು ವ್ಹಿ.ನಾಯ್ಕರ ಅವರನ್ನು ನೇಮಕ ಮಾಡಿ ಎಸ್.ಟಿ.ಮೋರ್ಚಾ ರಾಜ್ಯ ಅಧ್ಯಕ್ಷ ಬಂಗಾರು ಹನುಮಂತು ಆದೇಶ ಹೊರಡಿಸಿದ್ದಾರೆ.

ಪಕ್ಷದ ಹುದ್ದೆಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸುತ್ತ, ಪಕ್ಷದ ಸಂಘಟನೆಯನ್ನು ತಳಮಟ್ಟದಲ್ಲಿ ಸದೃಢಗೊಳಿಸುತ್ತ ಮುಂಬರುವ ಎಲ್ಲಾ ರೀತಿಯ ಸವಾಲುಗಳನ್ನು ಎದುರಿಸಲು ಶಕ್ತಿ ತುಂಬುತ್ತ ಪಕ್ಷದ ವರ್ಚಸ್ಸನ್ನು ಹೆಚ್ಚಿಸುವಲ್ಲಿ ಸತತ ಶ್ರಮ ವಹಿಸಬೇಕು ಎಂದು ರಾಜು ನಾಯ್ಕರ ಅವರಿಗೆ ಬಂಗಾರು ಹನುಮಂತ ಸೂಚಿಸಿದ್ದಾರೆ.

## ಇಂದಿನಿಂದ ತಿಮ್ಮಾಪುರ ಏತ ನೀರಾವರಿ ಕಾಲುವೆಗೆ ನೀರು



**ಬಾಗಲಕೋಟೆ:** ತಿಮ್ಮಾಪುರ ಏತ ನೀರಾವರಿ ಯೋಜನೆಯ ಬಲದಂಡೆ ಕಾಲುವೆಗೆ ಭಾನುವಾರದಿಂದ ನೀರು ಹರಿಸಲಾಗುವುದು ಎಂದು ಶಾಸಕ ಉಮೇಶ ಮೇಟಿ ತಿಳಿಸಿದ್ದಾರೆ.

ಶನಿವಾರ ಕೆಬಿಜೆಎನ್ಎಲ್ ಮುಖ್ಯ ಅಭಿಯಂತರ ಬಸವರಾಜ್ ಡಿ. ಅವರನ್ನು ಭೇಟಿ ಮಾಡಿ ಪರಿಸ್ಥಿತಿಯ ಕುರಿತು ಚರ್ಚಿಸಿ ಮುಂಗಾರು ಮಳೆ ಬಾರದೇ ಹೋಗಿರುವುದರಿಂದ ಕೆರೆ, ಕಟ್ಟೆಗಳು, ಹಳ್ಳಗಳು ಬತ್ತಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಕಾಲುವೆಗೆ ನೀರು ಬಿಡುವಂತೆ ಕೋರಲಾಯಿತು ಎಂದು ಮೇಟಿ ತಿಳಿಸಿದರು.

ಉಂಟಾಗಿರುವ ತೊಂದರೆ ನಿವಾರಿಸಲು ನಾಳೆಯಿಂದ ಕಾಲುವೆಗೆ ನೀರು ಹರಿಸುವುದಾಗಿ ಬಸವರಾಜ್ ಭರವಸೆ ನೀಡಿದ್ದಾರೆ ಎಂದು ಶಾಸಕ ಉಮೇಶ ಮೇಟಿ ಹೇಳಿದ್ದು, ನೀರನ್ನು ವ್ಯರ್ಥ ಮಾಡದೇ ಕುಡಿಯುವುದಕ್ಕೆ ಹಾಗೂ ಜಾನುವಾರುಗಳಿಗೆ ಮಾತ್ರ ಬಳಕೆ ಮಾಡುವಂತೆ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

# ಲೋಕಾ ಬಲೆಗೆ ಬಿದ್ದ ಪ್ರವಾಸೋದ್ಯಮ ಇಲಾಖೆ ಜೆ.ಡಿ ತಿಪ್ಪೇಸ್ವಾಮಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಪ್ರವಾಸೋದ್ಯಮ ಇಲಾಖೆ, ಜಂಟಿ ನಿರ್ದೇಶಕರು, ತಿಪ್ಪೇಸ್ವಾಮಿ ಕಲಬುರ್ಗಿ ವಿಭಾಗ, ಇವರು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರದ ಅಗ್ನಿ ಶಾಮಕ ದಳ ಕಛೇರಿ ಹತ್ತಿರ ದೂರುದಾರ ಎನ್. ಲಕ್ಷ್ಮೀಪತಿ ಇವರಿಂದ ರೂ. 5.ಲಕ್ಷ ಲಂಚದ ಹಣವನ್ನು ಪಡೆದುಕೊಂಡು ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದಿರುತ್ತಾರೆ.



2024-25ನೇ ಸಾಲಿನಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ (ಡಿ.ಟಿ.ಡಿ.ಸಿ.) ವಿಜಯನಗರ ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಚಿತ್ರ, ಕ್ಯೂಆರ್ ಕೋಡ್, ಡೈರೆಕ್ಷನ್ ಬೋರ್ಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ರೂ.18,37,860/-ಗಳ ವೆಚ್ಚದಲ್ಲಿ ನಿರ್ವಹಿಸಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದ ಹಣವನ್ನು ಪಡೆದುಕೊಂಡಿದ್ದಿರುತ್ತದೆ. ಆದರೆ ಎಸ್. ತಿಪ್ಪೇಸ್ವಾಮಿ, ಜಂಟಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕರಬುರಗಿ ವಿಭಾಗ, ತಾನು ಮೇಲಾಧಿಕಾರಿಯಾಗಿದ್ದು, ಈ ಕಾಮಗಾರಿಯನ್ನು ಸರಿಯಾಗಿ ನಿಯಮಾನುಸಾರ ನಿರ್ವಹಣೆ ಮಾಡಿರುವುದಿಲ್ಲವೆಂದು ಹೇಳಿ ತನ್ನ ಸ್ನೇಹಿತ ಲಕ್ಷ್ಮೀನಾರಾಯಣ ಇವರಿಗೆ ಹೇಳಿ, ರೂ.5,00,000/-ಗಳ ಲಂಚದ ಹಣವನ್ನು ನೀಡಬೇಕೆಂದು ತನಗೆ ಹಾಗೂ ತನ್ನ ಸ್ನೇಹಿತ ಶ್ರೀ ಲಕ್ಷ್ಮೀನಾರಾಯಣ ಇವರಿಗೆ ಕಳೆದ 8-10 ತಿಂಗಳಿನಿಂದ ಬೇಡಿಕೆ ಇಡುತ್ತಾ ಬಂದಿರುತ್ತಾರೆ. ಈ ರೀತಿಯಾಗಿ ಎಸ್.ತಿಪ್ಪೇಸ್ವಾಮಿ, ಜಂಟಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕರಬುರಗಿ ವಿಭಾಗ, ಇವರು ದೂರುದಾರ ಹಾಗೂ ಅವರ ಸ್ನೇಹಿತನಿಗೆ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗೆಗಿನ ಸಂಭಾಷಣೆಗಳನ್ನು ಅವರುಗಳು ತಮ್ಮ ಮೊಬೈಲ್‌ಗಳಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಿಯಮಾನುಸಾರ ಕಾಮಗಾರಿಗಳನ್ನು ನಿರ್ವಹಿಸಿದ್ದರೂ ಕೂಡಾ ಲಂಚದ ಹಣ ರೂ. 5,00,000/-ಗಳಿಗೆ ಬೇಡಿಕೆಯಿಟ್ಟಿರುವ ಎಸ್. ತಿಪ್ಪೇಸ್ವಾಮಿ, ಜಂಟಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕರಬುರಗಿ ವಿಭಾಗ, ಇವರಿಗೆ ಲಂಚದ ಹಣ ಕೊಡಲು ಇಷ್ಟವಿರದ ದೂರುದಾರ ಎನ್. ಲಕ್ಷ್ಮೀಪತಿ ಇವರು ನೀಡಿದ ದೂರಿನ ಆಧಾರದ ಮೇರೆ ಕರ್ನಾಟಕ ಲೋಕಾಯುಕ್ತ, ಹೊಸಪೇಟೆ ಠಾಣೆಯಲ್ಲಿ □□□ಕ್ಟ್ 1988 (ತಿದ್ದುಪಡಿ ಕಾಯ್ದೆ) ದಿ: 16-07-2026 ರಂದು ಪ್ರಕರಣವನ್ನು ದಾಖಲಿಸಲಾಗಿರುತ್ತದೆ.

ಶುಕ್ರವಾರ ದಿ:17-07-2026 ರಂದು ಆರೋಪಿ ಎಸ್. ತಿಪ್ಪೇಸ್ವಾಮಿ, ಜಂಟಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕರಬುರಗಿ ವಿಭಾಗ, ಇವರು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರದ ಅಗ್ನಿ ಶಾಮಕ ದಳ ಕಛೇರಿ ಹತ್ತಿರ ಫಿರ್ಯಾದಿ ಶ್ರೀ ಎನ್. ಲಕ್ಷ್ಮೀಪತಿ ಇವರಿಂದ ರೂ. 5,00,000/-ಗಳ ಲಂಚದ ಹಣವನ್ನು ಪಡೆದುಕೊಂಡು ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿರುತ್ತಾರೆ. ಸದರಿ ಆರೋಪಿತರನ್ನು ಬಂಧಿಸಿದ್ದು, ಮುಂದಿನ ತನಿಖೆಯನ್ನು ಶ್ರೀ ಅಮರೇಶ್ ಹುಬ್ಬಳ್ಳಿ, ಪೊಲೀಸ್ ನಿರೀಕ್ಷಕರು, ಕಲೋ, ಹೊಸಪೇಟೆ ಇವರು ಕೈಗೊಂಡಿದ್ದು ಇರುತ್ತದೆ. ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ಕಛೇರಿಯ ಪೊಲೀಸ್ ಅಧೀಕ್ಷಕರಾದ ಎನ್. ವಾಸುದೇವರಾಮ ಇವರ ಮಾರ್ಗದರ್ಶನದಲ್ಲಿ ಪ್ರಕರಣವನ್ನು ದಾಖಲಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ.

ಪೊಲೀಸ್ ಉಪಾಧೀಕ್ಷಕರಾದ ಸಚಿನ್ ಎಸ್. ಚಲವಾದಿ, ಕಲೋ, ಹೊಸಪೇಟೆ ಇವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗಿದ್ದು, ಟ್ರಾಪ್ ಕಾಲಕ್ಕೆ ಹೊಸಪೇಟೆ ಲೋಕಾಯುಕ್ತ ಕಛೇರಿಯ ಪೊಲೀಸ್ ನಿರೀಕ್ಷಕರಾದ ರಾಜೇಶ್ ಎಸ್. ಲಮಾಣಿ ಮತ್ತು ಹೊಸಪೇಟೆ ಲೋಕಾಯುಕ್ತ ಠಾಣಾ ಪೊಲೀಸ್ ಸಿಬ್ಬಂದಿಗಳಾದ ರೇಣುಕಪ್ಪ, ಸಿಹೆಚ್‌ಸಿ, ಕೃಷ್ಣ, ಎಹೆಚ್‌ಸಿ, ಕುಮಾರ್‌ನಾಯ್ಕ, ಸಿಪಿಸಿ, ಚನ್ನಬಸವ, ಸಿಪಿಸಿ, ಬಳ್ಳಾರಿ ಲೋಕಾಯುಕ್ತ ಕಛೇರಿಯ ಸಿಬ್ಬಂದಿಗಳಾದ ಅಂಜಿನಪ್ಪ, ಸಿಪಿಸಿ, ದಾಸಪ್ಪ, ಸಿಪಿಸಿ, ನಜೀಮ್, ಸಿಪಿಸಿ ಮತ್ತು ಚಂದ್ರಶೇಖರ್, ಸಿಹೆಚ್‌ಸಿ ಇವರುಗಳು ಹಾಜರಿದ್ದು ಕರ್ತವ್ಯ ನಿರ್ವಹಿಸಿರುತ್ತಾರೆ.

# ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ: ಸಚಿವನ ರಾಜಿನಾಮೆಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ

ದೇಶಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿರುವ ನೀಟ್ (NEET) ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಖಂಡಿಸಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೈತಿಕ ಹೊಣೆ ಹೊತ್ತು ಕೂಡಲೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ, ಸೌಹಾರ್ದ ಕರ್ನಾಟಕ ವೇದಿಕೆ ಹಗರಿಬೊಮ್ಮನಹಳ್ಳಿ ತಾಲೂಕು ಸಮಿತಿಯ ವತಿಯಿಂದ ಶನಿವಾರ ಬಸವೇಶ್ವರ ವೃತ್ತದ ಸಮೀಪ ಪ್ರತಿಭಟನೆ ನಡೆಸಲಾಯಿತು.



ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿವಿಧ ಸಂಘಟನೆಗಳ ಮುಖಂಡರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನೀಟ್ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮಗಳಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಅನಿಶ್ಚಿತತೆಗೆ ಸಿಲುಕಿದ್ದು, ದೇಶದ ಶಿಕ್ಷಣ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸಕ್ಕೆ ಧಕ್ಕೆಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ವಿದ್ಯಾರ್ಥಿಗಳು ವರ್ಷಗಳ ಕಾಲ ಕಠಿಣ ಪರಿಶ್ರಮ ಪಟ್ಟು ಪರೀಕ್ಷೆಗೆ ಸಿದ್ಧತೆ ನಡೆಸುತ್ತಾರೆ. ಆದರೆ ಪ್ರಶ್ನೆ ಪತ್ರಿಕೆ ಸೋರಿಕೆಯಂತಹ ಘಟನೆಗಳಿಂದ ಪ್ರಾಮಾಣಿಕವಾಗಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದ್ದು, ಪ್ರತಿಭಾವಂತರ ಭವಿಷ್ಯದೊಂದಿಗೆ ಚೆಲ್ಲಾಟವಾಡಿದಂತಾಗಿದೆ. ಇಂತಹ ಗಂಭೀರ ಪ್ರಕರಣಕ್ಕೆ ಕೇಂದ್ರ ಸರ್ಕಾರ ಸಂಪೂರ್ಣ ಹೊಣೆ ಹೊತ್ತು ತಪ್ಪಿತಸ್ಥರನ್ನು ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಲಡಾಖ್‌ನ ಪರಿಸರವಾದಿ ಹಾಗೂ ಸಾಮಾಜಿಕ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರು ಕಳೆದ 20 ದಿನಗಳಿಂದ ದೆಹಲಿಯ ಜಂತರ್ ಮಂತರ್‌ನಲ್ಲಿ ವಿವಿಧ ಜನಪರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಡೆಸುತ್ತಿರುವ ಉಪವಾಸ ಸತ್ಯಾಗ್ರಹಕ್ಕೆ ಪ್ರತಿಭಟನಾಕಾರರು ಬೆಂಬಲ ಸೂಚಿಸಿದರು. ಪ್ರಜಾಪ್ರಭುತ್ವದಲ್ಲಿ ಶಾಂತಿಯುತ ಹೋರಾಟಕ್ಕೆ ಸರ್ಕಾರ ಗೌರವ ನೀಡಬೇಕು ಹಾಗೂ ಅವರ ಬೇಡಿಕೆಗಳ ಕುರಿತು ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ಮುಖಂಡ ಆರ್.ಎಸ್. ಬಸವರಾಜ್, ದೇಶದ ಶಿಕ್ಷಣ ವ್ಯವಸ್ಥೆ ಪಾರದರ್ಶಕ ಹಾಗೂ ವಿಶ್ವಾಸಾರ್ಹವಾಗಿರಬೇಕಾದರೆ ಪರೀಕ್ಷಾ ಅಕ್ರಮಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಅಥವಾ ಸ್ವತಂತ್ರ ತನಿಖಾ ಸಂಸ್ಥೆಯಿಂದ ಸಮಗ್ರವಾಗಿ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸೌಹಾರ್ದ ಕರ್ನಾಟಕ ವೇದಿಕೆಯ ತಾಲೂಕು ಸಂಚಾಲಕಿ ಬಿ. ಮಾಳಮ್ಮ ಮಾತನಾಡಿ, ಶಿಕ್ಷಣವು ಪ್ರತಿಯೊಬ್ಬ ವಿದ್ಯಾರ್ಥಿಯ ಮೂಲಭೂತ ಹಕ್ಕಾಗಿದ್ದು, ಪರೀಕ್ಷಾ ಅಕ್ರಮಗಳಿಂದ ವಿದ್ಯಾರ್ಥಿಗಳ ಮಾನಸಿಕ ಸ್ಥೈರ್ಯ ಕುಸಿಯುತ್ತಿದೆ. ಯಾವುದೇ ವಿದ್ಯಾರ್ಥಿಗೆ ಅನ್ಯಾಯವಾಗದಂತೆ ಪಾರದರ್ಶಕ ಪರೀಕ್ಷಾ ವ್ಯವಸ್ಥೆಯನ್ನು ಜಾರಿಗೆ ತರಬೇಕು. ದೇಶದ ಯುವಜನರ ಭವಿಷ್ಯವನ್ನು ರಾಜಕೀಯಕ್ಕಿಂತ ಮೇಲಾಗಿ ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಎಸ್. ಜಗನ್ನಾಥ್, ಕೆ. ಗಾಳೆಪ್ಪ, ಕೆ.ರಮೇಶ್, ಎಸ್‌ಎಫ್‌ಐ ಮುಖಂಡ ಜಯಸೂರ್ಯ, ಪಿ. ಚಾಂದಬೀ, ಸೈಯದ್ ಇರ್ಫಾನ್, ಶಿಶುನಾಳ ಷರೀಫ್ ಸೇರಿದಂತೆ ಸೌಹಾರ್ದ ಕರ್ನಾಟಕ ವೇದಿಕೆಯ ಪದಾಧಿಕಾರಿಗಳು, ಸಿಐಟಿಯು ಕಾರ್ಯಕರ್ತರು, ವಿದ್ಯಾರ್ಥಿಗಳು ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಭಾಗವಹಿಸಿ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಪ್ರತಿಭಟನೆಯ ಅಂತ್ಯದಲ್ಲಿ ಕೇಂದ್ರ ಸರ್ಕಾರವು ನೀಟ್ ಅಕ್ರಮ ಪ್ರಕರಣದ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ವಿದ್ಯಾರ್ಥಿಗಳ ಭವಿಷ್ಯವನ್ನು ರಕ್ಷಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸವನ್ನು ಮರುಸ್ಥಾಪಿಸಬೇಕು ಎಂದು ಒತ್ತಾಯಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

# ಆರೋಗ್ಯಕರ ಜೀವನಕ್ಕೆ ಪೊಲೀಸ್ ಸಿಬ್ಬಂದಿಗೆ ಕರೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಿಯಮಿತ ಆರೋಗ್ಯ ತಪಾಸಣೆ ಹಾಗೂ ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಂಡಾಗ ಮಾತ್ರ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಹೇಳಿದರು.



ನವನಗರದ ಧಾತ್ರಿ ಮಂಗಲ ಭವನದಲ್ಲಿ ಶನಿವಾರ ಜಿಲ್ಲಾ ಪೊಲೀಸ್ ಹಾಗೂ ಅಮರೇಶ್ವರ ಕ್ಲಿನಿಕ್ ಇವರ ಸಹಯೋಗದಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪೊಲೀಸ್ ಸಿಬ್ಬಂದಿ ಸಾರ್ವಜನಿಕ ಸೇವೆಯಲ್ಲಿ ಹಗಲಿರುಳು ಕರ್ತವ್ಯ ನಿರ್ವಹಿಸುತ್ತಿದ್ದು, ಒತ್ತಡದ ಬದುಕಿನ ನಡುವೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅಗತ್ಯವಾಗಿದೆ. ಇಂತಹ ಆರೋಗ್ಯ ಶಿಬಿರಗಳು ಸಿಬ್ಬಂದಿಗಳಲ್ಲಿ ಆರೋಗ್ಯದ ಜಾಗೃತಿ ಮೂಡಿಸುವುದರ ಜೊತೆಗೆ ವಿವಿಧ ಕಾಯಿಲೆಗಳನ್ನು ಆರಂಭ ಹಂತದಲ್ಲಿಯೇ ಪತ್ತೆಹಚ್ಚಲು ಸಹಕಾರಿಯಾಗುತ್ತವೆ. ಬಸವನ ಬಾಗೇವಾಡಿಯ ಅಮರೇಶ್ವರ ಕ್ಲಿನಿಕ್‌ನ ನೇತೃತ್ವದಲ್ಲಿ ಉಚಿತವಾಗಿ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಂಡಿರುವ ಕಾರ್ಯ ಶ್ಲಾಘನೀಯವಾದುದು ಎಂದರು.

ಅಮರೇಶ್ವರ ಕ್ಲಿನಿಕ್‌ನ ಡಾ.ಅಮರೇಶ ಮಿಣಜಗಿ ಮಾತನಾಡಿ, ನಮ್ಮ ದೇಶದ ರಕ್ಷಣೆ ಮಾಡುತ್ತಿರುವ ಸೈನಿಕರು ಒಂದು ಕಣ್ಣು ಆದರೆ ಇನ್ನೊಂದು ಕಣ್ಣು ನಮ್ಮ ಪೊಲೀಸರು. ವಿಶ್ರಾಂತಿ ಇಲ್ಲದೇ ಹಗಲಿರುಳು ಸಾರ್ವಜನಿಕರ ಸೇವೆಯಲ್ಲಿ ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಯ ಆರೋಗ್ಯ ಬಗ್ಗೆ ಕಾಳಜಿ ವಹಿಸುವ ಉದ್ದೇಶದಿಂದ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ. ಕರ್ತವ್ಯದ ಒತ್ತಡದ ನಡುವೆಯು ಸಿಬ್ಬಂದಿ ತಮ್ಮ ಆರೋಗ್ಯ ನಿರ್ಲಕ್ಷಿಸದೇ ನಿಯಮಿತ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಆರೋಗ್ಯ ಶಿಬಿರದಲ್ಲಿ ಅಮರೇಶ್ವರ ಕ್ಲಿನಿಕ್ ತಜ್ಞ ವೈದ್ಯರ ತಂಡ ತೂಕ, ರಕ್ತದೊತ್ತಡ, ಮಧುಮೇಹ, ಇಸಿಜಿ, ಕಣ್ಣು, ಎಲುವು ಮತ್ತು ಕೀಲುಗಳ ತಪಾಸಣೆ, ಹೃದಯ ರೋಗ ತಪಾಸಣೆ, ಬಾಡಿ ಕಾಂಪೋಜಿಷನ್ ತಪಾಸಣೆ ಸೇರಿದಂತೆ ಎಲ್ಲ ತರಹದ ಸಾಮಾನ್ಯ ರೋಗಗಳ ಪರೀಕ್ಷೆಗಳನ್ನು ನಡೆಸಲಾಯಿತು.

ಅಗತ್ಯವಿರುವ ಸಿಬ್ಬಂದಿಗೆ ವೈದ್ಯಕೀಯ ಸಲಹೆ, ಮುಂದಿನ ಚಿಕಿತ್ಸೆಗೆ ಮಾರ್ಗದರ್ಶನ ನೀಡಲಾಯಿತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಜಗದೀಶ ಸೇರಿದಂತೆ ಇತರೆ ಪೊಲೀಸ್ ಸಿಬ್ಬಂದಿಗಳು ಶಿಬಿರದಲ್ಲಿ ಭಾಗವಹಿಸಿ ಉಚಿತ ಆರೋಗ್ಯ ತಪಾಸಣೆಯ ಸೌಲಭ್ಯವನ್ನು ಪಡೆದುಕೊಂಡರು.

# ಪೌರಕಾರ್ಮಿಕ ಆರೋಗ್ಯ ರಕ್ಷಣೆ: ಗ್ಲೌಸ್ ಸೇರಿದಂತೆ ಸುರಕ್ಷತಾ ಪರಿಕರ ಧರಿಸುವುದು ಕಡ್ಡಾಯ: ಜಿಲ್ಲಾಧಿಕಾರಿ ಇಕ್ರಮುಲ್ಲಾ ಶರೀಫ್

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಪೌರಕಾರ್ಮಿಕರ ಆರೋಗ್ಯ, ಸುರಕ್ಷತೆಯ ಹಿತದೃಷ್ಟಿಯಿಂದ ಕೆಲಸದ ಅವಧಿಯಲ್ಲಿ ಗ್ಲೌಸ್ ಸೇರಿದಂತೆ ಎಲ್ಲಾ ಸುರಕ್ಷತಾ ಪರಿಕರಗಳನ್ನು ಧರಿಸಬೇಕು ಈ ಬಗ್ಗೆ ಸ್ಥಳೀಯ ಮುಖ್ಯ ಅಧಿಕಾರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ ಇಕ್ರಮುಲ್ಲಾ ಶರೀಫ ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶನಿವಾರ ಜಿಲ್ಲಾ ಮಟ್ಟದ ಸಫಾಯಿ ಕರ್ಮಚಾರಿಗಳ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯಿಂದ 2 ನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸದ್ಯ ಕೆಲವು ಕಾರ್ಮಿಕರು ಗ್ಲೌಸ್ ಧರಿಸುವುದರಿಂದ ಕೈ ಬೆವರುತ್ತದೆ ಎಂಬ ಕಾರಣ ನೀಡಿ, ನೇರವಾಗಿ ಕೈಯಿಂದಲೇ ಕಸ ವಿಲೇವಾರಿ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಸುರಕ್ಷತಾ ಪರಿಕರಗಳ ಬಳಕೆ ಕರ್ತವ್ಯದ ಒಂದು ಭಾಗವಾಗಿದ್ದು, ಇದರಲ್ಲಿ ಯಾವುದೇ ವಿನಾಯಿತಿ ನೀಡಬಾರದು, ಪೌರಕಾರ್ಮಿಕರ ಸುರಕ್ಷತಾ ಪರಿಕರ ಧರಿಸದೆ ಇದ್ದಲ್ಲಿ ಅವರನ್ನು ಕೆಲಸದಿಂದ ತಗೆದು ಹಾಕಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೂಡಲೇ ವಾರ್ಡ್ ಮಟ್ಟದಲ್ಲಿ ಪೌರಕಾರ್ಮಿಕರ ಸಭೆ ಕರೆದು ಈ ನಿಯಮವನ್ನು ಕಡ್ಡಾಯಗೊಳಿಸಬೇಕು. ಪೌರ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯ ಆರೋಗ್ಯ ತಪಾಸಣೆ ಮತ್ತು ವರ್ಷಕ್ಕೊಮ್ಮೆ ಮಾಸ್ಟರ್ ಹೆಲ್ತ್ ಚೆಕ್-ಅಪ್ ಮಾಡಿಸಲು ಕ್ರಮವಹಿಸಬೇಕು ಎಂದರು.

ಜಿಲ್ಲೆಯಲ್ಲಿ ಮ್ಯಾನುಯಲ್ ಸ್ಕ್ಯಾವೆಂಜರ್ಸ್ ನಿರ್ಮೂಲನೆ ಹಾಗೂ ಕಾರ್ಮಿಕರ ಸುರಕ್ಷತೆ ಕುರಿತು ಸುದೀರ್ಘ ಚರ್ಚೆ ಜರುಗಿತು. ಮಾನವ ಚಾಲಿತ ಮಲಸಂಸ್ಕಾರ ತಡೆಯಲು ಯುಜಿಡಿ ಇಲ್ಲದ ಪಟ್ಟಣ ಪಂಚಾಯಿತಿಗಳಿಗೂ ಸಣ್ಣ ಸಕ್ಕಿಂಗ್ ಹಾಗೂ ಜೆಟ್ಟಿಂಗ್ ಯಂತ್ರಗಳನ್ನು ಒದಗಿಸಲು ಚರ್ಚಿಸಲಾಯಿತು.

ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ಹಾಗೂ ಸ್ವಯಂ ಉದ್ಯೋಗ ಯೋಜನೆಗಳ ಪ್ರಗತಿ ಪರಿಶೀಲನೆ ವೇಳೆ, 2022-23ನೇ ಸಾಲಿನ ಯೋಜನೆಗಳು ಕಳೆದ ನಾಲ್ಕು ವರ್ಷಗಳಿಂದ ಬಾಕಿ ಉಳಿದಿರುವುದಕ್ಕೆ ಅಧಿಕಾರಿ ಸಂಪೂರ್ಣ ವಿಫಲರಾಗಿದ್ದಾರೆ. ರಾಜ್ಯದ 29 ಜಿಲ್ಲೆಗಳಲ್ಲಿ ಈ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿರುವಾಗ, ನಮ್ಮ ಜಿಲ್ಲೆಯಲ್ಲಿ ಮಾತ್ರ ಯಾಕೆ ವಿಳಂಬವಾಗುತ್ತಿದೆ? ಕೆಲಸ ಮಾಡಲು ಆಸಕ್ತಿ ಇಲ್ಲದಿದ್ದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ತಿಳಿಸಿದರು.

ಖಾಲಿ ಹುದ್ದೆಗಳ ಭರ್ತಿ ಮತ್ತು ವಸತಿ ಸೌಕರ್ಯ:- ಸರ್ಕಾರದ ಆದೇಶದನ್ವಯ ಪೌರಕಾರ್ಮಿಕರು, ತೋಟಗಾರರು, ಲೋಡರ್ಸ್, ಕ್ಲೀನರ್ಸ್ ಹಾಗೂ ವಾಟರ್ ಸಪ್ಲೈ ಹೆಲ್ಪರ್ಸ್ ಸೇರಿದಂತೆ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಶೀಘ್ರವೇ ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ.

ಇನ್ನು ಪಿ.ಎಂ.ಎ.ವೈ ಅಡಿಯಲ್ಲಿ ಮಂಜೂರಾಗಿರುವ ಒಟ್ಟು 215 ಮನೆಗಳ ಪೈಕಿ 121 ಮನೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಇನ್ನುಳಿದ ಮನೆಗಳಿಗೆ ಜಾಗದ ಕೊರತೆ ಎದುರಾಗಿದ್ದು, ತಕ್ಷಣವೇ ಸೂಕ್ತ ಸರ್ಕಾರಿ ಜಾಗ ಗುರುತಿಸಿ ಕಾಮಗಾರಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಸ್‌ಸಿಪಿ/ಟಿಎಸ್‌ಪಿ ಯೋಜನೆಯ ಪ್ರಗತಿ ಪರಿಶೀಲನಾ ಇಲಾಖೆವಾರು ಸಭೆಯನ್ನು ನಡೆಸಿದರು ಮುಂದಿನ ತ್ರೈಮಾಸಿಕ ಸಭೆಯಲ್ಲಿ ಕಡ್ಡಾಯವಾಗಿ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದು, ಇಲ್ಲಿಯವರೆಗೆ ಆದ ಖರ್ಚುವೆಚ್ಚದ ಮಾಹಿತಿಯನ್ನು ನೀಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಕಾನೂನು ಸುವ್ಯವಸ್ಥೆಯ ವಿಭಾಗದ ಡಿ.ಸಿ.ಪಿ. ಶಾಲೂ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಎಸ್ ಸಂಕನೂರ, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಡಿಯುಡಿಸಿ ಜಿಲ್ಲಾ ಯೋಜನಾ ನಿರ್ದೇಶಕ ಮುನ್ನವರ ದೌಲಾ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ಚಂದ್ರಶೇಖರ ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಮಹಾನಗರ ಪಾಲಿಕೆ ಅಧಿಕಾರಿಗಳು ಜಿಲ್ಲಾಮಟ್ಟದ ಅಧಿಕಾರಿಗಳು ರಾಜ್ಯ ಸಮಿತಿ ಸದಸ್ಯರಾದ ಶ್ರೀಮತಿ ನರ್ಮದಾ ಸೌದಾ, ಮ್ಯಾನುವೇಲ್ ಸ್ಕ್ಯಾವೆಂಜರ್ ಜಿಲ್ಲಾ ಜಾಗೃತಿ ಸಮಿತಿ ನಾಮನಿರ್ದೇಶನ ಸದಸ್ಯರು ಉಪಸ್ಥಿತರಿದ್ದರು.

## 21ರಂದು ಉಚಿತ ನೇತ್ರ ಶಿಬಿರ



**ಹುಣಸಗಿ:** ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಎನ್. ದಂಡಿನ ಅವರ ಜನ್ಮದಿನದ ಅಂಗವಾಗಿ ಜುಲೈ 21ರಂದು ಹುಣಸಗಿ ಪಟ್ಟಣದ ಯು.ಕೆ.ಪಿ. ಕ್ಯಾಂಪ್‌ನ ಶ್ರೀ ನೀಲಕಂಠೇಶ್ವರ ದೇವಸ್ಥಾನದಲ್ಲಿ ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಎನ್. ದಂಡಿನ ತಿಳಿಸಿದರು.

ಪಟ್ಟಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದಲ್ಲಿ ಬೆಳಿಗ್ಗೆ 8ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಶಿಬಿರ ನಡೆಯಲಿದ್ದು, ಕಣ್ಣಿನ ಪೊರೆ ಸೇರಿದಂತೆ ವಿವಿಧ ನೇತ್ರ ಸಂಬಂಧಿತ ಕಾಯಿಲೆಗಳ ಉಚಿತ ತಪಾಸಣೆ ನಡೆಸಲಾಗುವುದು ಎಂದರು.

ಶಸ್ತ್ರಚಿಕಿತ್ಸೆ ಅಗತ್ಯವಿರುವ ರೋಗಿಗಳನ್ನು ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆಗೆ ಕರೆದೊಯ್ದು ಉಚಿತ ಶಸ್ತ್ರಚಿಕಿತ್ಸೆ ಹಾಗೂ ಚಿಕಿತ್ಸೆ ನೀಡಲಾಗುವುದು. ಗ್ರಾಮೀಣ ಭಾಗದ ಬಡ ಮತ್ತು ಮಧ್ಯಮ ವರ್ಗದ ಜನರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಆಯೋಜಕ ನಾಗಣ್ಣ ಸಾಹುಕಾರ ದಂಡಿನ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಶಿಬಿರದ ಸಂಘಟಕರು ಉಪಸ್ಥಿತರಿದ್ದರು.

## ಎಸ್‌ಪಿ ಪ್ರದೀಪ್ ಗುಂಟಿ ಕಾರ್ಯಕ್ಕೆ ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆಯಿಂದ ಶ್ಲಾಘನೆ




**ಬೀದರ್:** ನಗರದ ಹೊರವಲಯದ ಚಿಕ್ಕಪೇಟೆ ರಿಂಗ್‌ರೋಡ್ ಸಮೀಪ ಇತ್ತೀಚೆಗೆ ನಡೆದ ಕಾರ್ಯಾಚರಣೆಯಲ್ಲಿ ಐದು ನಾಡ ಪಿಸ್ತೂಲ್, ತಲ್ವಾರ್, ಮದ್ದುಗುಂಡು ಸೇರಿದಂತೆ ವಿವಿಧ ಮಾರಕ ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಿ, ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದ ಆರೋಪಿಗಳನ್ನು ಬಂಧಿಸುವಲ್ಲಿ ಬೀದರ ಜಿಲ್ಲಾ ಪೊಲೀಸ್ ಇಲಾಖೆ ಯಶಸ್ವಿಯಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯನ್ನು ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆ ಕಲ್ಯಾಣ ಕರ್ನಾಟಕ ಘಟಕ ಪ್ರಶಂಸಿಸಿದೆ.

ಬೀದರ ಜಿಲ್ಲೆಯಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಸಾರ್ವಜನಿಕ ಸುರಕ್ಷತೆ ಕಾಪಾಡುವಲ್ಲಿ ಎಸ್‌ಪಿ ಪ್ರದೀಪ್ ಗುಂಟಿ ಅವರ ದಕ್ಷ ಆಡಳಿತ ಮಹತ್ವದ ಪಾತ್ರ ವಹಿಸಿದೆ ಎಂದು ವೇದಿಕೆ ತಿಳಿಸಿದೆ. ಅವರ ಅಧಿಕಾರಾವಧಿಯಲ್ಲಿ ಅಪರಾಧ ಪ್ರಕರಣಗಳ ನಿಯಂತ್ರಣ, ಅಕ್ರಮ ಗಾಂಜಾ ಮಾರಾಟ ತಡೆ, ಕಳುವಾದ ಚಿನ್ನಾಭರಣ, ವಾಹನಗಳು ಹಾಗೂ ಹಣವನ್ನು ಪತ್ತೆಹಚ್ಚಿ ನೊಂದವರಿಗೆ ಮರಳಿಸುವ ಕಾರ್ಯಗಳು ಜನಮೆಚ್ಚುಗೆಗೆ ಪಾತ್ರವಾಗಿವೆ ಎಂದು ಶ್ಲಾಘಿಸಿದೆ.

ಶಾಲೆ ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳು, ಜಾಥಾಗಳ ಆಯೋಜನೆ ಸೇರಿದಂತೆ ಹಲವು ಜನಪರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಇಲಾಖೆಯ ಎಲ್ಲಾ ಹಂತದ ಸಿಬ್ಬಂದಿಯ ಸಹಕಾರದೊಂದಿಗೆ ಎಸ್‌ಪಿ ಪ್ರದೀಪ್ ಗುಂಟಿ ಅವರು ದಕ್ಷ ಹಾಗೂ ಪಾರದರ್ಶಕ ಆಡಳಿತ ನೀಡುತ್ತಿರುವುದು ಶ್ಲಾಘನೀಯ ಎಂದು ವೇದಿಕೆ ಅಭಿಪ್ರಾಯಪಟ್ಟಿದೆ.

ಎಸ್‌ಪಿ ಅವರ ಅನುಪಮ ಸೇವೆಯನ್ನು ಸ್ಮರಿಸಿ ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆ (ಬಿ) ಕಲ್ಯಾಣ ಕರ್ನಾಟಕ ಅಧ್ಯಕ್ಷ ಹೆಚ್.ಎ. ಅಲ್ಬರ್ಟ್ ಕೋಟೆ ಅವರ ನೇತೃತ್ವದಲ್ಲಿ ಮಾಜಿ ಕಾರ್ಯದರ್ಶಿ ಡಿ.ಕೆ. ಸುಂದರರಾಜ್, ಸಮಾಜಸೇವಕ ಅಮೀತ್ ಕೋಟೆ, ಸಾಮ್ಯುವೇಲ್ ರಾಜಪ್ಪ, ಕಂಟೆಪ್ಪ ಟೀಚರ್ ಹಾಗೂ ಅರುಣಕುಮಾರ ಕೋಟೆ ಸೇರಿದಂತೆ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ಬರಪೀಡಿತ ರಾಜ್ಯ ಘೋಷಣೆಗೆ ಆಗ್ರಹ



**ಕಲಬುರಗಿ:** ಜುಲೈ 3ನೇ ವಾರ ಕಳೆಯುತ್ತಾ ಬಂದರೂ ಮಳೆಯಾಗದೇ ಜನರ ಜೀವನ ದುಸ್ತರವಾಗಿದೆ. ಆದ್ದರಿಂದ ರಾಜ್ಯವನ್ನು ಬರಗಾಲ ಪೀಡಿತ ಎಂಬುದಾಗಿ ಘೋಷಣೆ ಮಾಡುವಂತೆ ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ರವಿ ಸಿಂಗೆ ಆಗ್ರಹಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು,ಬರಗಾಲ ಎದುರಿಸಲು ಸರ್ಕಾರ ಸಮರೋಪಾದಿಯಲ್ಲಿ ಸಿದ್ಧತೆ ಮಾಡಿಕೊಳ್ಳಬೇಕು. ಹಿಂಗಾರು ಮಳೆಯಾದರೆ ಪುನಃ ಬಿತ್ತನೆ ಮಾಡಲು ಉಚಿತವಾಗಿ ಬೀಜ, ರಸಗೊಬ್ಬರ ಕೊಡುವ ವ್ಯವಸ್ಥೆಯಾಗಬೇಕು ಎಂದು ಅವರು ಒತ್ತಾಯಿಸಿದರು.

ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಪರಿಣಾಮ ಕಲಬುರಗಿ ಜಿಲ್ಲೆಯ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳೆ ನಂಬಿ ಬಿತ್ತನೆ ಮಾಡಿದ್ದ ಹೆಸರು, ತೊಗರಿ, ಸೂರ್ಯಕಾಂತಿ, ಉದ್ದು, ಜೋಳ, ಹತ್ತಿ, ಸೇರಿದಂತೆ ವಿವಿಧ ಬೆಳೆಗಳು ಸಮರ್ಪಕ ಮಳೆಯ ಕೊರತೆಯಿಂದ ಒಣಗಿ ಹೋಗುತ್ತಿದ್ದು, ರೈತರಲ್ಲಿ ಆತಂಕ ಮನೆ ಮಾಡಿದೆ. ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ತಕ್ಷಣ ಪರಿಹಾರ ಘೋಷಿಸಬೇಕು, ಬೆಳೆ ಹಾನಿ ಸಮೀಕ್ಷೆ ನಡೆಸಿ ಸೂಕ್ತ ಪರಿಹಾರ ವಿತರಿಸಬೇಕು.ಬೆಳೆ ಸಾಲ ಮರುಪಾವತಿಗೆ ಅವಕಾಶ ನೀಡಬೇಕು ಹಾಗೂ ರೈತರ ಹಿತದೃಷ್ಟಿಯಿಂದ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದರು.ರೈತರ ಬದುಕು ಸಂಕಷ್ಟಕ್ಕೆ ಸಿಲುಕಿರುವ ಈ ಸಂದರ್ಭದಲ್ಲಿ ಸರ್ಕಾರ ವಿಳಂಬ ಮಾಡದೆ ಸ್ಥಳ ಪರಿಶೀಲನೆ ನಡೆಸಿ,ಅಗತ್ಯ ಪರಿಹಾರ ಹಾಗೂ ನೆರವು ಘೋಷಿಸಬೇಕು ಎಂದು ಅವರು ಸರಕಾರಕ್ಕೆ ಮನವಿ ಮಾಡಿಕೊಂಡರು.

# ನೀಟ್ ಪರೀಕ್ಷಾ ಅಕ್ರಮ ಖಂಡಿಸಿ ಕೇಂದ್ರ ಶಿಕ್ಷಣ ಸಚಿವರ ರಾಜಿನಾಮೆಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ನೀಟ್ ಪರೀಕ್ಷೆಯಲ್ಲಿನ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಅಕ್ರಮಗಳನ್ನು ಖಂಡಿಸಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ, ಲಡಾಖ್ ಪರಿಸರ ಹಾಗೂ ಸ್ಥಳೀಯರ ಹಕ್ಕುಗಳ ರಕ್ಷಣೆಗಾಗಿ ಹೋರಾಟ ನಡೆಸುತ್ತಿರುವ ಸೋನಮ್ ವಾಂಗ್ಚುಕ್ ಅವರಿಗೆ ಬೆಂಬಲ ಸೂಚಿಸಿ ದಲಿತ ವಿದ್ಯಾರ್ಥಿ ಪರಿಷತ್ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದೆ.

ನೀಟ್ ಪರೀಕ್ಷೆಯಲ್ಲಿನ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಅಕ್ರಮಗಳಿಂದ ಲಕ್ಷಾಂತರ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣದ ಕನಸು ಭಗ್ನಗೊಂಡಿದೆ. ಇದು ಸಂವಿಧಾನದ ಸಮಾನತೆಯ ಹಕ್ಕು ಮತ್ತು ಘನತೆಯಿಂದ ಬದುಕುವ ಹಕ್ಕಿನ ಉಲ್ಲಂಘನೆಯಾಗಿದ್ದು, ಕೇಂದ್ರ ಶಿಕ್ಷಣ ಸಚಿವರು ನೈತಿಕ ಹೊಣೆ ಹೊತ್ತು ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಇಂದು ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ನಗರದ ಜಿಲ್ಲಾ ಉಸ್ತುವಾರಿ ಕಚೇರಿ ಎದುರಗಡೆ ಧರಣಿ ಸತ್ಯಾಗ್ರಹ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಸಲ್ಲಿಸಿದ್ದಾರೆ.

'ಸಾರ್ವಜನಿಕ ಪರೀಕ್ಷೆಗಳ (ಅಕ್ರಮ ತಡೆ) ಕಾಯ್ದೆ 2024' ಅಡಿ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಮಧ್ಯವರ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಕಾರ್ಯವೈಖರಿ ಕುರಿತು ಸಮಗ್ರ ತನಿಖೆ ನಡೆಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಲಾಗಿದೆ.

ಲಡಾಖ್‌ನ ಪರಿಸರ, ಸ್ಥಳೀಯ ಸಂಸ್ಕೃತಿ ಹಾಗೂ ಹಕ್ಕುಗಳ ರಕ್ಷಣೆಗಾಗಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರ ಹೋರಾಟಕ್ಕೆ ದಲಿತ ವಿದ್ಯಾರ್ಥಿ ಪರಿಷತ್ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಲಡಾಖ್‌ಗೆ ಸಂವಿಧಾನದ ಆರನೇ ಅನುಸೂಚಿಯಡಿ ವಿಶೇಷ ಸ್ವಾಯತ್ತ ಸ್ಥಾನಮಾನ ನೀಡಬೇಕು ಹಾಗೂ ಶಾಂತಿಯುತ ಪ್ರತಿಭಟನೆ ನಡೆಸುವ ಹಕ್ಕನ್ನು ಗೌರವಿಸಬೇಕು ಎಂದು ಮನವಿ ಮಾಡಲಾಗಿದೆ.



ನೀಟ್ ಹಗರಣದ ಸಮಗ್ರ ತನಿಖೆಗೆ ಆದೇಶಿಸುವುದರ ಜೊತೆಗೆ, ಕೇಂದ್ರ ಸರ್ಕಾರಕ್ಕೆ ಶಿಕ್ಷಣ ಸಚಿವರ ರಾಜೀನಾಮೆ ಪಡೆಯುವಂತೆ ರಾಷ್ಟ್ರಪತಿಗಳು ನಿರ್ದೇಶನ ನೀಡಬೇಕು. ಸೋನಮ್ ವಾಂಗ್ಚುಕ್ ಅವರ ನ್ಯಾಯಸಮ್ಮತ ಬೇಡಿಕೆಗಳನ್ನು ಸಂವಿಧಾನದ ಚೌಕಟ್ಟಿನೊಳಗೆ ಈಡೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.


ಈ ಸಂದರ್ಭದಲ್ಲಿ ಇಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಂಚಾಲಕ ಸಂದೀಪ ಕಾಂಟೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ ಮಾಲೆ, ಭಾಲ್ಕಿ ತಾಲೂಕು ಸಂಚಾಲಕ ಮಹಾದೇವ, ಔರಾದ್ ತಾಲೂಕು ಸಂಚಾಲಕ ಆನಂದ ಕಾಂಬಳೆ, ವಿಠಲದಾಸ ಪ್ಯಾಗೆ, ರಮೇಶ್ ಡಾಕುಳಗಿ, ಬಾಬು ಪಾಸ್ವಾನ್, ಶ್ರೀಪತರಾವ ದಿನೆ, ಶಿವಕುಮಾರ ನೀಲಿಕಟ್ಟಿ, ಪ್ರದೀಪ ನಾಟೇಕರ, ಸುರೇಶ್ ಜೋಜನಕಾರ, ಸಾಯಿ ಸಿಂಧೆ, ರಮೇಶ್ ಪಾಸ್ವಾನ್, ಗೋಪಾಲ ದೊಡ್ಡಿ, ಸಂಗಮೇಶ ಭಾವಿದೊಡ್ಡಿ, ಬಸವರಾಜ ಭಾವಿದೊಡ್ಡಿ ಹಾಗೂ ಜನಾರ್ಧನ ದೀನೆ ಸೇರಿದಂತೆ ಅನೇಕರು ಇದ್ದರು.

## ಸ್ಯಾಮ್‌ಸಂಗ್: ಫೋನ್‌ಗಳಿಗಾಗಿ ಮುಂಗಡ ಬುಕ್ಕಿಂಗ್

• ಮಲ್ಲಮ್ಮ ನುಡಿ ವಾರ್ತೆ ಗುರುಗ್ರಾಮ್

ಸ್ಯಾಮ್ಸಂಗ್ ಇಂದು, ಜಾಗತಿಕ ಅನಾವರಣಕ್ಕೂ ಮುನ್ನ ಭಾರತದಲ್ಲಿನ ಗ್ರಾಹಕರು ಮುಂದಿನ ತಲೆಮಾರಿನ ಗ್ಯಾಲಕ್ಸಿ ಫೋಲ್ಡಬಲ್ ಸ್ಮಾರ್ಟ್‌ಫೋನ್‌ಗಳನ್ನು ಪ್ರೀ-ರಿಸರ್ವ್ ಮಾಡಿಕೊಳ್ಳಬಹುದು ಎಂದು ಘೋಷಿಸಿದೆ.

ಗ್ರಾಹಕರು ಶೀಘ್ರದಲ್ಲೇ ಬಿಡುಗಡೆಯಾಗಲಿರುವ ಸ್ಯಾಮ್ಸಂಗ್‌ನ ಫೋಲ್ಡಬಲ್ ಸ್ಮಾರ್ಟ್‌ಫೋನ್‌ಗಳನ್ನು ₹999 ಮರುಪಾವತಿಸಬಹುದಾದ (Refundable) ಟೋಕನ್ ಮೊತ್ತವನ್ನು ಪಾವತಿಸುವ ಮೂಲಕ ಪ್ರೀ-ರಿಸರ್ವ್ ಮಾಡಬಹುದು. ಪ್ರೀ-ರಿಸರ್ವೇಶನ್ ಅನ್ನು Samsung.com, ಸ್ಯಾಮ್ಸಂಗ್ ಎಕ್ಸ್‌ಕ್ಲೂಸಿವ್ ಸ್ಟೋರ್‌ಗಳು, Amazon.in, Flipkart.com ಹಾಗೂ ಭಾರತದಾದ್ಯಂತ ಇರುವ ಪ್ರಮುಖ ಚಿಲ್ಲರೆ ಮಾರಾಟ ಮಳಿಗೆಗಳ ಮೂಲಕ ಮಾಡಬಹುದು. ಹೊಸ ಫೋಲ್ಡಬಲ್ ಸ್ಮಾರ್ಟ್‌ಫೋನ್‌ಗಳನ್ನು ಪ್ರೀ-ರಿಸರ್ವ್ ಮಾಡುವ ಗ್ರಾಹಕರು, ಸಾಧನವನ್ನು ಖರೀದಿಸುವಾಗ ₹2,799 ಮೌಲ್ಯದ ವಿಶೇಷ ಪ್ರಯೋಜನಗಳನ್ನು ಪಡೆಯಲಿದ್ದಾರೆ.




## ಮೆದುಳು ನಿಷ್ಕ್ರಿಯ ವ್ಯಕ್ತಿಯ ಅಂಗಾಂಗ ದಾನ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಗರದ ಹಾನಗಲ್ಲ ಕುಮಾರೇಶ್ವರ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ದಾಖಲಾಗಿದ್ದ ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಅಂಗಾಂಗಗಳನ್ನು ಕುಟುಂಬ ವರ್ಗದವರು ದಾನಮಾಡಿದ ಅಪೂರ್ವ ಘಟನೆ ನಡೆದಿದೆ.

ಅಪಘಾತದಲ್ಲಿ ತಲೆಗೆ ಗಾಯವಾಗಿ ಕೋಮಾ ಸ್ಥಿತಿಯಲ್ಲಿದ್ದ ಜಿಲ್ಲೆಯ ಮುಧೋಳ ತಾಲ್ಲೂಕಿನ ಜುನ್ನೂರ ಗ್ರಾಮದ 58 ವರ್ಷ ವಯಸ್ಸಿನ ವ್ಯಕ್ತಿಯನ್ನು ಚಿಕಿತ್ಸೆಗಾಗಿ ಬಾಗಲಕೋಟೆಯ ಹಾನಗಲ್ಲ ಶ್ರೀ ಕುಮಾರೇಶ್ವರ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ರೋಗಿಯ ಮೆದುಳು ನಿಷ್ಕ್ರಿಯಗೊಂಡಿರುವುದನ್ನು ಕುಟುಂಬಸ್ಥರಿಗೆ ತಿಳಿಸಿದ ವೈದ್ಯರು ರೋಗಿಯ ಅಂಗಾಂಗ ದಾನ ಮಾಡುವಂತೆ ಕೋರಿದರು.

ವೈದ್ಯರ ಸಲಹೆಗೆ ಸ್ಪಂದಿಸಿದ ಕುಟುಂಬದವರು ಒಪ್ಪಿಗೆ ನೀಡಿದರು. ಅಂಗಾಂಗ ಪಡೆಯುವ ಪ್ರಕ್ರಿಯೆಗೆ ರೋಗಿಯನ್ನು ಬೆಳಗಾಂವಿಯ ಕೆ.ಎಲ್.ಇ ಆಸ್ಪತ್ರೆಗೆ ಕರೆದೊಯ್ಯುವುದು ಅಗತ್ಯವಾಗಿದ್ದರಿಂದ ಎಚ್.ಎಸ್.ಕೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯ ಪ್ರೊಜೆಕ್ಟ್ ಡೈರೆಕ್ಟರ್ ಮತ್ತು ಮಧುಮೇಹ ತಜ್ಞ ಡಾ.ನವೀನ ಚರಂತಿಮಠ ಪೊಲೀಸರ ನೆರವು ಪಡೆದು ಜೀರೋ ಟ್ರಾಫಿಕ್ ವ್ಯವಸ್ಥೆ ಮಾಡಿಕೊಂಡು ಬೆಳಗಾವಿಗೆ ತೆರಳಿ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ.



# ನಾನು ಕೂಡ ನಿಮ್ಮಂತೆ ಸರ್ಕಾರಿ ಶಾಲೆಯಲ್ಲಿ ಓದಿದ್ದು: ಕಾವ್ಯರಾಣಿ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಾನು ಸಹ ನಿಮ್ಮಂತೆ ಸರ್ಕಾರಿ ಶಾಲೆಯಲ್ಲಿ ಓದಿದ್ದು ಇಂದು ನಿಮ್ಮ ಮುಂದೆ ಉಪ ವಿಭಾಗಾಧಿಕಾರಿಯಾಗಿ ನಿಂತಿದ್ದು ತಾವು ಸಹ ಮನಸ್ಸು ಮಾಡಿದರೆ ಹುದ್ದೆಗಳನ್ನು ನಿಮ್ಮ ಜೀವನವನ್ನು ಭವಿಷ್ಯದಲ್ಲಿ ಉನ್ನತ ಮಟ್ಟ ಹುದ್ದೆಯನ್ನು ಶ್ರಮ ಪಟ್ಟಿ ಪಡೆದು ತಮ್ಮ ಜೀವನವನ್ನೇ ಅಲಂಕರಿಸಿ ಕೊಳ್ಳಬಹುದು ಎಂದು ಉಪ ವಿಭಾಗಾಧಿಕಾರಿ ಕಾವ್ಯರಾಣಿ ತಿಳಿಸಿದ್ದಾರೆ.

ನಗರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 2026-27ನೇ ಸಾಲಿನ ಕ್ರೀಡೆ-ಸಾಂಸ್ಕೃತಿಕ-ಎನ್‌ಎಸ್‌ಎಸ್-ಇಎಲ್‌ಸಿ ಕಳೆದ ವರ್ಷ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ನಂತರ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ನಂತರ ಮಾತನಾಡಿ ಇದರಿಂದ ತಮ್ಮ ಹಾಗೂ ಕುಟುಂಬದ ಗೌರವ ಹೆಚ್ಚಾಗಲಿದ್ದು ಸಮಾಜವು ಸಹ ತಮ್ಮನ್ನು ಗೌರವಿಸುತ್ತದೆ. ವಿದ್ಯಾರ್ಥಿಗಳಾದ ತಾವು ತಮ್ಮ ಸಮಯವನ್ನು ವ್ಯರ್ಥ ಮಾಡದೆ ಸಾಮಾಜಿಕ ಜಾಲತಾಣಗಳಿಗೆ ಹೆಚ್ಚು ಸಮಯವನ್ನು ನೀಡದೆ ಮತ್ತು ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ಇಂದಿನಿಂದಲೇ ತಮ್ಮ ವಿದ್ಯಾಭ್ಯಾಸದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವಂತೆ ಕರೆ ನೀಡಿದರು.



ನಂತರ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಸುಧಾಮಣಿ ಎನ್. ಬಿ ರವರು ಮಾತನಾಡಿ ನಮ್ಮ ಕಾಲೇಜಿನಲ್ಲಿ ವಿಜ್ಞಾನ ವಿಭಾಗಕ್ಕೆ ಸೇರುವ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಎಲ್ಲಾ ವಿಭಾಗದ ಹೆಣ್ಣು ಮಕ್ಕಳಿಗೆ ಉಚಿತ ಪ್ರವೇಶಾತಿ ನೀಡಲಾಗಿದ್ದು ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಉಚಿತ ಪಠ್ಯಪುಸ್ತಕಗಳನ್ನು ನೀಡಲಾಗುತ್ತಿದ್ದು ವಿದ್ಯಾರ್ಥಿಗಳು ಈ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಮಾನ್ಯ ಉಪ ವಿಭಾಗಾಧಿಕಾರಿಗಳು ಸೂಚಿಸಿದ ಹಾಗೆ ವಿದ್ಯಾರ್ಥಿಗಳಾದ ತಾವು ಎಲ್ಲರೂ ಶಿಸ್ತು ಮತ್ತು ಸಂಯಮವನ್ನು ರೂಢಿಸಿಕೊಂಡು ಉತ್ತಮ ಶಿಕ್ಷಣವನ್ನು ಪಡೆಯುವುದರ ಮೂಲಕ ಸಮಾಜದಲ್ಲಿ ಸತ್ಪ್ರಜೆಯಾಗಿ ಗೌರವದಿಂದ ಬಾಳಬೇಕೆಂದು ಸಲಹೆ ನೀಡಿದರು. ಕಾಲೇಜು ಅಭಿವೃದ್ಧಿ ಸಮಿತಿ ಹಾಗೂ ಶಿಕ್ಷಕರಿಂದ ವತಿಯಿಂದ ಉಪ ವಿಭಾಗಾಧಿಕಾರಿ ಕಾವ್ಯಾರಾಣಿ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಸಾಂಸ್ಕೃತಿಕ ಕಾರ್ಯದರ್ಶಿಯಾದ ಡಾ..ರಮೇಶ್ ಉಪನ್ಯಾಸಕರಾದ ಡಾ. ಜಯಕುಮಾರ್ ಎಲ್ಲರನ್ನು ,ಗೀತಾ ಬಿ. ಎಂವಿಜಯಕುಮಾರ್ ಹಿರಿಯ ಉಪನ್ಯಾಸಕರಾದ ಚೆಲುವೆ ಅರಸ್, ಧರಣೇಂದ್ರಪ್ರಸಾದ್, ಧರ್ಮೇಗೌಡ, ಗ್ರಂಥಪಾಲಕರಾದ ಸೈಯದ್ ಮುದಸ್ಸಿರ್ ಮತ್ತು ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಮತ್ತು ಎಲ್ಲಾ ವಿದ್ಯಾರ್ಥಿಗಳು ಹಾಜರಿದ್ದರು.

# ಬರ ಜಿಲ್ಲೆ ಘೋಷಿಸಿ, ರೈತರ ಸಾಲ ಮನ್ನಾಕ್ಕೆ ಆಗ್ರಹಿಸಿ ಪಾದಯಾತ್ರೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕರ್ನಾಟಕ ರಾಜ್ಯದ ಕಲ್ಯಾಣ ಕರ್ನಾಟಕ ಕಲಬುರ್ಗಿ ಜಿಲ್ಲೆಗೆ ಮುಂಗಾರು ಮಳೆ ಆಗದೆ ರೈತರು ಕಂಗಾಲಾಗಿರುವ ಪ್ರಯುಕ್ತ ಬರಗಾಲ ಎಂದು ಘೋಷಿಸಿ ಎಲ್ಲ ರೈತರಿಗೆ ಬರ ಪರಿಹಾರ ಸಾಲಮನ್ನಾ ಮಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಿಂದ ಹಣ ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಶನಿವಾರ ನವ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ನಗರದ ಗಂಜ್ ಪ್ರದೇಶದ ನಗರೇಶ್ವರ ಶಾಲಾ ಆವರಣದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ರೈತರು ಪ್ರತಿಭಟನಾ ಮೆರವಣಿಗೆ ಮಾಡಿದರು.

ಪ್ರತಿಭಟನೆಕಾರರು ನಂತರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿ, ಕರ್ನಾಟಕ ರಾಜ್ಯದ ಹಾಗೂ ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ಮುಂಗಾರು ಮಳೆ ಆಗದೆ ರೈತರು ಬಹಳ ಕಷ್ಟದಲ್ಲಿದ್ದಾರೆ ಅಲ್ಲಲಿ ಸ್ವಲ್ಪ ಸ್ವಲ್ಪ ಮಳೆಯಾದರೂ ಕೂಡ ಬಿತ್ತನೆ ಮಾಡಿದ ರೈತರಿಗೆ ಎಲ್ಲ ನಾಟಿಗೆ, ಸಸಿಗಳು ಕೂಡಾ ಒಣಗಿ ಹೋಗಿವೆ ಹಾಗೂ ದನಕರುಗಳಿಗೆ ಮೇವು ನೀರು ಇಲ್ಲದೆ ಬಹಳ ಕಷ್ಟದಲ್ಲಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಸುಮಾರು 3ರಿಂದ 4 ವರ್ಷಗಳಿಂದ ಸತತ ಅತಿ ವೃಷ್ಟಿ ಹಾಗೂ ಅನಾವೃಷ್ಟಿಗಳಿಂದ ರೈತರಿಗೆ ತುಂಬಲಾಗದ ಹಾನಿಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸರಿಯಾದ ಸಮಯಕ್ಕೆ ಎಲ್ಲ ರೈತರಿಗೆ ಬರ ಪರಿಹಾರ ಹಾಗೂ ಸಾಲ ಮನ್ನಾ ಮಾಡಬೇಕು ಎಂದು ಅವರು ಒತ್ತಾಯಿಸಿದರು.



ರಾಜ್ಯದಲ್ಲಿ ಇಷ್ಟೆಲ್ಲ ಭೀಕರ ಬರಗಾಲ ಪರಿಸ್ಥಿತಿ ಗಂಭೀರವಾಗಿದ್ದರೂ ಕೂಡ ಇಲ್ಲಿಯವರೆಗೂ ಬರಗಾಲವೆಂದು ಘೋಷಣೆ ಮಾಡಿಲ್ಲ ಮತ್ತು ಪರಿಹಾರ ಕೂಡ ಘೋಷಣೆ ಮಾಡಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದಿಂದ ಎನ್‌ಡಿಆರ್‌ಎಫ್ ಹಣ ಬಿಡುಗಡೆ ಮಾಡಲು ಅವರು ಆಗ್ರಹಿಸಿದರು.

ಸಂಘದ ರಾಜ್ಯಾಧ್ಯಕ್ಷ ದಯಾನಂದ್ ಪಾಟೀಲ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾಜಿ ಸಚಿವ ಎಸ್.ಕೆ. ಕಾಂತಾ, ಜಗದೇವಪ್ಪ ಪಾಟೀಲ್, ಭಗವಂತರಾವ್ ಪಾಟೀಲ್, ಮಹೇಶ್ ಕಡೇಚೂರ್, ಡಾ. ಶಿವಲಿಂಗಪ್ಪ ಗೌಳಿ, ನಾಗೇಂದ್ರಪ್ಪಾ ಆರ್. ದಂಡೋತಿಕರ್, ಶಿವಾನಂದ್ ಮಠಪತಿ, ಉಮಾಪತಿ ಪಾಟೀಲ್, ಶಾಂತಲಿಂಗಪ್ಪ ಪಡಶೆಟ್ಟಿ, ಅಮರ್ ಝುಳಕಿ, ಶರಣಗೌಡ ಬೆಳಗುಂಪಿ, ಮುಕುಂದರೆಡ್ಡಿ, ನಾಗಮ್ಮ ಬಬಲಾದ್, ಸರಸ್ವತಿ ಮಠಪತಿ ಕಪನೂರ್, ಭೀಮಶೆಟ್ಟಿ ಮುಕ್ಕಾ, ಮಂಜುನಾಥ ಧೋತ್ತರಗಾಂವ್, ಶಿವಲಿಂಗ ಪಾಟೀಲ್ ಟೆಂಗಳಿ, ನಾಗವೇಣಿ ಮಠಪತಿ, ಶಿವರಾಜ್ ಗುತ್ತೇದಾರ್, ಗುಂಡಪ್ಪ ಪಟ್ಟಣ್, ರಾಜಶೇಖರ್ ಕಲಬುರ್ಗಿ, ಶಿವಶರಣಪ್ಪ ಫರತಾಬಾದ್, ಉಮೇಶ್ ಬಸವಪಟ್ಟಣ, ಸುನೀಲ್ ಇನಾಂದಾರ್ ಹೀರಾಪೂರ್ ಮುಂತಾದವರು ಪಾಲ್ಗೊಂಡಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222

PRGI NO. 120927
(RNINO:KARKAN/2011/48371)